ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 14 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 355 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ಮಿತ್ರ ಭಾನುವಾರ 14 ಏಪ್ರಿಲ್ 2024

ಜ್ಞಾನೋದಯ ಪಿಯು ಕಾಲೇಜಿಗೆ ಶೇ.99ರಷ್ಟು ಫಲಿತಾಂಶ



ಸಮರ್ಥ್ ಶಾರದಾ ಯಶಸ್ವಿನಿ ಚಂದ್ರಿಕಾ ಪ್ರಥಮ್ ಪ್ರಿಯದರ್ಶಿನಿ

ಮೈಸೂರು,ಏ.13–ಮೈಸೂರಿನ ಜ್ಞಾನೋದಯ ಪದವಿ ಪೂರ್ವ ಕಾಲೇಜಿಗೆ 2023–24ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 99ರಷ್ಟು ಫಲಿತಾಂಶ ಬಂದಿದೆ.

ಕಾಲೇಜಿನ 194 ವಿದ್ಯಾರ್ಥಿಗಳ ಪೈಕಿ 94 ಮಂದಿ ಅತ್ಯುನ್ನತ ಶ್ರೇಣಿ, 88 ಮಂದಿ ಪ್ರಥಮ ಶ್ರೇಣಿ, 9 ಮಂದಿ ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು, ಶೇ. 50ರಷ್ಟು ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಸಮರ್ಥ್ ಬಿ. 590 (98.3) ಅಂಕಗಳನ್ನು ಗಳಿಸಿ ಕಾಲೇಜಿಗೆ ಪ್ರಥಮ ಹಾಗೂ ರಾಜ್ಯಕ್ಕೆ 9ನೇ ಸ್ಥಾನ ಗಳಿಸಿದ್ದಾನೆ. ಸಂಸ್ಕೃತ ಹಾಗೂ ಗಣಿತ ವಿಷಯಗಳಲ್ಲಿ 100/100 ಅಂಕ ಗಳಿಸಿದ್ದಾನೆ. ಶಾರದಾ ಸಂಜಯ್ ರುದ್ರಪಟ್ಟಣ 584 ಅಂಕ ಪಡೆದು ಕಾಲೇಜಿಗೆ ದ್ವಿತೀಯ ಸ್ಥಾನ ಗಳಿಸಿದ್ದಾಳೆ. ಸಂಸ್ಕೃತ, ರಸಾಯನಶಾಸ್ತ್ರ ಮತ್ತು ಗಣಿತಶಾಸ್ತ್ರದಲ್ಲಿ 100/100 ಅಂಕ ಪಡೆದಿದ್ದಾಳೆ. ಯಶಸ್ವಿನಿ ಸುರೇಶ್ (582), ಚಂದ್ರಿಕಾ ಆರ್. (580), ಪ್ರಥಮ್ ಆದಿತ್ಯ ಮೋಹನ್ (579), ಪ್ರಿಯದರ್ಶಿನಿ ಎಲ್. (571), ಭೂಮಿಕಾ (578), ಅಪೇಕ್ಷಾ (577), ಪುನೀತಾ ಎಸ್.ಶಂಕರ್ (577), ಭಾರ್ಗವಿ ಜ್ಞಾನಪ್ರಕಾಶ್ (572), ಪ್ರಿಯಾಂಕ ಎ. (571), ವಾಸುದೇವ ಎಸ್.ನಂಜನಗೂಡು (571), ಕಾರ್ತಿಕ್ ಎಸ್. (570), ಕಶ್ವಿಸುರೇಶ್ (570) ಶೇಕಡ 95ಕ್ಕಿಂತ ಹೆಚ್ಚು ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್'ಗೆ ಮೈಸೂರಿನ ಬಾಲಕ ವಿಹಾನ್ ಪ್ರವೇಶ



ಮೈಸೂರು, ಏ.13–ಮೈಸೂರಿನ ಅಕ್ಷರ ಪ್ರಿ–ಸ್ಕೂಲ್‌ನ 3 ವರ್ಷ 6 ತಿಂಗಳಿನ ವಿದ್ಯಾರ್ಥಿ ವಿಹಾನ್ 'ಐಬಿಆರ್ ಅಚೀವರ್' ಆಗಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಪ್ರವೇಶ ಪಡೆದಿದ್ದಾರೆ.

ಈತ 25 ಶ್ಲೋಕಗಳು, 20 ಇಂಗ್ಲೀಷ್ ನರ್ಸರಿ ರೈಮ್ಸ್, 2 ನೀತಿ ಕಥೆಗಳು, 8 ಪ್ಲಾನೆಟ್ಸ್ (ಗ್ರಹಗಳು), 15 ಸಾಮಾನ್ಯ ಜ್ಞಾನ ಪ್ರಶ್ನೆಗಳಿಗೆ ಉತ್ತರಿಸುವ, 12 ವಾಹನಗಳನ್ನು ಗುರುತಿಸುವ, 12 ಹಣ್ಣು, 12 ತರಕಾರಿಗಳು, 12 ಪ್ರಾಣಿಗಳು, ದೇಹದ 39 ಭಾಗಗಳು, 12 ಪಕ್ಷಿಗಳು, 12 ಬಣ್ಣಗಳು, 12 ಆಕಾರಗಳು ಮತ್ತು 50 ಇನ್ನಿತರೆ ಪದಾರ್ಥಗಳು, ದೇಶದ 28 ರಾಜ್ಯಗಳು, ವಾರದ ದಿನಗಳು ಮತ್ತು ವರ್ಷದ ತಿಂಗಳುಗಳನ್ನು ಗುರುತಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಮಾರ್ಚ್ 21, 2024ರಂದು ಇಂಡಿಯಾ ಬುಕ್ ಈತನ ಹೆಸರನ್ನು ದೃಢಪಡಿಸಿದೆ.

ಸೆಪ್ಟೆಂಬರ್ 19, 2020 ರಂದು ಜನಿಸಿದ ವಿಹಾನ್, ಕುಶಾಲನಗರದ ಲೆವಿಸ್ತಾ ನೌಕರ ಮತ್ತು ಮೈಸೂರಿನ ಜೆ.ಪಿ.ನಗರದ ನಿವಾಸಿ ಆರ್. ಮಂಜುನಾಥ್ ಮತ್ತು ಎಂ.ಜಿ. ಮಾನಸ ಅವರ ಸುಪುತ್ರ.

ರೋಡ್ ಶೋ ವೇಳೆ ಕಲ್ಲು ತೂರಾಟ
ಆಂಧ್ರ ಸಿಎಂ ಜಗನ್ ಮೋಹನ್ ರೆಡ್ಡಿಗೆ ಗಾಯ



ವಿಜಯವಾಡ: ದೇಶಾದ್ಯಂತ ಲೋಕಸಭಾ ಚುನಾವಣೆಯ ಪ್ರಚಾರದ ಕಾವು ದಿನದಿಂದ ದಿನಕ್ಕೆ ಬಿರುಸು ಪಡೆಯುತ್ತಿರುವಂತೆಯೇ ಕೆಲವು ಕಡೆಗಳಲ್ಲಿ ಅಹಿತಕರ ಘಟನೆಗಳು ವರದಿಯಾಗುತ್ತಿವೆ. ನೆರೆಯ ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಶನಿವಾರ ಸಂಜೆ ರೋಡ್ ಶೋ ವೇಳೆ ದುಷ್ಕರ್ಮಿಗಳು ತೂರಿದ ಕಲ್ಲಿನಿಂದ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಗಾಯಗೊಂಡಿದ್ದಾರೆ.

'ಮೇಮಂತ ಸಿದ್ಧಂ' ಬಸ್ ಯಾತ್ರೆ ವೇಳೆಯಲ್ಲಿ ಈ ಘಟನೆ ನಡೆದಿದ್ದು, ಸಿಎಂ ಜಗನ್ ಮೋಹನ್ ರೆಡ್ಡಿ ಅವರ ಎಡಗಣ್ಣಿನ ಮೇಲ್ಭಾಗದಲ್ಲಿ ಗಾಯವಾಗಿರುವ ಫೋಟೋ, ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಪ್ರಾಥಮಿಕ ಚಿಕಿತ್ಸೆ ಪಡೆದ ಬಳಿಕ ಸಿಎಂ ಜಗನ್ ಬಸ್ ಯಾತ್ರೆಯನ್ನು ಮುಂದುವರಿಸಿದರು. ಈ ಘಟನೆ ಹಿಂದೆ ಎದುರಾಳಿ ಟಿಡಿಪಿ ಪಕ್ಷದ ಕೈವಾಡವಿದೆ ಎಂದು ವೈಎಸ್‌ಆರ್‌ಪಿ ನಾಯಕರು ಆರೋಪಿಸಿದ್ದಾರೆ.

85 ವರ್ಷ ಮೇಲ್ಪಟ್ಟವರು, ಅಂಗವಿಕಲರಿಂದ ಮನೆಗಳಲ್ಲಿ ಮತದಾನ ಆರಂಭ



ಮೈಸೂರು,ಏ.13(ಆರ್‌ಕೆ)–ಮೈಸೂರು ಜಿಲ್ಲಾಡಳಿತದ ವತಿಯಿಂದ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಗಳ ನೇತೃತ್ವದಲ್ಲಿ ಇಂದಿನಿಂದ 85 ವರ್ಷ ಮೇಲ್ಪಟ್ಟ ಹಾಗೂ ಶೇ.40ಕ್ಕಿಂತ ಹೆಚ್ಚು ಅಂಗವೈಕಲ್ಯತೆವುಳ್ಳ ವಿಶೇಷಚೇತನರ ಮನೆಗಳಿಗೆ ತೆರಳಿ ಮತದಾನ ಮಾಡಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಗಿದೆ.

ಇಂದಿನಿಂದ ಏಪ್ರಿಲ್ 17ರವರೆಗೆ ಹೋಂ ಓಟಿಂಗ್ ವ್ಯವಸ್ಥೆ ಮಾಡಲಾಗಿದ್ದು, ಮೊದಲ ದಿನವಾದ ಇಂದು ಮೈಸೂರಿನ ಕೆಆರ್, ಚಾಮುಂಡೇಶ್ವರಿ ಹಾಗೂ ಎನ್‌ಆರ್ ವಿಧಾನಸಭಾ ಕ್ಷೇತ್ರದಲ್ಲಿ ಮನೆ ಮನೆ ಮತದಾನ ಪ್ರಕ್ರಿಯೆ ನಡೆಸಲಾಯಿತು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಶತಾಯುಷಿಗಳು, ಹಿರಿಯ ನಾಗರಿಕರು (85 ವರ್ಷ ಮೇಲ್ಪಟ್ಟವರು) ಹಾಗೂ ಅಂಗವಿಕಲರಿಗೆ ಅವರು ವಾಸವಿರುವ ಸ್ಥಳಕ್ಕೇ ತೆರಳಿ ಮತ ಚಲಾಯಿಸಲು ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅಧಿಕಾರಿಗಳನ್ನು ನಿಯೋಜಿಸಿದ್ದಾರೆ.

ಅವರು ಇಂದು ಈ ಮೊದಲೇ ಗುರ್ತಿಸಿರುವ ಅಂಗವಿಕಲರು ಹಾಗೂ 85 ವರ್ಷ ಮೇಲ್ಪಟ್ಟ ಮತದಾರರ ಮನೆಗೆ ತೆರಳಿ ಹಕ್ಕು ಚಲಾಯಿಸಲು ಅವಕಾಶ ಕಲ್ಪಿಸಿಕೊಟ್ಟರು. ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ 271 ಮಂದಿ 85 ವರ್ಷದ ಮೇಲ್ಪಟ್ಟವರನ್ನು ಗುರುತಿಸಿದ್ದು, ಆ ಪೈಕಿ 260 ಮಂದಿ ಮತ ಚಲಾಯಿಸಿದ್ದಾರೆ. 7 ಮಂದಿ ಸಾವನ್ನಪ್ಪಿದ್ದು, 4 ಮಂದಿ ಗೈರಾಗಿದ್ದಾರೆ. ಉಳಿದಂತೆ 20 ಮಂದಿ ವಿಕಲಚೇತನರು ಇಂದು ಮತದಾನ ಮಾಡಿದ್ದಾರೆ.

ಚಾಮುಂಡೇಶ್ವರಿಯಲ್ಲಿ 196 ಮಂದಿ 85 ವರ್ಷದವರ ಪೈಕಿ 93 ಮಂದಿ, 68 ಅಂಗವಿಕಲರ ಪೈಕಿ 43 ಮಂದಿ ಮತ ಚಲಾಯಿಸಿದ್ದಾರೆ. ಹಾಗೆಯೇ ಎನ್‌ಆರ್ ಕ್ಷೇತ್ರದಲ್ಲಿ 85 ವರ್ಷ ಮೇಲ್ಪಟ್ಟ 112 ಮಂದಿ ಪೈಕಿ 107 ಮಂದಿ ಮತದಾನ ಮಾಡಿದ್ದಾರೆ. ಓರ್ವ ಮೃತಪಟ್ಟಿದ್ದು, ನಾಲ್ವರು ಗೈರು ಹಾಜರಾಗಿದ್ದಾರೆ. ಕ್ಷೇತ್ರದಲ್ಲಿರುವ ಎಲ್ಲಾ 20 ಮಂದಿ ವಿಕಲಚೇತನರು ಇಂದು ಮನೆಗಳಲ್ಲಿ ಹಕ್ಕು ಚಲಾಯಿಸಿದ್ದಾರೆ.

ಅಧಿಕಾರಿಗಳು ಬ್ಯಾಲೆಟ್ ಪೇಪರ್ ಮತ್ತು ಬಾಕ್ಸ್ ಸಮೇತ ಮನೆಗಳಿಗೆ ತೆರಳಿ ಮತ ಚಲಾವಣೆ ಮಾಡಿಸಿ ಸೂಕ್ತ ದಾಖಲೆಗಳೊಂದಿಗೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಒಪ್ಪಿಸಿದ್ದಾರೆ. ಉಳಿದ ಕ್ಷೇತ್ರಗಳಲ್ಲೂ ಏಪ್ರಿಲ್ 17ರವರೆಗೆ ವೇಳಾಪಟ್ಟಿಯನ್ವಯ ಮತದಾನ ಪ್ರಕ್ರಿಯೆ ನಡೆಯಲಿದೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಒಟ್ಟು 2,475 ಮಂದಿ 85 ವರ್ಷ ಮೇಲ್ಪಟ್ಟವರು ಹಾಗೂ 918 ವಿಶೇಷಚೇತನ ಮತದಾರರನ್ನು ಗುರ್ತಿಸಲಾಗಿದೆ.

ವಚನಕಾರ ದೇವರ ದಾಸಿಮಯ್ಯ ಜಯಂತಿ ಆಚರಣೆ



ಮೈಸೂರು ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾಮಂದಿರದ ಸುಚಿತ್ರ ಗ್ಯಾಲರಿಯಲ್ಲಿ ವಚನಕಾರರಾದ ದೇವರ ದಾಸಿಮಯ್ಯ ಜಯಂತಿಯನ್ನು ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸರಳವಾಗಿ ಆಚರಿಸಲಾಯಿತು. ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್, ಸಮುದಾಯದ ಮುಖಂಡರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜೆಡಿಎಸ್‌ಗೆ ನೇಮಕ



ಮೈಸೂರು: ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷರನ್ನಾಗಿ ಮೂರನೇ ಅವಧಿಗೆ ಎಸ್.ಪ್ರಕಾಶ್ ಪ್ರಿಯದರ್ಶನ್ ಅವರನ್ನು ಜೆಡಿಎಸ್ ಪಕ್ಷದ ನಗರಾಧ್ಯಕ್ಷ ಕೆ.ಟಿ. ಚಲುವೇಗೌಡ ನೇಮಕ ಮಾಡಿ ಆದೇಶಿಸಿದ್ದಾರೆ.

ದಕ್ಷ ಪದವಿ ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ

ಮೈಸೂರು, ಏ.13– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ದಕ್ಷ ಪಿಯು ಕಾಲೇಜಿನ ವಿದ್ಯಾರ್ಥಿಗಳು ಅದ್ಭುತ ಸಾಧನೆ ಮಾಡಿ, ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಪರೀಕ್ಷೆಗೆ ಹಾಜರಾದ 272ರಲ್ಲಿ 127 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ. 126 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 14 ಮಂದಿ ನೂರಕ್ಕೆ ನೂರು ಅಂಕ ಗಳಿಸಿದ್ದಾರೆ. ಸಾಧನೆಗೈದ ವಿದ್ಯಾರ್ಥಿಗಳನ್ನು ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿದೆ.

ಜಿಲ್ಲಾದ್ಯಂತ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕ್ರಮ
ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಭಯ



ಡಾ.ಕೆ.ವಿ.ರಾಜೇಂದ್ರ

ಮೈಸೂರು,ಏ.13(ಆರ್‌ಕೆ)–ಬೇಸಿಗೆ ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿರುವುದರಿಂದ ಜಿಲ್ಲಾಡಳಿತವು ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಈಗಾಗಲೇ ಪೂರೈಸುತ್ತಿರುವ ಕುಡಿಯುವ ನೀರಿನ ಸಂಪರ್ಕ ಜಾಲವನ್ನು ಸದೃಢಪಡಿಸಲಾಗಿದ್ದು, ಕೆಟ್ಟು ನಿಂತಿರುವ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಲಾಗಿದೆ. ಅತೀ ಆಳದಲ್ಲಿರುವ ಕೊಳವೆ ಬಾವಿಗಳಿಂದ ಬರುವ ನೀರನ್ನು ಪರೀಕ್ಷಿಸಿ ಕುಡಿಯಲು ಯೋಗ್ಯವಾಗಿಲ್ಲದಿದ್ದರೆ ಆ ನೀರನ್ನು ಬಳಸದಿರುವಂತೆ ಫಲಕ ಹಾಕಿ ಮುಚ್ಚಿಸಲಾಗಿದೆ ಎಂದು ತಿಳಿಸಿದರು.

ತೀವ್ರ ಕೊರತೆ ಉಂಟಾಗಿದೆ ಎಂಬ ದೂರುಗಳು ಬಂದ ಸ್ಥಳಗಳಲ್ಲಿ ಹೊಸ ಬೋರ್‌ವೆಲ್ ಕೊರೆಸಿ ನೀರು ಪೂರೈಸಲು ಕ್ರಮ ವಹಿಸಿದ್ದೇವೆ. ಅಗತ್ಯ ಬಿದ್ದಲ್ಲಿ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು ನೀರು ಸರಬರಾಜು ಮಾಡುತ್ತಿದ್ದೇವೆ.

ಅನಿವಾರ್ಯವೆನಿಸಿದರೆ ಟ್ಯಾಂಕರ್ ಮೂಲಕ ಸಪ್ಲೈ ಮಾಡಲು ಈಗಾಗಲೇ ಟೆಂಡರ್ ಪ್ರಕ್ರಿಯೆ ಮಾಡಿ ಟ್ಯಾಂಕರ್‌ಗಳನ್ನು ಸಿದ್ಧಗೊಳಿಸಲಾಗಿದೆ.

ಎಲ್ಲಿಯಾದರೂ ಜನ–ಜಾನುವಾರುಗಳಿಗೆ ನೀರಿನ ಕೊರತೆ ಉಂಟಾಗಿದ್ದರೆ, ದೂರು ನೀಡಲು ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಕಚೇರಿಯಲ್ಲಿ ಟೋಲ್‌ಫ್ರೀ ಸಹಾಯವಾಣಿ ಕೇಂದ್ರ ತೆರೆದು ಮಾಹಿತಿ ಸಂಗ್ರಹಿಸಲು ವ್ಯವಸ್ಥೆ ಮಾಡಲಾಗಿದೆ. ನೀರಿನ ಸಮರ್ಪಕ ನಿರ್ವಹಣೆಗಾಗಿ ಅಧಿಕಾರಿಗಳನ್ನು ನಿಯೋಜಿಸಿ ಜವಾಬ್ದಾರಿ ವಹಿಸಲಾಗಿದ್ದು, ಈವರೆಗೆ ತೀವ್ರ ಸಮಸ್ಯೆ ಎದುರಾಗಿಲ್ಲ ಎಂದಿರುವ ಜಿಲ್ಲಾಧಿಕಾರಿಗಳು, ಈ ಸಂಬಂಧ ಯಾರೂ ಆತಂಕಪಡಬೇಕಾಗಿಲ್ಲ ಎಂದಿದ್ದಾರೆ.





ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಆಯೋಜಿಸಿರುವ 'ಬೇಸಿಗೆ ಬಂಡಿ' ಬೇಸಿಗೆ ಶಿಬಿರಕ್ಕೆ ವಿಶೇಷ ರೀತಿ ಚಾಲನೆ ನೀಡಲಾಯಿತು. ಈ ವೇಳೆ ಜಾನಪದ ನೃತ್ಯ ಹಾಗೂ ಎತ್ತಿನ ಗಾಡಿಗಳಲ್ಲಿ ಶಿಬಿರದ ಮಕ್ಕಳು ಮೆರವಣಿಗೆ ತೆರಳಿದರು. ರಾಮಕೃಷ್ಣ ವೃತ್ತದಿಂದ ಆರಂಭವಾದ ಮೆರವಣಿಗೆ ಶಾರದಾದೇವಿನಗರದ ನಿವೇದಿತಾ ಪಾರ್ಕಿನಲ್ಲಿ ಸಮಾಗಮಗೊಂಡಿತು. ನೈಪುಣ್ಯ ಸಂಸ್ಥೆಯ ಅಧ್ಯಕ್ಷ ಆರ್.ರಘು, ಅಕಾಡೆಮಿಕ್ ಡೀನ್ ಶ್ರೀಮತಿ ವಿಜಯ ಅಯ್ಯರ್ ಇನ್ನಿತರರು ಭಾಗವಹಿಸಿದ್ದರು.

ಉಚಿತ ಕಂಪ್ಯೂಟರ್ ತರಬೇತಿ

ಮೈಸೂರು,ಏ.13–ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಶಿಕ್ಷಣ ಹೊಂದಿರುವ ಕಟ್ಟಡ ಕಾರ್ಮಿಕರ ಮಕ್ಕಳು, ಬೀದಿಬದಿ ವ್ಯಾಪಾರಿಗಳ ಮಕ್ಕಳು, ಪೌರಕಾರ್ಮಿಕರ ಮಕ್ಕಳು ಮತ್ತು ಆಟೋರಿಕ್ಷಾ ಚಾಲಕರ ಮಕ್ಕಳಿಗಾಗಿ ಉಚಿತ ಕಂಪ್ಯೂಟರ್ ತರಬೇತಿ ಆಯೋಜಿಸಲಾಗಿದೆ. ತರಬೇತಿಯಲ್ಲಿ ಕಂಪ್ಯೂಟರ್ ಫಂಡಮೆಂಟಲ್ಸ್, ಕನ್ನಡ ನುಡಿ, ಟೈಪಿಂಗ್, ಟ್ಯಾಲಿ, ಸಿ, ಸಿ++, ಪೈಥಾನ್ ಮುಂತಾದ ವಿಷಯಗಳ ಕುರಿತು ನುರಿತ ತರಬೇತುದಾರರಿಂದ ಪ್ರಾಯೋಗಿಕ ತರಗತಿಗಳಿರುತ್ತವೆ. ಮಾಹಿತಿಗೆ 9964790442, 8310306882

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಭೀಮ ಬಳಗ, ಕಲ್ಪತರು ಚಾರಿಟಬಲ್ ಟ್ರಸ್ಟ್:** ಡಾ.ಬಿ.ಆರ್. ಅಂಬೇಡ್ಕರ್‌ರವರ 133ನೇ ಜನ್ಮ ದಿನಾಚರಣೆ ಮತ್ತು ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಮಧುಮೇಹ ತಜ್ಞ ಡಾ.ವಿ.ಲಕ್ಷ್ಮೀನಾರಾಯಣ್, ಹಿರಿಯ ಪ್ರಾಧ್ಯಾಪಕ ಪ್ರೊ.ಎನ್.ಚಿನ್ನಸ್ವಾಮಿ ಸೋಸಲೆ ಅವರಿಂದ ಅಂಬೇಡ್ಕರ್ ಭಾರತದಲ್ಲಿ ನಾವೂ–ನೀವು ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ, ಅಧ್ಯಕ್ಷತೆ: ಭೀಮ ಬಳಗ ಅಧ್ಯಕ್ಷ ಷಣ್ಮುಖ, ಉಪಸ್ಥಿತರು: ಟ್ರಸ್ಟ್ ಅಧ್ಯಕ್ಷ ಡಾ.ಅಮ್ಮಸಂದ್ರ ಸುರೇಶ್, ಸ್ಥಳ: ಅಶೋಕಪುರಂ ಪೊಲೀಸ್ ಠಾಣೆ ಎದುರು, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಶೀತದ ತಲೆನೋವು, ತಲೆಭಾರ, ಮೂಗು ಕಟ್ಟುವುದು, ಇತರೆ ಶೀತದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಬೆಳಗ್ಗೆ 9 ರಿಂದ.

■ **ಪಿರಮಿಡ್ ಸ್ಪಿರಿಚುವಲ್ ಸೊಸೈಟೀಸ್ ಮೂವ್‌ಮೆಂಟ್, ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ:** ಶ್ರೀ ಕಾವೇರಿ ಪಿರಮಿಡ್ ಧ್ಯಾನ ಶಿಬಿರ, ಸ್ಥಳ: ಶ್ರೀ ಕಾವೇರಿ ಪಿರಮಿಡ್ ಧ್ಯಾನ ಕೇಂದ್ರ, ಬೆಳಗ್ಗೆ 9 ರಿಂದ.

■ **ಡಾ.ಬಿ.ಆರ್.ಅಂಬೇಡ್ಕರ್ ಹಿತರಕ್ಷಣಾ ಸಮಿತಿ, ಪಡುವಾರಹಳ್ಳಿ:** ಡಾ.ಬಿ.ಆರ್. ಅಂಬೇಡ್ಕರ್‌ರವರ 133ನೇ ಜನ್ಮದಿನದ ಅಂಗವಾಗಿ ವೇಷಭೂಷಣ ಸ್ಪರ್ಧೆ, ಬಹುಮಾನ ವಿತರಣೆ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ, ಪಡುವಾರಹಳ್ಳಿ, ಬೆಳಗ್ಗೆ 9 ರಿಂದ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು:** ಡಾ.ಬಿ.ಆರ್.ಅಂಬೇಡ್ಕರ್‌ರವರ 133ನೇ ಜಯಂತಿ, ಮುಖ್ಯ ಅತಿಥಿಗಳು: ಕಾಲೇಜು ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಮನೋಹರನ್, ಅಧ್ಯಕ್ಷತೆ: ಪ್ರಾಚಾರ್ಯ ಡಾ.ವಸಂತ ಕುಮಾರ್, ಉಪಸ್ಥಿತರು: ನಂಜುಂಡಯ್ಯ, ಅಶ್ವಿನಿ, ಕು. ರಕ್ಷಿತಾ, ಕು.ಜೇನುಶ್ರೀ, ಸ್ಥಳ: ಜಯಲಕ್ಷ್ಮಮ್ಮಣ್ಣಿ ಸಭಾಂಗಣ, ಬೆಳಗ್ಗೆ 9.30ಕ್ಕೆ.


■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಡಾ.ಬಿ.ಆರ್. ಅಂಬೇಡ್ಕರ್‌ರವರ 133ನೇ ಜಯಂತಿ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪಸ್ಥಿತರು: ಕುಲಸಚಿವ ಪ್ರೊ. ಕೆ.ಬಿ.ಪ್ರವೀಣ್, ಸ್ಥಳ: ಬಿಒಎಂ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ:** ಡಾ. ಬಿ.ಆರ್. ಅಂಬೇಡ್ಕರ್‌ರವರ 133ನೇ ಜಯಂತಿ ಅಂಗವಾಗಿ ವಿಶೇಷ ಉಪನ್ಯಾಸ, ಸಾಧಕರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರೊ.ಪಿ.ತಿರುಮಾಳ್, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವ ಡಾ. ಬಸಪ್ಪ, ಅಧ್ಯಕ್ಷತೆ: ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಆರ್. ಇಂದಿರಾ, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಡಾ. ಬಿ.ಆರ್. ಅಂಬೇಡ್ಕರ್ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಭಾರತ ಕಮ್ಯುನಿಸ್ಟ್ ಪಕ್ಷ, ಮೈಸೂರು ಜಿಲ್ಲಾ ಮಂಡಳಿ :** ಸಂವಿಧಾನ, ಪ್ರಜಾತಂತ್ರ, ಬಹುತ್ವ ಭಾರತ ಉಳಿಸಲು 'ರಾಜಕೀಯ ಸಮಾವೇಶ', ಸ್ಥಳ : ಐಡಿಯಲ್ ಜಾವಾ ರೋಟರಿ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ದಲಿತ ಸಂಘರ್ಷ ಸಮಿತಿ:** ಡಾ.ಬಿ.ಆರ್.ಅಂಬೇಡ್ಕರ್‌ರವರ 133ನೇ ಜಯಂತಿ ಅಂಗವಾಗಿ ತೊಲಗಲಿ ಕೋಮುವಾದಿ ಸರ್ವಾಧಿಕಾರಿ ಮೋದಿ ಸರ್ಕಾರ, ರಚಿಸೋಣ ಪ್ರಜಾಪ್ರಭುತ್ವ ಸರ್ಕಾರ ಕುರಿತು ಜನಜಾಗೃತಿ ಅಭಿಯಾನ, ಸ್ಥಳ: ಪುರಭವನ, ಮಧ್ಯಾಹ್ನ 12ಕ್ಕೆ.



ಇಂದಿನ ಪಂಚಾಂಗ

14.04.2024 ಭಾನುವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024ರಿಂದ 26.04.2024 ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ:** ಮಹಾನಾಯಕನಿಗೆ ಮಹಾ ನಮನ, ಅಧ್ಯಕ್ಷತೆ: ನಗರಾಧ್ಯಕ್ಷ ಆರ್.ಮೂರ್ತಿ, ಉಪಸ್ಥಿತರು: ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಉದ್ಘಾಟನೆ: ರಾಜ್ಯಸಭಾ ಸದಸ್ಯ ಚಂದ್ರಶೇಖರ್, ಮುಖ್ಯ ಭಾಷಣ: ಸುಪ್ರೀಂಕೋರ್ಟ್ ನ್ಯಾಯವಾದಿ ದ್ವಾರಕನಾಥ್, ಸ್ಥಳ: ಇಂದಿರಾ ಕಾಂಗ್ರೆಸ್ ಭವನ, ಮಧ್ಯಾಹ್ನ 12ಕ್ಕೆ.

■ **ರಂಗಾಂತರಂಗ, ಮೈಸೂರು:** ಕಲರವ ಮಕ್ಕಳ ಬೇಸಿಗೆ ಶಿಬಿರ, ಉಪಸ್ಥಿತರು: ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಸಲಹೆಗಾರ ಬಸವರಾಜ್ ದೇವನೂರು, ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಸಾಹಿತಿ ನಾ.ದಿವಾಕರ, ನಿರ್ಮಲ ರವಿಶಂಕರ್, ಸ್ಥಳ: ರಂಗಾಂತರಂಗ, ಜೆಎಸ್‌ಎಸ್ ಲಾ ಕಾಲೇಜು ಹಿಂಭಾಗ, ಕುವೆಂಪುನಗರ, ಸಂಜೆ 4ಕ್ಕೆ.

■ **ಮೈಸೂರು ಗ್ರಾಹಕರ ಪರಿಷತ್ :** ಮೈಸೂರು ನಗರಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಆಸ್ಪತ್ರೆ, ಸಾರ್ವಜನಿಕ ಶೌಚಾಲಯ ಸ್ವಚ್ಛತೆ ಹಾಗೂ ಕಲಬೆರಕೆ ಆಹಾರ ತಡೆಗಟ್ಟುವ ಸಂಬಂಧ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಡಾ.ಹರೀಶ್ ಅವರೊಂದಿಗೆ ಸಂವಾದ, ಸ್ಥಳ: ಮೈಸೂರು ಗ್ರಾಹಕ ಪರಿಷತ್ (ಮೈಗ್ರಾಪ) ಕಚೇರಿ ಆವರಣ, ಯಾದವಗಿರಿ, ಸಂಜೆ 4ಕ್ಕೆ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ :** 30ನೇ ವರ್ಷದ ಶ್ರೀ ರಾಮನವಮಿ ಸಂಗೀತೋತ್ಸವ, ಬೆಳಗ್ಗೆ 10.30 ರಿಂದ ಶ್ರೀ ರಾಮ ತಾರಕ ಹೋಮ, ಸಂಜೆ 5.15 ರಿಂದ ಅಮೋಘ್ ನಡದೂರ್–ವಿಕ್ರಮ್ ಭಾರದ್ವಾಜ್ ಅವರಿಂದ ಪಿಟೀಲು ವಾದನ, ಸಂಜೆ 6.15 ರಿಂದ ವಿದ್ವಾನ್ ರಾಹುಲ್ ವೆಲ್ಲಾಲ್ ಅವರಿಂದ ಗಾಯನ, ವಿದ್ವಾನ್ ವೈಭವ್ ರಮಣಿ–ಪಿಟೀಲು, ವಿದ್ವಾನ್ ನಾಗೇಂದ್ರ ಪ್ರಸಾದ್ ಸುಬ್ಬು–ಮೃದಂಗ, ವಿದ್ವಾನ್ ಎಸ್.ಮಂಜುನಾಥ್–ಘಟಂ, ಸ್ಥಳ: ಶ್ರೀಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ.ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 15ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30 ರಿಂದ ಶ್ರೀ ದಶವಾರಾಹಿ ಹೋಮ, ಶ್ರೀ ಲಘುವಾರಾಹಿ, ಶ್ರೀ ಸ್ವಪ್ನವಾರಾಹಿ, ಶ್ರೀ ತಿರಸ್ಕರಣೀ ವಾರಾಹಿ, ಶ್ರೀ ಅಶ್ವಾರೂಢವಾರಾಹಿ, ಶ್ರೀ ಧೂಮ್ರವಾರಾಹಿ, ಶ್ರೀ ಕಿರಾತ ವಾರಾಹಿ, ಶ್ರೀ ವಾರಾಹಿಪರಮೇಶ್ವರಿ, ಶ್ರೀ ಶತ್ರುಸಂಹಾರವಾರಾಹಿ, ಶ್ರೀ ಮಹಾವಾರಾಹಿ, ಶ್ರೀ ವಾರ್ತಾಳಿ, ಶ್ರೀ ಸುಬ್ರಹ್ಮಣ್ಯ ಆವರಣಾಂಗ ಹೋಮ, ಪೂರ್ಣಾಹುತಿ, ಬಲಿಹರಣ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಫೌಂಡೇಷನ್, ಜಯಲಕ್ಷ್ಮಿಪುರಂ.

■ **ರಂಗಾಯಣ :** ಚಿಣ್ಣರ ಮೇಳ–2024, ಸಂಜೆ 5ಕ್ಕೆ ಮಕ್ಕಳ ರಂಗ ತರಬೇತಿ ಶಿಬಿರ 'ಸಮರಸವೇ ಜೀವನ' ಸ್ಥಳ: ವನರಂಗ ಬಯಲು ರಂಗಮಂದಿರ, ರಂಗಾಯಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ನಟರಾಜ್ ಹುಳಿಯಾರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ–ಡಾ.ತೀತೀರ ರೇಖಾವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ– ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, 6.50 ರೈತರಿಗೆ ಸಲಹೆ, 7.15 ಮತ ಹಾಕೋಣ ಬನ್ನಿ–ಮತದಾನ ಜಾಗೃತಿ ಕುರಿತ ಸರಣಿ–ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಶಿಲ್ಪಾನಾಗ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸಿದ್ದಾರೆ–ಜಿ. ಶಾಂತಕುಮಾರ್, 9.40 ನಮ್ಮ ಆರೋಗ್ಯ ಕಾರ್ಯಕ್ರಮ 'ತಲೆನೋವು, ಅರೆತಲೆನೋವಿಗೆ ಆಯುರ್ವೇದ ಪರಿಹಾರ' ಕುರಿತು ಮಂಡ್ಯ ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಉಪಮುಖ್ಯ ವೈದ್ಯಾಧಿಕಾರಿ ಡಾ.ಮಧುಮಾಲತಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕಥೆ ಕೇಳು ಪುಟ್ಟ, ಕಥೆ ಹೇಳುತ್ತಾರೆ–ಕವಿತಾ, 10.30 ಮಕ್ಕಳ ಮಂಟಪ–ಟಿ. ನರಸೀಪುರ ತಾಲೂಕು, ಕೇತುಪುರದ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮಿಶ್ರ ಮಾಧುರ್ಯ, ಮತದಾನಕ್ಕೊಂದು ಪ್ರಶ್ನೆಗೆ ಉತ್ತರ **ಮಧ್ಯಾಹ್ನ :** 12.30 ದೇವರನಾಮ, 12.45 ಜನಪದಸಂಗೀತ, 1.20 ಭಾವಗೀತೆ–ಡಾ. ಸ್ನೇಹಶ್ರೀ, 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ಮುತ್ತಾಮುತ್ತು', 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಭಕ್ತ ಅಂಬರೀಶ, ಪ್ರಸ್ತುತಿ– ಕೂಡ್ಲುವಿನ ಕುತ್ಯಾಳ ಗೋಪಾಲಕೃಷ್ಣ ಯಕ್ಷಗಾನ ತಾಳಮದ್ದಲೆ ತರಬೇತಿ ಕೇಂದ್ರದ ಕಲಾವಿದರು, 6.50 ಕೃಷಿರಂಗ– ತೋರಣ ಹೂರಣ, ಪ್ರಸ್ತುತಿ– ಎನ್. ಕೇಶವ ಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್ –ಪರಾಗ–ಬೇಸಾಯದ ಬದುಕು ಸರಾಗ, ಕೃಷಿ ದರ್ಪಣ, 8.00 'ಹಾದಿಯಲ್ಲಿ ಕಂಡ ಮುಖ'–ಬಾನುಲಿ ಸರಣಿ ಪಂಚತಾರಾ ಹೋಟೆಲಿನ ಮುಂದೆ ಬಿದಿರಿನ ಪಿಟೀಲು ನುಡಿಸುವ ಮೈಸೂರಿನ ಕಲಾವಿದ 'ಸಯ್ಯದ್ ಮೌಲಾ' ಅವರೊಂದಿಗೆ ಸಂವಾದ, ಪ್ರಸ್ತುತಿ–ಅಬ್ದುಲ್ ರಶೀದ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ ಪ್ರಭಾಕರ್ ಕಾಳೆ–ಖಯಾಲ್ (ಆಕಾಶವಾಣಿ ನಾಗ್ಪುರ್ ಕೇಂದ್ರದ ಕೊಡುಗೆ)

■ **ಮೈತ್ರಿ ವಿಶೇಷಚೇತನರ ಶಾಲೆ :** ಸಮಾರೋಪ ಸಮಾರಂಭ, ಗೌರವ ಅತಿಥಿಗಳು : ವೀಣಾ ಅಶೋಕ್, ಶುಭಾ ಸಂಜಯ್ ಅರಸ್, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 5ಕ್ಕೆ.

■ **ಪ್ರಜ್ಞಾಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್:** ಡಾ.ಬಿ.ಆರ್.ಅಂಬೇಡ್ಕರ್‌ರವರ 133ನೇ ಜನ್ಮ ದಿನಾಚರಣೆ ಅಂಗವಾಗಿ ವಿಚಾರ ಸಂಕಿರಣ, ಉದ್ಘಾಟನೆ: ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ, ಅಂಬೇಡ್ಕರ್ ಗೀತೆ ಬಿಡುಗಡೆ: ಅಂಬೇಡ್ಕರ್ ಸಂಶೋಧನಾ ಕೇಂದ್ರದ ಸಲಹೆಗಾರ ಬಸವರಾಜ ದೇವನೂರ, ಅಧ್ಯಕ್ಷತೆ: ಸಾಹಿತಿ ಪ್ರೊ.ಎಸ್. ಶಿವರಾಜಪ್ಪ, ಮುಖ್ಯ ಅತಿಥಿಗಳು: ಡಾ.ಎನ್.ಚಿನ್ನಸ್ವಾಮಿ ಸೋಸಲೆ, ಮಾಜಿ ಮೇಯರ್ ಪುರುಷೋತ್ತಮ್, ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್, ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷ ಭಾನುಮೋಹನ್, ಟ್ರಸ್ಟ್ ಅಧ್ಯಕ್ಷ ಸೋಸಲೆ ಸಿದ್ದರಾಜು, ಸ್ಥಳ: ವಿಶ್ವಮೈತ್ರಿ, ಬುದ್ಧ ವಿಹಾರ, ಸಂಜೆ 5.30ಕ್ಕೆ.

■ **ನಟನ ರಂಗಶಾಲೆ:** ರಂಗಭೂಮಿ ಡಿಪ್ಲೋಮಾ ವಿದ್ಯಾರ್ಥಿಗಳಿಂದ ಸ್ಥಾವರವೂ ಜಂಗಮ ನಾಟಕ ಪ್ರದರ್ಶನ, ನಿರ್ದೇಶನ : ಮಂಡ್ಯ ರಮೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ವಿಜಯನಗರ 3ನೇ ಹಂತ ಸಿ ಬ್ಲಾಕಿನ ಪಾರ್ಕ್ ನಂ.8ರ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ :** ಬೆಳಗ್ಗೆ 8.30ಕ್ಕೆ ಡಾ.ಬಿ.ಆರ್.ಜಯಂತಿ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಉದ್ಘಾಟನೆ: ನಯನ ಕುಮಾರ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಮಾಲೀಕ ಕೆ.ಬಿ.ಕುಮಾರ್, ಅಧ್ಯಕ್ಷತೆ: ಸಮಿತಿ ಅಧ್ಯಕ್ಷ ಮಂಜಪ್ಪ, ಸಂಜೆ 5.30ಕ್ಕೆ ಸಾಹಿತಿ ಪ್ರೊ. ಚಿದಾನಂದ ಪರಸಪ್ಪ ಸಿದ್ದಾಶ್ರಮ ಅವರಿಂದ ಡಾ.ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ವಿಚಾರಧಾರೆ, ಸಂಜೆ 6.30ರಿಂದ ಮಕ್ಕಳಿಂದ ನೃತ್ಯ, ಹಾಡುಗಾರಿಕೆ, ಸಂಗೀತ ಕಾರ್ಯಕ್ರಮ, ಸಂಜೆ 7ಕ್ಕೆ ತಾಳವಾದ್ಯ ಪ್ರವೀಣ ಎಂ.ಎಸ್. ಜಯರಾಂ ಮತ್ತು ತಂಡದವರಿಂದ ಕರ್ನಾಟಕ ಅರಮನೆ ವಾದ್ಯಗೋಷ್ಠಿ, ಆಕಾಶವಾಣಿ ಕಲಾವಿದರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಉಪಸ್ಥಿತರು : ಕಾರ್ಯದರ್ಶಿ ಚೈತನ್ಯಕುಮಾರ್, ಖಜಾಂಚಿ ಟಿ.ಟಿ. ರಮೇಶ್, ಸಂಘಟನಾ ಕಾರ್ಯದರ್ಶಿ ಡಾ. ಮೋಹನ್‌ಕುಮಾರ್, ಸ್ಥಳ: ಸಮಿತಿ ಆವರಣ, ವಿಜಯನಗರ 3ನೇ ಹಂತ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ರಾಮೋತ್ಸವ ಕಾರ್ಯಕ್ರಮ, ರಂಜನಿ ಗಾನ ಕಲಾ ಶಾಲೆಯವರಿಂದ ಭಜನೆ, ವಿದುಷಿ ಪಾವನಿ ಭಾರದ್ವಾಜ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಹೆಚ್.ಎಸ್.ತಾಂಡವ ಮೂರ್ತಿ–ಪಿಟೀಲು, ವಿ. ದಾಸಪ್ಪ–ಮೃದಂಗ, ಸ್ಥಳ: ಗಣಪತಿ ದೇವಸ್ಥಾನ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಭಕ್ತವತ್ಸಲ ಶ್ರೀ ರಾಮಕೃಷ್ಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟೆಬಲ್ ವಿಶ್ವಸ್ಥ ಮಂಡಳಿ:** ಶ್ರೀರಾಮೋತ್ಸವ ಅಂಗವಾಗಿ ಸಂಗೀತ ಕಛೇರಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಚಂಪಕ ಅಕಾಡೆಮಿ ಸಂಗೀತ ಶಾಲೆಯ ವಿದುಷಿ ಜಮುನಾ ಶ್ರೀನಿವಾಸ್ ಮತ್ತು ಶಿಷ್ಯವೃಂದದವರಿಂದ ಹಾಡುಗಾರಿಕೆ, ಸ್ಥಳ: ಭಾರತೀ ಸ್ತ್ರೀ ಸಮಾಜದ ಆವರಣ, ಯಾದವಗಿರಿ, ಸಂಜೆ 6ಕ್ಕೆ

■ **ಕರ್ನಾಟಕ ಬುದ್ಧ ಧಮ್ಮ ಸಮಿತಿ:** ಡಾ.ಅಂಬೇಡ್ಕರ್‌ರವರ ಜನ್ಮ ದಿನಾಚರಣೆ, ಸಮ್ಮುಖ: ಪೂಜ್ಯ ಬಿಕ್ಕು ಮನೋರಕ್ಖಿತ ಭಂತೇಜಿ, ಅಧ್ಯಕ್ಷತೆ: ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ, ಮುಖ್ಯ ಅತಿಥಿಗಳು: ವಿಚಾರವಾದಿ ಡಾ.ವಿ.ಲಕ್ಷ್ಮೀನರಾಯಣ, ಪ್ರಾಸ್ತಾವಿಕ ನುಡಿ: ಕರ್ನಾಟಕ ಬುದ್ಧ ಧಮ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್. ಮಹದೇವಪ್ಪ, ಸ್ಥಳ: ಧ್ಯಾನ ಮಂದಿರ, ಡಿ. ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣ, ಸಂಜೆ 6ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್:** ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಜನಪದ ಸಂಭ್ರಮ–2024, ಡಾ.ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪನಮನ, ಉದ್ಘಾಟನೆ : ಹಿರಿಯ ರಂಗನಿರ್ದೇಶಕ ಪ್ರೊ. ಎಸ್.ಆರ್. ರಮೇಶ್, ಅಧ್ಯಕ್ಷತೆ : ಹಿರಿಯ ಕಲಾವಿದ ಮೈಮ್ ರಮೇಶ್, ಮುಖ್ಯ ಅತಿಥಿಗಳು : ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಚಿಕ್ಕಜವರಪ್ಪ, ವಕೀಲ ಎಂ. ಶಿವಪ್ರಸಾದ್, ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 14 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 355 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಕ್ಕರೆ ಅದೇ ಸ್ವರ್ಗ

ಪತ್ನಿ : "ರೀ, ಉಪವಾಸ ಮಾಡುವುದರಿಂದ ಏನೇನು ಲಾಭ ಉಂಟಾಗುತ್ತೆ?"

ಮಂಕ : "ಬೇರೆ ಏನು ಲಾಭ ಆಗುತ್ತೋ ಗೊತ್ತಿಲ್ಲ. ಆ ಒಂದು ದಿನವಾದರೂ ನಾನು ಅಡುಗೆ ಮಾಡೋದು ತಪ್ಪುತ್ತೆ!"

ಮೈಸೂರು ಮಿತ್ರ

ಭಾನುವಾರ, 14 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಕೇಳಿದರೂ, ನೋಡಿದರೂ, ನೆನಪು ಮಾಡಿಕೊಂಡರು, ಹೇಳಿದರೂ, ಅನುಮೋದಿಸಿದರೂ ಧರ್ಮವು ಯಾವಾಗಲೂ ಮನುಷ್ಯನನ್ನು ಕಾಪಾಡುತ್ತದೆ. – ಸುಭಾಷಿತ ಸುಧಾನಿಧಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಯಾರೂ ಇಲ್ಲದ ಊರಿಗೆ ಹೋಗಿ ನೀರು ಮಜ್ಜಿಗೆ ಬಯಸಿದಂತೆ

ನಿಮ್ಮ ಪತ್ರಗಳು

■ ರಾಜ್ಯಪಾಲರು ಧಾರ್ಮಿಕ ದತ್ತಿ ವಿಧೇಯಕ ಪುನರ್‌ಪರಿಶೀಲಿಸಲಿ

ಮಾನ್ಯರೆ,

ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿರುವ ಸಿ ದರ್ಜೆಯ 34000 ದೇವಸ್ಥಾನಗಳು ಆದಾಯದ ಕೊರತೆಯಿಂದಾಗಿ, ಶಿಥಿಲಗೊಂಡಿವೆ. ಕೆಲವು ಸುಣ್ಣ-ಬಣ್ಣ ಕಾಣದೆ ನಿಂತಿವೆ. ಅನ್ನದಾಸೋಹ ಕೂಡ ನಡೆಯುತ್ತಿಲ್ಲ. ಜೊತೆಗೆ ಅಭಿವೃದ್ಧಿ ಕೆಲಸಗಳು ಆಗದೆ ಸಂಕಷ್ಟದ ಸ್ಥಿತಿಯಲ್ಲಿವೆ. ಜೊತೆಗೆ ಈ ದೇವಸ್ಥಾನಗಳಲ್ಲಿ ಸೇವೆ ಸಲ್ಲಿಸುತ್ತಿರುವ 40,000 ಕ್ಕಿಂತ ಹೆಚ್ಚು ಅರ್ಚಕರು ಆರ್ಥಿಕವಾಗಿ ಹಿಂದುಳಿದಿದ್ದು, ಬದುಕಲು ಇತರೆ ಮಾರ್ಗ ಅರಿಯದೆ ಅರ್ಚಕ ವೃತ್ತಿಯನ್ನೇ ನಂಬಿ ಕಾಲ ದೂಡುತ್ತಿದ್ದಾರೆ. ಇವರನ್ನು ಇದೇ ಸಮುದಾಯದ ಯಾವುದೇ ಹೆಣ್ಣು ಮಕ್ಕಳು ಮದುವೆ ಆಗಲು ಬಿಲ್‌ಕುಲ್ ಒಪ್ಪುತ್ತಿಲ್ಲ. ವಿಧಿಯಿಲ್ಲದೆ ಅನಾಥಾಶ್ರಮಗಳ ಹೆಣ್ಣು ಮಕ್ಕಳನ್ನು ಮದುವೆ ಆಗೋಣವೆಂದರೆ ಅಲ್ಲೂ ಕೂಡ ಇವರಿಗೆ ಹೆಣ್ಣುಗಳು ಸಿಗುತ್ತಿಲ್ಲ. ಹಾಗಾಗಿ ಇವರು ಸಮುದಾಯದೊಳಗೆ ಅಸಡ್ಡೆಗೆ, ಅಸಮಾನತೆಗೆ ಒಳಗಾಗಿದ್ದಾರೆ.

ಈ ದುಸ್ಥಿತಿ ಅರಿತ ಸರ್ಕಾರ, ತನ್ನ ಅಧೀನದಲ್ಲಿರುವ 1 ಕೋಟಿಗಿಂತ ಹೆಚ್ಚು ಆದಾಯ ಇರುವ 'ಎ' ದರ್ಜೆಯ 87 ದೇವಸ್ಥಾನಗಳಿಂದ ಶೇ. 10 ರಷ್ಟು ಮತ್ತೆ 10 ಲಕ್ಷಕ್ಕಿಂತ ಹೆಚ್ಚು ಆದಾಯ ಇರುವ 'ಬಿ' ದರ್ಜೆಯ 311 ದೇವಸ್ಥಾನಗಳಿಂದ ಶೇ.5 ರಷ್ಟು ಹಣವನ್ನು ಪಡೆದು, ಆ ಹಣವನ್ನು 'ಸಿ' ದರ್ಜೆಯ ದೇವಸ್ಥಾನಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ಸಂಕಷ್ಟದಲ್ಲಿರುವ ಅರ್ಚಕರಿಗೆ ನೆರವಾಗಲು ದತ್ತಿ ಸಂಸ್ಥೆಗಳ ತಿದ್ದುಪಡಿ ಮಸೂದೆ-2024ರ ವಿಧೇಯಕ ಮಂಡಿಸಿ ವಿಧಾನಮಂಡಲಗಳಲ್ಲಿ ಅಂಗೀಕಾರ ಪಡೆದು ರಾಜ್ಯಪಾಲರ ಅನುಮೋದನೆಗೆ ಕಳುಹಿಸಿರುವುದು ಸಮಂಜಸವಾಗಿದೆ. ಆದರೆ ವಿರೋಧ ಪಕ್ಷಗಳು ಇದನ್ನು ರಾಜಕರಣಗೊಳಿಸಿ ಮಸೀದಿಗಳಿಗೆ, ಚರ್ಚ್‌ಗಳಿಗಿಲ್ಲದ ಕಾನೂನು ಹಿಂದೂ ದೇವಾಲಯಗಳಿಗೇಕೆ ಎಂದು ವಿರೋಧಿಸಿ ಗುಲ್ಲೆಬ್ಬಿಸುವುದು ಎಷ್ಟರ ಮಟ್ಟಿಗೆ ಸರಿ.

ಲಾಭದಾಯಕವಾಗಿರುವ ದೇವಾಲಯಗಳಿಂದ ಪಡೆಯುವ ಕೇವಲ ಶೇ. 5 ಮತ್ತು ಶೇ.10 ರಷ್ಟು ಹಣವನ್ನು ಅನ್ಯ ಉದ್ದೇಶಕ್ಕೆ ವಿನಿಯೋಗಿಸದೆ, ನಷ್ಟದಲ್ಲಿರುವ ದೇವಾಲಯಗಳ ಮತ್ತು ಅಲ್ಲಿನ ಅರ್ಚಕರ ಕಲ್ಯಾಣ ಕಾರ್ಯಗಳಿಗೆ ಮಾತ್ರವೇ ಬಳಸುವುದರಲ್ಲಿ ತಪ್ಪೇನಿದೆ. ಪ್ರಜಾಪ್ರಭುತ್ವದ, ಸಂವಿಧಾನದ ಆಶಯವೇ ಇದು ಅಲ್ಲವೇ? ಘನತೆವೆತ್ತ ರಾಜ್ಯಪಾಲರು ಈ ವಿಧೇಯಕವನ್ನು ಪುನರ್‌ಪರಿಶೀಲಿಸಿ ಅನುಮೋದಿಸುವುದು ಸೂಕ್ತ.

– ಶ್ರೀಧರ ಎಸ್. ಕಲ್ಕುಣಿ, ಕಾವೇರಿನಗರ, ಬೋಗಾದಿ, ಮೈಸೂರು.

■ ತಪ್ಪದೇ ಮತ ಚಲಾಯಿಸಿ

ಮಾನ್ಯರೆ,

ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದು, ಚುನಾವಣೆಯಲ್ಲಿ ಮತ ಚಲಾಯಿಸುವುದು ಈ ದೇಶದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಆದರೆ, ಇತ್ತೀಚಿನ ದಿನಗಳಲ್ಲಿ ಚುನಾವಣೆ ಎಂದರೆ ಯುವಜನತೆಯಲ್ಲಿ ತಾತ್ಸಾರ ಭಾವನೆ ಹೆಚ್ಚಾಗಿದೆ. ನಮ್ಮ ಒಂದು ಮತ ದೇಶದ ಭವಿಷ್ಯ ಬದಲಾಯಿಸಲಾರದು ಎಂಬ ಉದಾಸೀನದಿಂದ ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಲು ಹಿಂದೇಟು ಹಾಕುತ್ತಿದ್ದಾರೆ. ಮತದಾನ ಮಾಡುವುದಕ್ಕಾಗಿ ನೀಡಿದ ರಜೆಯನ್ನೂ ಮೋಜು, ಮಸ್ತಿ ಮಾಡುವುದರಲ್ಲೇ ಕಳೆಯುತ್ತಾರೆ. ಇನ್ನು ದೂರದ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ತಮ್ಮ ಊರುಗಳಿಗೆ ತೆರಳಿ ಮತದಾನ ಮಾಡುವುದೇ ದೊಡ್ಡ ಸಮಸ್ಯೆ. ಆ ದಿನ ರಜೆ ನೀಡಿದ್ದರೂ ಊರಿಗೆ ಬಂದು ಮತದಾನ ಮಾಡುವುದಿಲ್ಲ. ಮತದಾನ ಮಾಡುವುದು ಪ್ರತಿಯೊಬ್ಬ ಮತದಾರರ ಹಕ್ಕು. ನಮ್ಮ ಪ್ರತಿಯೊಂದು ಮತವೂ ದೇಶದ ಉಜ್ವಲ ಭವಿಷ್ಯಕ್ಕೆ ಅಡಿಪಾಯವಿದ್ದಂತೆ. ಮತದಾನ ಮಾಡುವುದು ತುಂಬಾ ಅಗತ್ಯವಿದೆ. ಆದ್ದರಿಂದ ಎಲ್ಲರೂ ತಪ್ಪದೇ ಮತದಾನ ಮಾಡಿ.

– ಎಂ.ಚೈತ್ರ, ಪತ್ರಿಕೋದ್ಯಮ ಮತ್ತು ಸಂವಹನ ಸಮೂಹ ವಿಭಾಗ, ಮೈಸೂರು


■ ರಾಷ್ಟ್ರೀಯ ತನಿಖಾ ದಳ ಕೆಲಸ ಶ್ಲಾಘನೀಯ

ಮಾನ್ಯರೆ,

ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸಿ ಆತಂಕ ಮೂಡಿಸಿದ್ದ ವ್ಯಕ್ತಿಯನ್ನು ಬಂಧಿಸುವ ಮೂಲಕ ರಾಷ್ಟ್ರೀಯ ತನಿಖಾ ದಳ ಅತ್ಯಂತ ಕ್ಲಿಷ್ಟ ಪರಿಸ್ಥಿತಿಯಲ್ಲೂ ದಕ್ಷತೆಯನ್ನು ಮೆರೆದಿದೆ. ಅದಕ್ಕಾಗಿ ಭಾರತದ ಪ್ರಜೆಗಳೆಲ್ಲರೂ ರಾಷ್ಟ್ರೀಯ ತನಿಖಾ ದಳವನ್ನು ಅಭಿನಂದಿಸಲೇಬೇಕು. ಯಾವೊಂದು ಸುಳಿವೂ ಸಿಗದ ಪ್ರಕರಣದಲ್ಲಿ ಆರೋಪಿಗಳನ್ನು ಪತ್ತೆ ಮಾಡುವುದು ಸುಲಭದ ಕೆಲಸವಲ್ಲ.

–ಕೊ.ಸು.ನರಸಿಂಹಮೂರ್ತಿ, ಚಾಮರಾಜಪುರಂ, ಮೈಸೂರು.

■ ಯಾರಿವರು ಯಾರಿವರು ಮಹಾ ನಾಯಕ!



ಮಾನ್ಯರೆ,

ಯಾರಿವರು ಯಾರಿವರು ಮಹಾ ನಾಯಕರಿವರು
ಎಲ್ಲಿ ಹೋರಾಟ ಮಾಡಿದರೂ ತೊಂದರೆ ಇಲ್ಲ
ನಿನ್ನ ನೀ ಮಾರಾಟ ಮಾಡಿಕೊಳ್ಳಬೇಡ
ಜನರ ಮತದ ಮಹತ್ವ ತಿಳಿಸಿದವರು
ನೀಡುವ ಕೈಯಾಗು ಬೇಡುವ ಭಿಕ್ಷುಕನಾಗಬೇಡ ಎಂದವರು
ಅವರೇ ನಮ್ಮ ಮಹಾ ನಾಯಕರು!!.

ಮತದಾನ ಎನ್ನುವುದು
ಮನೆಯ ಮಗಳಿದ್ದಂತೆ
ಅದನ್ನು ಹಣಕ್ಕಾಗಿ ಮಾರಿಕೊಳ್ಳಬೇಡ ಎಂದವರು
ನನ್ನ ಪರ ಜೈಕಾರ ಮಾಡುವುದಕ್ಕಿಂತ ನಾ ತೋರಿದ
ಮಾರ್ಗದಲ್ಲಿ ನಡೆಯಿರಿ ಎಂದವರು
ಅವರೇ ನಮ್ಮ ಮಹಾ ನಾಯಕರು!!.

ರಾಜಕೀಯ ಎಂಬ ಶರೀರಕ್ಕೆ
ಕಾನೂನು ಎಂಬ ಔಷಧಿಯನ್ನು ನೀಡಿದವರು.
ಸಂವಿಧಾನವನ್ನು ರಚಿಸಿದವರು
ಸತ್ತ ಮೇಲೂ ಬದುಕಬೇಕೆಂದವರು
ಅಂದರೆ ಒಂದು ಒಳ್ಳೆಯ ಕೆಲಸ ಓದುವ ಹಾಗೆ ಬರೆ
ಇಲ್ಲವಾದರೆ ನಿನ್ನ ಬಗ್ಗೆ ಬರೆಯುವಂತೆ ಮಾಡಿ ಮಡಿ ಎಂದವರು
ಅವರೇ ನಮ್ಮ ಮಹಾ ನಾಯಕ ಸಂವಿಧಾನ ಶಿಲ್ಪಿ
ಡಾ. ಬಿ ಆರ್ ಅಂಬೇಡ್ಕರ್ ರವರು..

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲ್ಲೂಕು

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.



16. ಡಾ.ಇ.ಎಸ್.ಕೃಷ್ಣಸ್ವಾಮಿ ಅಯ್ಯರ್



ಗೌರಿ ಸತ್ಯ
ಹಿರಿಯ ಪತ್ರಕರ್ತರು

ಇಂದಿನ ತಮಿಳುನಾಡು, ಅಂದರೆ ಅಂದಿಗೆ ಮದ್ರಾಸ್ ರಾಜ್ಯದಲ್ಲಿ ಹುಟ್ಟಿದರೂ ಅನೇಕರು ಮೈಸೂರು ರಾಜರ ಸಂಸ್ಥಾನದಲ್ಲಿ ಹಲವಾರು ಪ್ರಮುಖ ಸ್ಥಾನಗಳಲ್ಲಿದ್ದರು. ಇಲ್ಲಿಯೇ ಸೇವೆ ಸಲ್ಲಿಸಿ ಜನ ಮನ್ನಣೆ-ಕೀರ್ತಿ ಗಳಿಸಿದರು. ಕೊನೆಗೆ ಮೈಸೂರು ರಾಜ್ಯದಲ್ಲಿ, ಅದರಲ್ಲೂ ಪ್ರಮುಖವಾಗಿ ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಲ್ಲಿ ನೆಲೆಸಿ ಮೈಸೂರಿನವರೇ ಆಗಿಬಿಟ್ಟರು. ಅಂತಹವರಲ್ಲಿ ಒಬ್ಬ ಗಣ್ಯರು ಇ.ಎಸ್. ಕೃಷ್ಣಸ್ವಾಮಿ ಅಯ್ಯರ್.

ಡಾ. ಕೃಷ್ಣಸ್ವಾಮಿ ಅಯ್ಯರ್ ಮೈಸೂರಿನಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿ ಹಲವಾರು ಪ್ರಮುಖ ಹುದ್ದೆಗಳಲ್ಲಿದ್ದರು. ಸಿವಿಲ್ ಸರ್ಜನ್, ವೈದ್ಯಕೀಯ ಮತ್ತು ಸ್ಯಾನಿಟರಿ ಆಫೀಸರ್ ಮತ್ತು ಜೈಲುಗಳ ಸೂಪರಿಂಟೆಂಡೆಂಟ್ ಆಗಿ ಕಾರ್ಯ ನಿರ್ವಹಿಸಿದರು. ದಿವಾನ್ ಶೇಷಾದ್ರಿ ಅಯ್ಯರ್ ಅವರ ಪ್ರವಾಸದಲ್ಲಿ ಅವರ ಜೊತೆಯಲ್ಲಿಯೂ ಇದ್ದರು.

ಇವರ ಜನ್ಮಸ್ಥಳ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ ಈರೋಡು. ಇವರು ಹುಟ್ಟಿದ್ದು 1863ರಲ್ಲಿ. ಮಧುರೈನ ನೇಟಿವ್ ಹೈಸ್ಕೂಲಿನಲ್ಲಿ ಶಿಕ್ಷಣ ಪಡೆದ ನಂತರ ಕುಂಭಕೋಣಂ ಕಾಲೇಜಿನಲ್ಲಿ ಬಿ.ಎ. ಪದವಿ ಗಳಿಸಿದರು. ಶಿಕ್ಷಣವನ್ನು ಅಲ್ಲಿಗೇ ಸೀಮಿತಗೊಳಿಸದೆ ಮುಂದುವರಿಸಿ ಮದ್ರಾಸ್ ವೈದ್ಯಕೀಯ ಕಾಲೇಜಿಗೆ ಸೇರಿ ವೈದ್ಯ ಶಿಕ್ಷಣವಾದ ಎಂ. ಸಿ. ಮತ್ತು ಸಿ. ಎಂ. ಪದವಿ ಪಡೆದು ವೈದ್ಯ ವೃತ್ತಿಗೆ ಇಳಿದರು.

1888ರ ಜೂನ್ 4ರಂದು ಅವರು ಮೈಸೂರಿನಲ್ಲಿ ಸೇವೆಗೆ ಸೇರಿಕೊಂಡರು. ಮೊದಲಿಗೆ ಅವರಿಗೆ ಸಬ್-ಅಸಿಸ್ಟೆಂಟ್ ಸರ್ಜನ್ ಹುದ್ದೆ ನೀಡಲಾಯಿತು. ಈ ಹುದ್ದೆಯನ್ನು ವಹಿಸಿಕೊಂಡು ಬೆಂಗಳೂರಿನ ಸೇಂಟ್ ಮಾರ್ಥಾ ಆಸ್ಪತ್ರೆಯಲ್ಲಿ ಅವರು ಕಾರ್ಯಾರಂಭ ಮಾಡಿದರು. ನಂತರದ ವರ್ಷವೇ ಅವರಿಗೆ ಬಡ್ತಿ ಸಿಕ್ಕಿ ಅವರನ್ನು ಅಸಿಸ್ಟೆಂಟ್ ಸರ್ಜನ್ ಹುದ್ದೆಗೇರಿಸಲಾಯಿತು. ಹಾಸನವನ್ನು ಕೇಂದ್ರವನ್ನಾಗಿ ಹೊಂದಿ ಅವರು ಕಡೂರು ಸಿವಿಲ್ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಲಾರಂಭಿಸಿದರು. ಅಲ್ಲದೆ ಅದೇ ವರ್ಷದ ಜೂನ್ ತಿಂಗಳಿಂದ ಅವರನ್ನು ಹಾಸನ ಟೌನ್ ಮುನಿಸಿಪಾಲಿಟಿಯ ಪದನಿಮಿತ್ತ ಉಪಾಧ್ಯಕ್ಷರನ್ನಾಗಿ ನೇಮಿಸಲಾಯಿತು. 1893-94ರಲ್ಲಿ ಶಿವಮೊಗ್ಗದಲ್ಲಿ ಉಸ್ತುವಾರಿ ಸಿವಿಲ್ ಸರ್ಜನ್ ಆಗಿ ಕೆಲಸ ನಿರ್ವಹಿಸಲು ನೇಮಿಸಲಾಯಿತು.

ನಂತರದ ವರ್ಷದಲ್ಲಿ ಡಾ. ಕೃಷ್ಣಸ್ವಾಮಿ ಅಯ್ಯರ್ ಅವರು ಬೆಂಗಳೂರಿಗೆ ಹಿಂತಿರುಗಿ ಅಲ್ಲಿನ ಕೇಂದ್ರ ಕಚೇರಿಯಲ್ಲಿ ವೈದ್ಯಕೀಯ ವಿಭಾಗದ ಪ್ರಭಾವಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು. ಅದೇ ವರ್ಷದ ಅಕ್ಟೋಬರ್ ತಿಂಗಳಲ್ಲಿ ಅವರಿಗೆ ಎರಡನೇ ದರ್ಜೆಗೆ ಮತ್ತೆ ಬಡ್ತಿ ದೊರೆತು ಮೈಸೂರಿನ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಅವರು ಉತ್ತರ ಭಾರತದ ಪ್ರವಾಸ ಕೈಗೊಂಡಾಗ ಅವರ ವೈದ್ಯಾಧಿಕಾರಿಯಾಗಿ ಅವರೊಡನೆ ಪ್ರವಾಸ ಮಾಡಿ ಬಹುತೇಕ ಸ್ಥಳಗಳಿಗೆ ಭೇಟಿ ನೀಡಿದರು. ಪ್ರವಾಸದ ನಂತರ ಅವರು ತಮ್ಮ ಹಿಂದಿನ ಹುದ್ದೆಗೆ ಹಿಂತಿರುಗಿದರು. ಅವರು ಸೇವೆಗೆ ಸೇರಿದ ಹತ್ತು ವರ್ಷಗಳ ನಂತರ 1898ರಲ್ಲಿ ಬೆಂಗಳೂರಿನ ಆರೋಗ್ಯಾಧಿಕಾರಿಯಾಗಿ ನೇಮಿಸಲ್ಪಟ್ಟರು.

1897-1923ರ ಅವಧಿಯಲ್ಲಿ ರಾಜ್ಯದಲ್ಲಿ ಪ್ಲೇಗ್ ಪದೇ ಪದೆ ಕಾಣಿಸಿಕೊಂಡು ಸಾವಿರಾರು ಜನರು ಈ ಭೀಕರ ರೋಗಕ್ಕೆ ತುತ್ತಾಗುತ್ತಿದ್ದರು. ಮೊದಲಿಗೆ 1898ರ ಆಗಸ್ಟ್ 12ರಂದು ಅದು ಬೆಂಗಳೂರಿನಲ್ಲಿ ಕಾಣಿಸಿಕೊಂಡು ರಾಜ್ಯದ ಎಲ್ಲೆಡೆ ಭಯಂಕರವಾಗಿ ವ್ಯಾಪಿಸಲು ಪ್ರಾರಂಭಿಸಿತು. ಪ್ರಾರಂಭದಲ್ಲಿ ಅದು ಬೆಂಗಳೂರು, ಮೈಸೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಗೆ ಹಬ್ಬಿತು. ಮೊದಲ ವರ್ಷದಲ್ಲಿಯೇ ಈ ಖಾಯಿಲೆ 15,000 ಜನಕ್ಕೆ ತಗುಲಿ 12,000ಕ್ಕೂ ಹೆಚ್ಚು ಜನ ಈ ಮಾರಣಾಂತಿಕ ಅಂಟುರೋಗಕ್ಕೆ ತುತ್ತಾದರು. ಅಂದು ಪ್ಲೇಗ್ ರೋಗಕ್ಕೆ ಹೆಚ್ಚು ಜನ ತುತ್ತಾಗಲು ಕಾರಣ ಕಡಿಮೆ ವೈದ್ಯಕೀಯ ಸೌಕರ್ಯಗಳು. ಇದರಿಂದಾಗಿ ಪ್ಲೇಗ್ ತೀವ್ರವಾಗಿ ಹರಡಿ ಹೆಚ್ಚು ಜನರನ್ನು ಆಹುತಿ ತೆಗೆದುಕೊಳ್ಳುತ್ತಿತ್ತು. ಸರ್ಕಾರ ಪ್ರತ್ಯೇಕ ಆಸ್ಪತ್ರೆಗಳನ್ನು ತೆರೆಯುವುದೂ ಸೇರಿದಂತೆ ಎಲ್ಲ ರೀತಿಯ ಕ್ರಮಗಳನ್ನು ತುರ್ತಾಗಿ ಪ್ರಾರಂಭಿಸಿತು. ತೀವ್ರವಾಗಿ ವ್ಯಾಪಿಸಿದ್ದ ಬೆಂಗಳೂರು, ಮೈಸೂರು ಜಿಲ್ಲೆಗಳಿಗೆ ಮತ್ತು ಕೋಲಾರ ಚಿನ್ನದ ಗಣಿಗೆ ವಿಶೇಷಾಧಿಕಾರಿಗಳನ್ನು ನೇಮಿಸಿ ಪ್ಲೇಗ್ ವ್ಯಾಪಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಅವರಿಗೆ ವಿಶೇಷ ಅಧಿಕಾರ ನೀಡಲಾಯಿತು. ಮೊದಲಿಗೆ ಕೋಲಾರ ಜಿಲ್ಲೆಗೆ ಡಾ.ಅಯ್ಯರ್ ಅವರನ್ನು ನೇಮಿಸಲಾಯಿತು. ನಂತರ ಬೆಂಗಳೂರಿನಲ್ಲಿ ಆರೋಗ್ಯಾಧಿಕಾರಿ ಮತ್ತು ಮುಖ್ಯ ಪ್ಲೇಗ್ ವಿಶೇಷಾಧಿಕಾರಿಯ ಎರಡೂ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಯಿತು.

ಕೋಲಾರ ಚಿನ್ನದ ಗಣಿಯಲ್ಲಿ ಪದೇ ಪದೆ ಪ್ಲೇಗ್ ವ್ಯಾಪಿಸುತ್ತಿದ್ದು ಅಲ್ಲಿನ ಚಿನ್ನದ ಗಣಿಯ ಕಾರ್ಮಿಕರುಗಳಿಂದಾಗಿ. ಚಿನ್ನದ ಗಣಿಗಳನ್ನು ಜಾನ್ ಟೇಲರ್ ಕಂಪನಿ 1880ರಲ್ಲಿ ತೆಗೆದುಕೊಂಡು ಚಿನ್ನವನ್ನು ತೆಗೆಯಲಾರಂಭಿಸಿತ್ತು. 1898ರ ವೇಳೆಗೆ ಚಿನ್ನದ ಗಣಿ ಪ್ರಾರಂಭಿಸಿ 18 ವರ್ಷಗಳಾಗಿತ್ತು. ಅದು ಉನ್ನತ ಸ್ಥಿತಿಯಲ್ಲಿದ್ದಾಗ ಅಲ್ಲಿ ಸುಮಾರು 30,000 ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಒಂದೇ ಪ್ರದೇಶದಲ್ಲಿ ಇಷ್ಟು ಜನ ಅಲ್ಪ ಸ್ವಲ್ಪ ಸೌಕರ್ಯಗಳಿಂದ ವಾಸ ಮಾಡುತ್ತಿದ್ದುದು ಪ್ಲೇಗ್ ಹಬ್ಬಲು ಕಾರಣವಾಗುತ್ತಿತ್ತು.

ಮಾರನೆಯ ವರ್ಷ 1899ರಲ್ಲಿ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಪ್ಲೇಗ್ ಖಾಯಿಲೆ ಜಾಸ್ತಿಯಾಗಲಾರಂಭಿಸಿದಾಗ ಅವರನ್ನು ವಿಶೇಷ ಪ್ಲೇಗ್ ಅಧಿಕಾರಿಯನ್ನಾಗಿ ಮತ್ತೆ ಕೋಲಾರ ಚಿನ್ನದ ಗಣಿಗೆ ವರ್ಗಾವಣೆ ಮಾಡಲಾಯಿತು. ಅಲ್ಲಿ ಪ್ಲೇಗ್ ವ್ಯಾಪಿಸದೆ ಇರಲು ಅಗತ್ಯ ಕ್ರಮಗಳನ್ನು ಪ್ರಾರಂಭಿಸಿದ ನಂತರ ಅದೇ ವರ್ಷದ ಅಂತ್ಯದ ವೇಳೆಗೆ ಅವರು ಮತ್ತೆ ಬೆಂಗಳೂರಿಗೆ ಹಿಂತಿರುಗಿಬರಬೇಕಾಯಿತು. ಇಲ್ಲಿ ಬ್ಯಾಕ್ಟೀರಿಯೋಲಾಜಿಕಲ್ ಲ್ಯಾಬೊರೇಟರಿಯಲ್ಲಿ ಕರ್ತವ್ಯಕ್ಕೆ ನೇಮಿಸಲಾಯಿತು. ಅಲ್ಪ ಕಾಲದಲ್ಲೇ 1900ರಲ್ಲಿ ಅವರಿಗೆ ಸಿವಿಲ್ ಸರ್ಜನ್ ಹುದ್ದೆಗೆ ಮೇಲ್ಬಡ್ತಿ ದೊರೆತು ಬೆಂಗಳೂರಿನ ಪ್ರಧಾನ ಪ್ಲೇಗ್ ಅಧಿಕಾರಿ ಹಾಗೂ ಆರೋಗ್ಯಾಧಿಕಾರಿಯಾಗಿ ನೇಮಕಗೊಂಡರು.

1901ರಲ್ಲಿ ಅವರು ಮತ್ತೆ ಕೋಲಾರ ಚಿನ್ನದ ಗಣಿಗೆ ಹಿಂತಿರುಗಬೇಕಾಯಿತು. ಅಲ್ಲಿ 1906ರವರೆಗೆ ಸಿವಿಲ್ ಸರ್ಜನ್ ಆಗಿ ಕರ್ತವ್ಯ ನಿರ್ವಹಿಸಿ ಮತ್ತೆ ಬೆಂಗಳೂರಿಗೆ ಹಿಂತಿರುಗಿ ಜಿಲ್ಲಾ ವೈದ್ಯಾಧಿಕಾರಿ ಮತ್ತು ಸ್ಯಾನಿಟರಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಬೇಕಾಯಿತು. 1907ರಲ್ಲಿ ಸರ್ಕಾರ ಅವರನ್ನು ಮತ್ತೆ ವರ್ಗಾವಣೆ ಮಾಡಿ ಮೈಸೂರಿನ ಸಿವಿಲ್ ಸರ್ಜನ್ ಮತ್ತು ಜಿಲ್ಲಾ ವೈದ್ಯಕೀಯ ಮತ್ತು ಸ್ಯಾನಿಟರಿ ಅಧಿಕಾರಿಯನ್ನಾಗಿ ನೇಮಿಸಿತು. ಜಿಲ್ಲಾ ವೈದ್ಯಾಧಿಕಾರಿಯಾಗಿದ್ದಾಗಲೇ ಡಾ.ಕೃಷ್ಣಸ್ವಾಮಿ ಅಯ್ಯರ್ ಅವರು ದಿವಾನ್ ಶೇಷಾದ್ರಿ ಅಯ್ಯರ್ ಅವರ ಜೊತೆಯಲ್ಲಿ ಉತ್ತರ ಭಾರತದ ಬಹುತೇಕ ಸ್ಥಳಗಳಿಗೆ ಭೇಟಿ ನೀಡಿದ್ದುದಲ್ಲದೆ ಅವರು ಸಿಲೋನ್ ಮತ್ತು ಬರ್ಮಾ ದೇಶಗಳಿಗೂ ಭೇಟಿ ನೀಡಿದರು. ಅವರಿಗೆ ಎರಡನೇ ದರ್ಜೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನೂ ನೀಡಲಾಗಿತ್ತು.

ಹೀಗೆ ತಮ್ಮ ಸಾಮರ್ಥ್ಯದಿಂದಾಗಿ ಪದೇ ಪದೆ ವರ್ಗಾವಣೆಗೊಂಡು ವರ್ಗಾವಣೆಗೊಂಡ ಸ್ಥಳಗಳಲ್ಲಿ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿ ಡಾ. ಕೃಷ್ಣಸ್ವಾಮಿ ಅಯ್ಯರ್ ರಾಜ್ಯದ ಸೇವೆಯಿಂದ ನಿವೃತ್ತರಾದರು.

ಸಿದ್ದರಾಮಯ್ಯ ಸರ್ಕಾರದ ಭವಿಷ್ಯದ ಬದಲು ದೇವೇಗೌಡರು ಜೆಡಿಎಸ್ ಭವಿಷ್ಯ ಹೇಳಲಿ...!?

ಬೆಂಗಳೂರು,ಏ.13(ಕೆಎಂಶಿ)-ಸಿದ್ದರಾಮಯ್ಯ ಸರ್ಕಾರದ ಅಸ್ತಿತ್ವದ ಬಗ್ಗೆ ಭವಿಷ್ಯ ನುಡಿಯುವುದಕ್ಕಿಂತ ಜೆಡಿಎಸ್ ಭವಿಷ್ಯವನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಬಹಿರಂಗಪಡಿಸಲಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಲೇವಡಿ ಮಾಡಿದರು.

ನಮ್ಮ ಸರ್ಕಾರದ ಬಳಿ 136ಕ್ಕೂ ಹೆಚ್ಚು ಶಾಸಕರಿದ್ದಾರೆ, ಗೌಡರು, ನಮ್ಮ ಭವಿಷ್ಯ ಹೇಳುವುದು ಬೇಡ, ಅವರ ರಾಜಕೀಯ ಭವಿಷ್ಯವನ್ನೇ ಹೇಳಿಕೊಂಡರೆ ಸಾಕು ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆ ನಂತರ ಜೆಡಿಎಸ್ ತನ್ನ ಅಸ್ತಿತ್ವ ಉಳಿಸಿಕೊಳ್ಳಲಿದೆಯೇ, ಇಲ್ಲವೇ, ಬಿಜೆಪಿಯಲ್ಲಿ ವಿಲೀನವಾಗಲಿದೆಯೇ ಎಂಬುದನ್ನು ಬಹಿರಂಗಪಡಿಸಲಿ ಎಂದರು.

ಅವರ ಪಕ್ಷದ ಭವಿಷ್ಯವೇ ಅವರ ಕೈಯ್ಯಲ್ಲಿಲ್ಲ, ನಮ್ಮ ಗ್ಯಾರಂಟಿ ಬಗ್ಗೆ ಮಾತನಾಡಲು ಬರುತ್ತಾರೆ, ನಾವು ಬಲಿಷ್ಠರಾಗಿದ್ದೇವೆ, ಬೇರೆಯವರು ನಮ್ಮ ಭವಿಷ್ಯ ಹೇಳುವುದು ಬೇಡ. ದೇವೇಗೌಡರು ಎಷ್ಟು ಭವಿಷ್ಯ ಕಾಲವನ್ನು ನೋಡಿದ್ದಾರೋ, ನಾನು ಅಷ್ಟೇ ಭವಿಷ್ಯ ಕಾಲವನ್ನು ನೋಡಿದ್ದೇನೆ. ಅವರಿಗೆ 60 ವರ್ಷಗಳ ರಾಜಕೀಯದ ಅನುಭವವಿದ್ದರೆ, ನನಗೆ 40 ವರ್ಷಗಳ ರಾಜಕಾರಣದ ಅನುಭವವಿದೆ. ನಮ್ಮ ಸರ್ಕಾರಕ್ಕೆ 136ಕ್ಕೂ ಹೆಚ್ಚು ಸೀಟುಗಳಿವೆ. ಅವರು ತಮ್ಮ ಪಕ್ಷ ಜೀವಂತವಾಗಿ ಇರುತ್ತದೆಯೋ ಇಲ್ಲವೋ ಎಂಬುದನ್ನು ಮೊದಲು ಹೇಳಲಿ.



ಡಾ.ಅಂಬೇಡ್ಕರ್ ಅವರೇ ಬಂದರೂ ಸಂವಿಧಾನ ಬದಲಾವಣೆ ಮಾಡುವುದಿಲ್ಲ ಎಂಬ ಪ್ರಧಾನಿ ಮೋದಿ ಅವರ ಹೇಳಿಕೆಗೆ, ಪ್ರಧಾನಮಂತ್ರಿ ಸ್ಥಾನದ ಬಗ್ಗೆ ನಮಗೆ ಬಹಳ ಗೌರವವಿದೆ, ಪ್ರಧಾನಮಂತ್ರಿಗಳು ಈ ವಿಚಾರವಾಗಿ ಈಗ ಏಕೆ ಮಾತನಾಡುತ್ತಿದ್ದಾರೋ ಗೊತ್ತಿಲ್ಲ.ಸಂವಿಧಾನ ಬದಲಿಸುತ್ತೇವೆ ಎಂದ ಅವರ ಪಕ್ಷದ ನಾಯಕರುಗಳನ್ನು ಪಕ್ಷದಿಂದ ಏಕೆ ಉಚ್ಚಾಟನೆ ಮಾಡಲಿಲ್ಲ, ಅವರಿಗೆ ಸಂವಿಧಾನದ ಬಗ್ಗೆ ಬದ್ಧತೆ ಇದ್ದರೆ, ಸಂವಿಧಾನ ಬದಲಿಸುತ್ತೇವೆ ಎಂದು ಹೇಳಿದವರನ್ನು ಮೊದಲು ತಮ್ಮ ಪಕ್ಷದಿಂದ ಉಚ್ಚಾಟಿಸಲಿ, ಆಗ ಅವರ ಬದ್ಧತೆಯನ್ನು ನಾವೂ ಒಪ್ಪಬಹುದು. ಬಿಜೆಪಿಗೆ 400 ಸೀಟು ಬಂದರೆ ಸಂವಿಧಾನ ಬದಲಿಸುತ್ತೇವೆ ಎಂದೆಲ್ಲಾ ಅವರ ಪಕ್ಷದ ನಾಯಕರು, ಅಭ್ಯರ್ಥಿಗಳು ಹೇಳುತ್ತಿದ್ದಾರೆ, ಇಷ್ಟು ದಿನ ಈ ವಿಚಾರವಾಗಿ ಮೌನವಾಗಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಡವರು ಸೇರಿದಂತೆ ಎಲ್ಲಾ ವರ್ಗದವರು ಸಂವಿಧಾನಕ್ಕೆ ಅಪಾಯ ಬಂದಿದೆ, ನಮ್ಮ ಹಕ್ಕುಗಳಿಗೆ ಕುತ್ತು ಬಂದಿದೆ ಎಂದು ಧ್ವನಿ ಎತ್ತಿದ ನಂತರ ಇಂತಹ ಹೇಳಿಕೆ ನೀಡಿದ್ದು, ಇದು ಕೇವಲ ರಾಜಕೀಯ ಹೇಳಿಕೆ ಎಂದರು.

ಶ್ರೀ ಕೃಷ್ಣ ಮಿತ್ರ ಮಂಡಳಿ 48ನೇ ವಾರ್ಷಿಕೋತ್ಸವ

ಮೈಸೂರು,ಏ.13(ಎಸ್‌ಪಿಎನ್)-ಶ್ರೀ ಕೃಷ್ಣ ಮಿತ್ರ ಮಂಡಳಿಯ 48ನೇ ವಾರ್ಷಿಕೋತ್ಸವ ಸಮಾರಂಭ ಶುಕ್ರವಾರ ನೆರವೇರಿತು. ಕೃಷ್ಣಧಾಮದ ಶ್ರೀ ಕೃಷ್ಣ ಸಭಾ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮಿ ಉದ್ಘಾಟಿಸಿ, ಶುಭ ಹಾರೈಸಿದರು. ಈ ವೇಳೆ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಲಾಯಿತು. ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಪಿ.ಎಸ್.ರಮೇಶ್, ಉಪಾಧ್ಯಕ್ಷ ಪಿ.ಜಿ.ಪ್ರವೀಣ್, ಕಾರ್ಯದರ್ಶಿ ಸುಧೀರ್ ಆಚಾರ್ಯ, ಶ್ರೀ ಕೃಷ್ಣ ಟ್ರಸ್ಟ್‌ನ ಉಪಾಧ್ಯಕ್ಷ ರವಿಶಾಸ್ತ್ರಿ, ಉಪಾಧ್ಯಕ್ಷ ಪಿ.ಎಸ್.ಶೇಖರ್, ಕಾರ್ಯದರ್ಶಿ ಕೆ.ವಿ.ಶ್ರೀಧರ್ ಇದ್ದರು.

ದೇಶದ ಭದ್ರತೆಗೆ ಕಾಂಗ್ರೆಸ್ ನಡೆ ಅಪಾಯಕಾರಿಯಾಗಿದೆ

●ವಿಪಕ್ಷ ನಾಯಕ ಆರ್.ಅಶೋಕ್ ಟೀಕೆ ●ರಾಮೇಶ್ವರಂ ಕೆಫೆ ಸಣ್ಣ ಸ್ಫೋಟ ಎಂದರು ●ವಿಧಾನಸೌಧದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗಿಲ್ಲ ಎಂದರು ●ಡಿ.ಕೆ. ಸುರೇಶ್ ದೇಶ ಒಡೆಯುವ ಬಗ್ಗೆಯೂ ಮಾತಾಡಿದರು ●ಪ್ರಧಾನಿ ಮೋದಿಯನ್ನು ಹಿಟ್ಲರ್‌ಗೆ ಹೋಲಿಸಿದರು



ಬೆಂಗಳೂರು, ಏ.13(ಕೆಎಂಶಿ)-ಕಾಂಗ್ರೆಸ್ಸಿನ ನಡೆ ದೇಶದ ಭದ್ರತೆಗೆ ಅಪಾಯ ತರುವಂತಿದೆ ಎಂದು ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ಟೀಕಿಸಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತದ ಆರೋಪ ಪಟ್ಟಿ ಬಿಡುಗಡೆ ಮಾಡಿ ಮಾತನಾಡಿದ ಅವರು, ರಾಮೇಶ್ವರಂ ಕೆಫೆ ಸ್ಫೋಟ ಘಟನೆ ಬೆಂಗಳೂರನ್ನು ತಲ್ಲಣಗೊಳಿಸಿದೆ, ದೇಶದ ಜನರು ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಪದೇ ಪದೆ ಭಯೋತ್ಪಾದಕ ಕೃತ್ಯಗಳು ಸಂಭವಿಸುವುದನ್ನು ನೋಡಿದ್ದಾರೆ ಎಂದರು.

> ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಿಟ್ಲರ್‌ಗೆ ಹೋಲಿಸಿದ್ದಾರೆ, ಚುನಾವಣೆ ಸಂದರ್ಭದಲ್ಲಿ ವೈಯಕ್ತಿಕ ಆಪಾದನೆ ಮಾಡುವುದು ಅಪರಾಧ, ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ಕೊಡುತ್ತೇವೆ. ಈ ದೇಶದಲ್ಲಿ ಕಾಂಗ್ರೆಸ್ ಪಕ್ಷವೇ ರಿಯಲ್ ಹಿಟ್ಲರ್, ತುರ್ತು ಪರಿಸ್ಥಿತಿ ಜಾರಿಗೊಳಿಸಿ ಪತ್ರಕರ್ತರನ್ನು ಬಂಧಿಸಿ ಜೈಲಿಗೆ ಹಾಕಿ, ನ್ಯಾಯಾಧೀಶರನ್ನೂ ಬಂಧಿಸುವ ಪ್ರಯತ್ನ ಮಾಡಿ, ವಿರೋಧ ಪಕ್ಷದ ಎಲ್ಲ ನಾಯಕರನ್ನು ಜೈಲಿಗೆ ಅಟ್ಟಿದ್ದರು. ಕಾಂಗ್ರೆಸ್‌ನದು ದೇಶ ವಿಭಜಿಸಿದ ಬ್ರಿಟಿಷರ ಮನಸ್ಥಿತಿಯಂತಿದೆ, ಅದರಿಂದ ಅವರು ಹೊರಗಡೆ ಬಂದಿಲ್ಲ. ಮೋದಿ ಅವರ ಆಡಳಿತದಲ್ಲಿ ಭಯೋತ್ಪಾದನಾ ಕೃತ್ಯಗಳು ಶೇ.90ರಷ್ಟು ಕಡಿಮೆ ಆಗಿವೆ, ಕಾಂಗ್ರೆಸ್ ಆಡಳಿತವಿದ್ದಾಗ ಪ್ರತಿದಿನ ಬಾಂಬ್ ಬ್ಲಾಸ್ಟ್ ಆಗುತ್ತಿತ್ತು, ದಿನವೂ ಎ.ಕೆ.47 ಗನ್‌ಗಳು ಗುಡುಗುತ್ತಿದ್ದವು, ಮೋದಿ ಅವರು ದೇಶದ ಭದ್ರತೆಯ ಕಾವಲುಗಾರ, ರಿಯಲ್ ಹೀರೊ, ಅವರನ್ನು ನೀವು ಡಿಕ್ಟೇಟರ್ ಎನ್ನುವುದನ್ನು ಖಂಡಿಸುತ್ತೇನೆ. **– ಆರ್.ಅಶೋಕ್**

ಕೆಫೆ ಸ್ಫೋಟ ಘಟನೆಗೆ ಸಂಬಂಧಿಸಿದಂತೆ ಎನ್‌ಐಎ ತನಿಖಾ ತಂಡ ಹಲವರನ್ನು ಬಂಧಿಸಿದೆ, ಮುಂದೆ ಆಗಬಹುದಾದ ಹಲವು ಸ್ಫೋಟ ಕೃತ್ಯಗಳನ್ನು ತಡೆಯುವಲ್ಲಿ ಯಶಸ್ವಿಯಾಗಿದೆ, ರಾಜ್ಯದ ಜನತೆ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ, ಎನ್‌ಐಎ ತಂಡಕ್ಕೆ ಅಭಿನಂದನೆಗಳು. ದುರ್ಘಟನೆ ನಡೆದಾಗ ಸ್ಥಳಕ್ಕೆ ತೆರಳಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘಟನೆ ತಿರುಚುವ ಪ್ರಯತ್ನ ಮಾಡಿದ್ದರು, ಇದು ವ್ಯವಹಾರ ಸಂಬಂಧಿತ ಗಲಾಟೆ, ಸಣ್ಣ ಪ್ರಮಾಣದ ಸ್ಫೋಟ ಎಂದಿದ್ದರು, ಪೊಲೀಸರೂ ಅದೇ ಜಾಡಿನಲ್ಲಿ ತನಿಖೆ ನಡೆಸಿದ್ದರು. ಸಚಿವ ದಿನೇಶ್ ಗುಂಡೂರಾವ್ ಬಿಜೆಪಿ ಮೇಲೆ ಆರೋಪ ಮಾಡಿದ್ದರು, ವಿಚಾರಣೆಗೆ ಬಿಜೆಪಿಯವರನ್ನು ಕರೆಯಲಾಗಿದೆ ಎಂಬುದಾಗಿ ಹೇಳಿದ್ದರು, ಮಂತ್ರಿಗಳಾಗಿ ಕಾಮನ್ ಸೆನ್ಸ್ ಬೇಡವೇ, ದೇಶದ ಬಗ್ಗೆ ಕಾಳಜಿ ಇದ್ದರೆ ಸಾಕ್ಷಿ ವಿವರ ತಿಳಿಸಬಾರದಿತ್ತು, ಬಿಜೆಪಿಯವರ ವಿಚಾರಣೆಯಿಂದಲೇ ಸ್ಫೋಟ ನಡೆಸಿದವರ ವಿವರ ತಿಳಿಯಿತು.

ಕಾಂಗ್ರೆಸ್ಸಿನವರು ಪದೇ ಪದೆ ದಿಕ್ಕು ತಪ್ಪಿಸುವ ಕೆಲಸ ಮಾಡಿದ್ದಾರೆ, ಕುಕ್ಕರ್ ಬ್ಲಾಸ್ಟ್ ಆದಾಗಲೂ ಬ್ರದರ್ಸ್ ಎಂದಿದ್ದರು, ಕರ್ನಾಟಕದ ಬ್ರದರ್ಸ್ ಅವರ ಆತ್ಮೀಯ ಸಹೋದರಿ ಮಮತಾ ಬ್ಯಾನರ್ಜಿ ಅವರ ಸೇಫ್ ಜಾಗದಲ್ಲಿ ರಾಮೇಶ್ವರಂ ಕೆಫೆ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ.

ವಿಧಾನಸೌಧದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಕೂಗಿದವರನ್ನು ಬಂಧಿಸಲು ಕಾಂಗ್ರೆಸ್ ಆಡಳಿತಕ್ಕೆ ಒಂದು ವಾರ ಬೇಕಾಯಿತು, 'ಪಾಕಿಸ್ತಾನ ಪರ ಘೋಷಣೆ ಕೂಗಿಲ್ಲ' ಎಂದು ಸಚಿವರೊಬ್ಬರು ಹೇಳಿದ್ದರು, ಬಿಜೆಪಿಯವರದು ಕಾಮಾಲೆ ಕಣ್ಣು ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದರು, ಈಗ ಹೇಳಿ ಯಾರದ್ದು ಕಾಮಾಲೆ ಕಣ್ಣು ಎಂದು ಪ್ರಶ್ನಿಸಿದರು.


ಕಾಂಗ್ರೆಸ್ ಪಕ್ಷದವರಿಗೆ ದೇಶದ ಬಗ್ಗೆ ಕಾಳಜಿ ಇಲ್ಲ, ಕಾಂಗ್ರೆಸ್ ಸಂಸದ ಸುರೇಶ್ ಅವರೇ ದೇಶ ಒಡೆಯುವ ಮಾತುಗಳನ್ನು ಆಡಿದ್ದಾರೆ, ಇವರಿಗೆ ಲೂಟಿ ಹೊಡೆಯಲು ಇನ್ನೊಂದು ದೇಶ ಬೇಕಾಗಿದೆ ಎಂದರು. ಸಂವಿಧಾನದ ವಿಷಯದಲ್ಲಿ ಕಾಂಗ್ರೆಸ್ಸಿನವರು ಇಲ್ಲ ಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ, ಸಂವಿಧಾನವನ್ನು ಯಾರೂ ಬದಲಿಸಲು ಸಾಧ್ಯವಿಲ್ಲ ಎಂದು ಪ್ರಧಾನಿಯವರೇ ಹೇಳಿದ್ದಾರೆ. ಸಂವಿಧಾನ ಮತ್ತು ಡಾ.ಬಾಬಾ ಸಾಹೇಬರಿಗೆ ಗೌರವ ಕೊಟ್ಟವರು ಬಿಜೆಪಿ, ಸಂವಿಧಾನಕ್ಕೆ ಅಗೌರವ ತೋರಿ ತುರ್ತು ಪರಿಸ್ಥಿತಿ ಜಾರಿಗೊಳಿಸಿದವರು ಕಾಂಗ್ರೆಸ್ಸಿನವರು ಎಂದು ಟೀಕಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಏಪ್ರಿಲ್ 14 ಭಾನುವಾರ 2024
ಸಂಪುಟ: 44 | ಸಂಚಿಕೆ: 355 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಇಂದು ಮೈಸೂರಲ್ಲಿ ಮೋದಿ ಮತ ಬೇಟೆ

- ಮೈಸೂರು–ಕೊಡಗು, ಮಂಡ್ಯ, ಚಾಮರಾಜನಗರ, ಹಾಸನ ಗೆಲುವಿನ ಟಾರ್ಗೆಟ್
- ಮಾಜಿ ಪ್ರಧಾನಿ ದೇವೇಗೌಡರೊಂದಿಗೆ ಮೈತ್ರಿ ಅಭ್ಯರ್ಥಿಗಳ ಪರ ಪ್ರಚಾರ



ಮೈಸೂರು, ಏ.13(ಎಸ್‌ಬಿಡಿ)– ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಮೈಸೂರಿನಲ್ಲಿ ಮತ ಬೇಟೆ ನಡೆಸಲಿದ್ದಾರೆ.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ಸಂಜೆ ಆಯೋಜಿಸಲಾಗಿರುವ ಬೃಹತ್ ಬಹಿರಂಗ ಸಮಾವೇಶದಲ್ಲಿ ಮೈಸೂರು–ಕೊಡಗು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಲೋಕಸಭಾ ಕ್ಷೇತ್ರಗಳ ಮೈತ್ರಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮದ ವೇದಿಕೆ ಬಳಿಯೇ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಶಾಸಕ ಟಿ.ಎಸ್.ಶ್ರೀವತ್ಸ, ಬೃಹತ್ ಸಮಾವೇಶದಲ್ಲಿ ಪ್ರಧಾನಿ ಮೋದಿ ಅವರು ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಜಂಟಿ ಚುನಾವಣಾ ಪ್ರಚಾರಕ್ಕೆ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ. ಇದಕ್ಕಾಗಿ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, 30X110 ಅಡಿ ವಿಸ್ತೀರ್ಣದ ಬೃಹತ್ ವೇದಿಕೆ ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು. ಪ್ರಧಾನಿ ಮೋದಿ ಅವರೊಂದಿಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಮಂಡ್ಯ ಕ್ಷೇತ್ರದ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ, ಮಾಜಿ ಸಚಿವ ಸಾ.ರಾ. ಮಹೇಶ್ ಸೇರಿದಂತೆ ಬಿಜೆಪಿ–ಜೆಡಿಎಸ್‌ನ ಹಲವು ಮುಖಂಡರು, ● 9ನೇ ಪುಟಕ್ಕೆ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಬೃಹತ್ ಚುನಾವಣಾ ಪ್ರಚಾರಕ್ಕೆ ಸಜ್ಜಾಗುತ್ತಿರುವ ವೇದಿಕೆ, ಇತರ ಸಿದ್ಧತೆಯನ್ನು ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್, ಶಾಸಕ ಶ್ರೀವತ್ಸ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್ ಮತ್ತಿತರ ಮುಖಂಡರು ಪರಿಶೀಲನೆ ನಡೆಸಿದರು.

ಭಾರಿ ಪೊಲೀಸ್ ಭದ್ರತೆ; ಎಸ್‌ಪಿಜಿ ಕಟ್ಟೆಚ್ಚರ

ಮೈಸೂರು, ಏ.13(ಆರ್‌ಕೆ)– ಪ್ರಧಾನ ಮಂತ್ರಿ ನರೇಂದ್ರ ಮೋದಿ ಭೇಟಿ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಭಾನುವಾರ ಸಂಜೆ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಪ್ರಧಾನಿಗಳು ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಕ್ರಾಫರ್ಡ್ ಭವನದ ಎದುರು ಓವಲ್ ಮೈದಾನದಲ್ಲಿ ಸಿದ್ಧಪಡಿಸಿರುವ ತಾತ್ಕಾಲಿಕ ಹೆಲಿಪ್ಯಾಡ್‌ಗೆ ಆಗಮಿಸಿ, ನಂತರ ಕಾರಿನಲ್ಲಿ ತೆರಳಿ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಬೃಹತ್ ಚುನಾವಣಾ ಸಮಾವೇಶದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೊಂದಿಗೆ ಭಾಗವಹಿಸಿ ಭಾಷಣ ಮಾಡಲಿದ್ದಾರೆ.

ನಂತರ ರಸ್ತೆ ಮೂಲಕ ಓವಲ್ ಮೈದಾನಕ್ಕೆ ತೆರಳಿ, ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣ ತಲುಪಿ, ಸಂಜೆ 6.30ಗಂಟೆಗೆ ವಿಮಾನದಲ್ಲಿ ಮಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಪ್ರಧಾನಿ ಕಚೇರಿ ತಾತ್ಕಾಲಿಕ ● 9ನೇ ಪುಟಕ್ಕೆ

ಮೈಸೂರಲ್ಲಿ ಗೆದ್ದು ಸರ್ಕಾರ ಉಳಿಸಿಕೊಳ್ಳಲು ಸಿಎಂ, ಡಿಸಿಎಂ ಹರಸಾಹಸ

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಯದುವೀರ್ ಪರ ಭರ್ಜರಿ ಪ್ರಚಾರ ನಡೆಸಿದ ಶಾಸಕ ಜಿಟಿಡಿ ವಾಗ್ದಾಳಿ



ಮೈಸೂರು ತಾಲೂಕಿನ ಸಿದ್ದಲಿಂಗಪುರದಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಶಾಸಕ ಜಿ.ಟಿ.ದೇವೇಗೌಡರೊಂದಿಗೆ ಮತಯಾಚನೆ ನಡೆಸಿದರು. ಇವರಿಗೆ ಮುಖಂಡರಾದ ಅರುಣ್‌ಕುಮಾರ್ ಗೌಡ, ಹೇಮಂತ್‌ಕುಮಾರ್ ಗೌಡ ಸಾಥ್ ನೀಡಿದರು.

ಮೈಸೂರು, ಏ.13(ಎಂಟಿವೈ)– ಸರ್ಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವನ್ನು ಗೆಲ್ಲಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ ಎಂದು ಶಾಸಕ ಜಿ.ಟಿ. ದೇವೇಗೌಡರು ಟೀಕಿಸಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದ ಸಾತಗಳ್ಳಿ, ಹಂಚ್ಯಾ, ರಮ್ಮನಹಳ್ಳಿ, ಕಾಮನಕೆರೆಹುಂಡಿ, ಹಳೆ ಕೆಸರೆ, ಬೆಲವತ್ತ, ಕೆ.ಆರ್.ಮಿಲ್, ಸಿದ್ದಲಿಂಗಪುರ, ಕಳಸ್ತವಾಡಿ, ಲಕ್ಷ್ಮೀಪುರ, ನಾಗನಹಳ್ಳಿ, ಶಾದನಹಳ್ಳಿ ಸೇರಿದಂತೆ ವಿವಿಧೆಡೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪರ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಲೇಬೇಕೆಂದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ಪಣ ತೊಟ್ಟಿದ್ದಾರೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಸರ್ಕಾರ ಉಳಿಸಿಕೊಳ್ಳಲು ತಂತ್ರಗಾರಿಕೆ ನಡೆಸುತ್ತಿದ್ದಾರೆ. ● 9ನೇ ಪುಟಕ್ಕೆ





ಬೆಂಗಳೂರು ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣ
ಬಂಧಿತ ಉಗ್ರರಿಬ್ಬರೂ 10 ದಿನ ಎನ್‌ಐಎ ವಶಕ್ಕೆ

ಬೆಂಗಳೂರು, ಏ.13(ಕೆಎಂಶಿ)– ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಘಟನೆಯ ಪ್ರಮುಖ ಉಗ್ರರಾದ ಅಬ್ದುಲ್ ಮತೀನ್ ತಾಹ ಮತ್ತು ಮುಜಾವೀರ್ ಹುಸೇನ್ ಶಾಜೀಬ್‌ನನ್ನು 10 ದಿನಗಳ ಎನ್‌ಐಎ ಕಸ್ಟಡಿಗೆ ಇಂದು ಒಪ್ಪಿಸಲಾಗಿದೆ.

ಆರೋಪಿಗಳ ವೈದ್ಯಕೀಯ ಪರೀಕ್ಷೆ ನಂತರ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಎನ್‌ಐಎ ಕಸ್ಟಡಿಗೆ ನೀಡಿ ಆದೇಶ ಮಾಡಿದರು.

ಮಂಗಳೂರು ಗೋಡೆ ಬರಹ ಪ್ರಕರಣದಲ್ಲಿಯೂ ಮತೀನ್ ಮತ್ತು ಮುಸಾವೀರ್ ಹೆಸರನ್ನು ಎರಡು ಮತ್ತು ಮೂರನೇ ಆರೋಪಿಗಳನ್ನಾಗಿ ಉಲ್ಲೇಖಿಸಲಾಗಿದೆ. ಮುಸಾವೀರ್ ಹಾಗೂ ಅಬ್ದುಲ್ ತಾಹ ಇಬ್ಬರೂ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನವರು. ದಕ್ಷಿಣ ಭಾರತದ ಇನ್ನೂ ಹಲವೆಡೆ ಬಾಂಬ್ ಸ್ಫೋಟಿಸುವ ಯೋಜನೆಯನ್ನು ಶಂಕಿತ ಭಯೋತ್ಪಾದಕರು ರೂಪಿಸಿದ್ದರು ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ. ರಾಮೇಶ್ವರಂ ಕೆಫೆ ಸ್ಫೋಟಕ್ಕೆ ಬಳಸಿದ ಬಾಂಬ್ ಅನ್ನು ಅಬ್ದುಲ್ ಮತೀನ್ ತಾಹ ಸಿದ್ಧಪಡಿಸಿದ್ದ, ಎಂಜಿನಿಯರಿಂಗ್ ಪದವೀಧರನಾಗಿದ್ದ ಈತ ಬಾಂಬ್ ತಯಾರಿಕೆ ಮಾಹಿತಿ ಹೊಂದಿದ್ದ, ಇತರರಿಗೂ ತರಬೇತಿ ನೀಡುತ್ತಿದ್ದ. ತಾಹ ಸಿದ್ಧಪಡಿಸಿದ ಬಾಂಬ್ ಅನ್ನು ಮುಸಾವೀರ್, ರಾಮೇಶ್ವರಂ ಕೆಫೆಯಲ್ಲಿ ಇಟ್ಟಿದ್ದ ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ. ಸ್ಫೋಟ ನಡೆಸಿದ ಆರೋಪಿಗಳಿಬ್ಬರೂ ನಕಲಿ ಹೆಸರುಗಳಿಂದ ತಲೆಮರೆಸಿಕೊಂಡಿದ್ದರು, ಒಂದೊಂದು ಕಡೆ ಒಂದೊಂದು ನಕಲಿ ಹೆಸರನ್ನು ಬಳಸುತ್ತಿದ್ದರು.

ಗುರುತು ಮರೆಮಾಚಲು ನಕಲಿ ಆಧಾರ್ ಕಾರ್ಡ್‌ಗಳನ್ನು ಬಳಕೆ ಮಾಡುತ್ತಿದ್ದರು, ನಕಲಿ ಕಾರ್ಡ್‌ಗಳ ಬಳಕೆಯೇ ಆರೋಪಿಗಳ ಬಂಧನಕ್ಕೆ ಪ್ರಮುಖ ಕಾರಣಗಳಲ್ಲಿ ಒಂದಾಗಿದ್ದು, ಪಶ್ಚಿಮಬಂಗಾಳದಲ್ಲಿ ನಕಲಿ ಆಧಾರ್ ಕಾರ್ಡ್ ● 6ನೇ ಪುಟಕ್ಕೆ



ಮೈಸೂರನ್ನ ಪ್ಯಾರಿಸ್ ಮಾಡುವ ಮಾತು ಉಳಿಸಿಕೊಳ್ಳದ ಮೋದಿ
ಯಾವ ಮುಖ ಹೊತ್ತು ಮತ ಕೇಳ್ತಾರೆ

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ

- ಪ್ರತಾಪ್‌ಸಿಂಹ ಸೋಲುತ್ತಾರೆಂದು ಟಿಕೆಟ್ ಮಿಸ್
- ಬಿಜೆಪಿ ಸಂಸದರು ಮೋದಿಗೆ ಹೆದರುತ್ತಾರೆ
- ಅಭಿವೃದ್ಧಿಯ ಒಂದು ಸಾಕ್ಷಿಯೂ ಇಲ್ಲ
- 15 ಲಕ್ಷವಲ್ಲ, 15 ಪೈಸೆನೂ ಕೊಡಲಿಲ್ಲ



ಮೈಸೂರಿನ ವಿದ್ಯಾರಣ್ಯಪುರಂನ ಭೂತಾಳೆ ಪಿಚ್‌ನಲ್ಲಿ ಶನಿವಾರ ನಡೆದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಮೈಸೂರು,ಏ.13(ಬಿಎಲ್‌ಯು)– ಮೈಸೂರನ್ನು ಪ್ಯಾರಿಸ್ ಮಾಡುತ್ತೇನೆ ಎಂಬ ಕೊಟ್ಟ ಮಾತು ಉಳಿಸಿಕೊಳ್ಳದ ಪ್ರಧಾನಮಂತ್ರಿ ಮೋದಿ, ನಾಳೆ ಮೈಸೂರಿನಲ್ಲಿ ಯಾವ ಮುಖ ಹೊತ್ತುಕೊಂಡು ಮತ ಕೇಳುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಮೈಸೂರಿನ ವಿದ್ಯಾರಣ್ಯಪುರಂನ ಭೂತಾಳೆ ಪಿಚ್‌ನಲ್ಲಿ ಇಂದು ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಂದೇ ಒಂದು ಅಭಿವೃದ್ಧಿ ಕಾರ್ಯ ಮಾಡದೆ ಈಗ ಯಾವ ನೈತಿಕತೆ ಇಟ್ಟುಕೊಂಡು ಮತ ಕೇಳುತ್ತಿದ್ದಾರೆ ಎಂದು ಮರು ಪ್ರಶ್ನಿಸಿದರು.

ಹಾಲಿ ಸಂಸದ ಪ್ರತಾಪ್ ಸಿಂಹ ಹಾಸನ ಜಿಲ್ಲೆ ಸಕಲೇಶಪುರದವರು. ಆದರೂ ಸ್ಥಳೀಯರಲ್ಲದ ನೀವು ಪ್ರತಾಪ್ ಸಿಂಹರನ್ನು ಎರಡು ಬಾರಿ ಗೆಲ್ಲಿಸಿ ಉದ್ದಾರತೆ ತೋರಿದ್ದೀರಾ. ಆದರೆ ಕಳೆದ ಹತ್ತು ವರ್ಷದ ಅವಧಿಯಲ್ಲಿ ಪ್ರತಾಪ್ ಸಿಂಹ ಮಾಡಿರುವ ಅಭಿವೃದ್ಧಿ ಶೂನ್ಯ. ಒಂದು ವೇಳೆ ಪ್ರತಾಪ್ ಸಿಂಹ ಅಭಿವೃದ್ಧಿ ಕಾರ್ಯ ಮಾಡಿದ್ದರೆ ಅವರನ್ನು ಬದಲಾಯಿಸಿ ಬೇರೆಯವರಿಗೆ ಏಕೆ ಟಿಕೆಟ್ ಕೊಡುತ್ತಿದ್ದರು ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಅಭಿವೃದ್ಧಿ ● 6ನೇ ಪುಟಕ್ಕೆ

ಅದೆಷ್ಟೇ ಖರ್ಚಾಗಲಿ ಗ್ಯಾರಂಟಿ ನಿಲ್ಲಿಸಲ್ಲ

ಅದೆಷ್ಟೆ ಖರ್ಚಾಗಲಿ, ಅದೇನೆ ಆಗಲಿ, ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆ ನಿಲ್ಲಿಸಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು. ನಾವು ಜಾರಿಗೊಳಿಸಿದ ಗ್ಯಾರಂಟಿ ಬಗ್ಗೆ ಬಿಜೆಪಿಯವರು ಅಪಹಾಸ್ಯ ಮಾಡಿದರು. ಆದರೆ ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆ ಅನುಷ್ಠಾನ ಮಾಡಿದೆವು ಎಂದರು. ಇದಾದ ಮೇಲೆ ಗ್ಯಾರಂಟಿ ಯೋಜನೆಯಿಂದ ಅಭಿವೃದ್ಧಿ ಕಾರ್ಯ ಸ್ಥಗಿತವಾಗಿದೆ ಎಂದು ಟೀಕಿಸಿದರು. ಕರ್ನಾಟಕದಲ್ಲಿ ಇವರೇಳಿದಂತೆ ಒಂದಾದರೂ ಅಭಿವೃದ್ಧಿ ಕಾರ್ಯ ಸ್ಥಗಿತವಾಗಿದೆಯೇ ಎಂದು ಪ್ರಶ್ನಿಸಿದರು. ನಾವು ನೀಡಿರುವ ಕೊಡುಗೆಗಳನ್ನು ಹೆಮ್ಮೆಯಿಂದ ಹೇಳುವುದಿಲ್ಲ. ಬದಲಿಗೆ ಇದು ನಮ್ಮ ಕರ್ತವ್ಯ ಎಂದು ಭಾವಿಸುತ್ತೇವೆ ಎಂದು ತಿಳಿಸಿದರು. ಅಷ್ಟಕ್ಕೂ ನಿಮಗೆ ಕೊಟ್ಟ ಹಣ ನಮಗೆ ತೆರಿಗೆ ಬಾಬ್ತಿನಿಂದ ಬರುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು. ತರುವಾಯ ತಮ್ಮ ಈ ಹೇಳಿಕೆ ವಿವಾದ ಸ್ವರೂಪ ಪಡೆಯುತ್ತದೆ ಎಂದು ತಿಳಿದು ವಿಷಯಾಂತರ ಮಾಡಿದರು.





ಐದನೇ ಪುಟದಿಂದ

10 ದಿನ ಎನ್‌ಐಎ ವಶಕ್ಕೆ

ಬಳಕೆದಾರರ ಸಂಖ್ಯೆ ಹೆಚ್ಚಾಗಿದೆ. ಒಡಿಶಾ ಹಾಗೂ ಪಶ್ಚಿಮಬಂಗಾಳದಲ್ಲಿ ವಾಸಿಸುತ್ತಿರುವ ಬಾಂಗ್ಲಾದೇಶದ ಅಕ್ರಮ ವಲಸಿಗರು ಹೆಚ್ಚಾಗಿ ನಕಲಿ ಆಧಾರ್ ಕಾರ್ಡ್‌ಗಳನ್ನೇ ಬಳಸುತ್ತಿದ್ದು, ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಆರೋಪಿಗಳೂ ಇದೇ ಪ್ರದೇಶದಲ್ಲಿ ಅಡಗಿರಬಹುದೆಂಬ ಶಂಕೆ ಇತ್ತು.

ಆರೋಪಿ ಮುಸಾವೀರ್ ಹುಸೇನ್ ಶಾಜೀಬ್ ಮಧ್ಯಮವರ್ಗದ ಕುಟುಂಬಕ್ಕೆ ಸೇರಿದವನಾಗಿದ್ದು, ತೀರ್ಥಹಳ್ಳಿಯಲ್ಲಿ ಈತನ ತಾಯಿ ವಾಸವಾಗಿದ್ದು, ಮನೆ ಬಾಡಿಗೆಯೇ ಕುಟುಂಬದ ಆದಾಯದ ಮೂಲವಾಗಿದೆ, ಈತ ಸ್ಥಳೀಯರೊಂದಿಗೆ ಹೆಚ್ಚು ಬೆರೆಯುತ್ತಿರಲಿಲ್ಲ, ತನ್ನ ಸಮುದಾಯದವರು ಇರುವ ಒಂದೆರಡು ಪ್ರದೇಶಗಳಲ್ಲಿ ಮಾತ್ರ ತಿರುಗಾಡುತ್ತಿದ್ದ ಎಂದು ತಿಳಿದುಬಂದಿದೆ. ಇನ್ನೊಬ್ಬ ಆರೋಪಿ ಅಬ್ದುಲ್ ಮತೀನ್ ತಾಹ ತಂದೆ ವರ್ಷದ ಹಿಂದೆ ಮೃತಪಟ್ಟಿದ್ದು, ತಾಹ ತೀರ್ಥಹಳ್ಳಿಯಲ್ಲಿ ಪ್ರೌಢಶಾಲೆ ವ್ಯಾಸಂಗ ಮುಗಿಸಿ, ಬೆಂಗಳೂರಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದ.

ಈತ ಬೆಂಗಳೂರಿನಲ್ಲೇ ಉಗ್ರರ ಸಂಪರ್ಕಕ್ಕೆ ಬಂದಿದ್ದು, ಐಇಡಿ ಬಾಂಬ್ ತಯಾರಿಕೆಯಲ್ಲಿ ನಿಪುಣನಾಗಿದ್ದ. ಮಂಗಳೂರು ಕುಕ್ಕರ್ ಬ್ಲಾಸ್ಟ್, ಶಿವಮೊಗ್ಗ ಟ್ರಯಲ್ ಬ್ಲಾಸ್ಟ್‌ಗಳ ಮಾಸ್ಟರ್‌ಮೈಂಡ್ ಆಗಿದ್ದ ತಾಹ, ಕಳೆದ ನಾಲ್ಕು ವರ್ಷಗಳಿಂದ ನಾಪತ್ತೆಯಾಗಿದ್ದ. ಈತನ ಪತ್ತೆಗೆ ಮೂರು ಲಕ್ಷ ರೂ. ಬಹುಮಾನ ಘೋಷಿಸಲಾಗಿತ್ತು. ರಾಮೇಶ್ವರಂ ಕೆಫೆ ಸ್ಫೋಟ ನಂತರ ಈ ಮೊತ್ತವನ್ನು ಹತ್ತು ಲಕ್ಷ ರೂ.ಗಳಿಗೆ ಏರಿಸಲಾಗಿತ್ತು.

ಕೊಲ್ಕತ್ತಾದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಗಳು, ಒಂದೇ ಕಡೆ ಇರದೆ ಲಾಡ್ಜ್‌ಗಳನ್ನು ಬದಲಿಸುತ್ತಿದ್ದರು. ಪ್ರತಿ ಎರಡು ಮೂರು ದಿನಗಳಿಗೊಮ್ಮೆ ವಾಸ್ತವ್ಯ ಬದಲಿಸುತ್ತಿದ್ದರು ಎಂಬುದು ತನಿಖೆಯಿಂದ ತಿಳಿದುಬಂದಿದೆ.

ಯಾವ ಮುಖ ಹೊತ್ತು ಮತ ಕೇಳ್ತಾರೆ

ಮಾಡದ ಪ್ರತಾಪ್ ಸಿಂಹ ಸೋಲುತ್ತಾರೆ ಎಂಬ ಭಯದಿಂದ ಟಿಕೆಟ್ ನೀಡಲಿಲ್ಲ ಎಂದು ಟೀಕಿಸಿದರು. ಪ್ರತಾಪ್ ಸಿಂಹ ಮಾತ್ರವಲ್ಲದೆ ಕರ್ನಾಟಕದ 27 ಬಿಜೆಪಿ ಸಂಸದರು ಕೂಡ ಏನೇನು ಅಭಿವೃದ್ಧಿ ಮಾಡಿಲ್ಲ. ನರೇಂದ್ರ ಮೋದಿಗೆ ಮುಂದೆ ನಿಂತು ಯಾವ ಸಂಸದರೂ ಬಾಯಿ ಬಿಡಲಿಲ್ಲ. ಕರ್ನಾಟಕಕ್ಕೆ ಬಹಳಷ್ಟು ಅನ್ಯಾಯವಾಗುತ್ತಿದ್ದರೂ ಯಾರೂ ಕೂಡ ಕನ್ನಡಿಗರ ಪರ ದನಿ ಎತ್ತಲಿಲ್ಲ. ಕರ್ನಾಟಕದಲ್ಲಿ 3 ವರ್ಷ 10 ತಿಂಗಳು ಅಧಿಕಾರ ನಡೆಸಿದ ಬಿಜೆಪಿ ಸರ್ಕಾರದ ಅಭಿವೃದ್ಧಿ ಕೂಡ ಶೂನ್ಯವಾಗಿತ್ತು. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾದರು. ಅವರು ಕೂಡ ಕಿಂಚಿತ್ತೂ ಜನರ ಪರ ಕೆಲಸ ಮಾಡಲಿಲ್ಲ. ಈ ಸತ್ಯವನ್ನು ಕಾಂಗ್ರೆಸ್ ಕಾರ್ಯಕರ್ತರು ಜನರಿಗೆ ತಿಳಿ ಹೇಳಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು. ಬಡವರು, ಮಹಿಳೆಯರು, ರೈತರು ಸೇರಿದಂತೆ ಜನಪರವಾದ ಯಾವುದೇ ಅಭಿವೃದ್ಧಿ ಮಾಡಿದ್ದರೆ ಒಪ್ಪಿಕೊಳ್ಳಬಹುದಿತ್ತು. ಕಪ್ಪು ಹಣ ತಂದು ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ 15 ಲಕ್ಷ ಹಾಕುತ್ತೇನೆ ಅಂದರು, ಅದೂ ಸುಳ್ಳಾಯಿತು. 15 ಲಕ್ಷವಿರಲಿ ಈ ತನಕ 15 ಪೈಸೆಯನ್ನು ಕೂಡ ಹಾಕಲಿಲ್ಲ. ಈ ಸರ್ಕಾರಕ್ಕೆ ಬೆಲೆ ಮೇಲೆ ಸ್ವಲ್ಪವೂ ನಿಯಂತ್ರಣ ಇಲ್ಲದ ಕಾರಣ ಆಹಾರ, ಪೆಟ್ರೋಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಯಿತು ಎಂದು ವಾಗ್ದಾಳಿ ನಡೆಸಿದರು. ಕೊಟ್ಟ ಮಾತು ಈಡೇರಿಸಲಿಲ್ಲ, ನುಡಿದಂತೆ ನಡೆಯಲಿಲ್ಲ. ಶುದ್ಧ ಸುಳ್ಳು ಹೇಳಿ ಜನರನ್ನು ಮೋಸ ಮಾಡಿದ್ದಾರೆ. ನಾವು ಮಾಡಿರುವ ಅಭಿವೃದ್ಧಿ ಕಾರ್ಯಗಳಿವೆ ಎಂದು ತೋರಿಸಲು ಒಂದೇ ಒಂದು ಸಾಕ್ಷಿ ಕೊಟ್ಟಿದ್ದರೂ ಒಪ್ಪಿಕೊಳ್ಳಬಹುದಿತ್ತು. ಆದರೆ ಇವರ ಕೊಡುಗೆ ಏನೇನು ಇಲ್ಲ ಎಂದು ಸಿದ್ದರಾಮಯ್ಯ ಟೀಕಿಸಿದರು.

ತ್ರೇತಾಯುಗದಲ್ಲಿ ರಾಮ, ಕಲಿಯುಗದಲ್ಲಿ ಸಿದ್ದರಾಮಯ್ಯ

ತ್ರೇತಾಯುಗದಲ್ಲಿ ಒಬ್ಬ ರಾಮ ಇದ್ದ, ಈಗ ಕಲಿಯುಗದಲ್ಲಿ ನಮ್ಮ ಸಿದ್ದರಾಮಯ್ಯ ಇದ್ದಾರೆ ಎಂದು ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಹೇಳಿದರು.

ಅಕ್ಕಿ ಮೂಲಕ ಅನ್ನದಾನಯ್ಯ, ಗೃಹಜ್ಯೋತಿ ಮೂಲಕ ಬೆಳಕು ರಾಮಯ್ಯ, ಸರ್ವ ಜನರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಶ್ರೇಷ್ಠ ನಾಯಕ ನಮ್ಮ ಸಿದ್ಧರಾಮಯ್ಯ ಎಂದು ತಿಳಿಸಿದರು. ಪ್ರತಿಯೊಂದು ಕುಟುಂಬ ನೆಮ್ಮದಿ ಬದುಕು ಕಟ್ಟಿಕೊಳ್ಳಲು ಪಂಚ ಗ್ಯಾರಂಟಿ ಯೋಜನೆ ರೂಪಿಸಿರುವ ಸಿದ್ದರಾಮಯ್ಯ ಕೊಡುಗೆ ಅವಿಸ್ಮರಣೀಯ ಎಂದು ರಾಜೀವ್ ಅಭಿಪ್ರಾಯಪಟ್ಟರು..

ಸುಳ್ಳು ಹೇಳಿದ್ರೂ ಮೋದಿ, ಮೋದಿ ಅಂತಾರೆ

ಎರಡು ಕೋಟಿ ಉದ್ಯೋಗ ನೀಡುತ್ತೇವೆ ಎಂದು ಸುಳ್ಳು ಹೇಳಿದರು. ಆದರೂ ಯುವಕರು ಮೋದಿ, ಮೋದಿ ಅನ್ನುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಸುಳ್ಳು ಹೇಳಿದ್ದರೂ ಜನರು ನಂಬುತ್ತಿದ್ದಾರೆ, ಮೋದಿ, ಮೋದಿ ಅಂತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇವರ ಸುಳ್ಳುಗಳಿಂದ ನಿಜ ಬಣ್ಣ ಬಯಲಾಗಿದೆ. ಆದರೂ ನಾಳೆ ಮೈಸೂರಿಗೆ ಬಂದು ಮತ ಕೇಳುತ್ತಿದ್ದಾರೆ. ಯಾವ ಮುಖ ಇಟ್ಟುಕೊಂಡು ಓಟು ಕೇಳುತ್ತಿದ್ದಾರೋ ಎಂದು ಪ್ರಶ್ನಿಸಿದರು.

ಬರಗಾಲ ಬಂದಾಗ ಬರಲಿಲ್ಲ, ಪ್ರವಾಹ ಬಂದಾಗ ಬರಲಿಲ್ಲ. ಈಗ ಮತ ಕೇಳಲು ಬರುತ್ತಿದ್ದಾರೆ ಎಂದು ನರೇಂದ್ರ ಮೋದಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡ ಸಿದ್ದರಾಮಯ್ಯ, ಕರ್ನಾಟಕ ಕಂಡರೆ ಇವರಿಗೆ ದ್ವೇಷ, ಮಲತಾಯಿ ಧೋರಣೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾವೇನು ಇವರ ಖಜಾನೆಯಿಂದ ಹಣ ಕೇಳುತ್ತಿಲ್ಲ. ನಮ್ಮ ಕರ್ನಾಟಕದ ಪಾಲಿನ ತೆರಿಗೆ ಹಣ ಕೇಳುತ್ತಿದ್ದೇವೆ. ಆದರೆ ನಮ್ಮ ಹಣ ನಮಗೆ ಕೊಡಲು ಇವರಿಗೆ ಹೊಟ್ಟೆ ಉರಿ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿರುವ ಕಾರಣ ಒಂದು ನಯಾ ಪೈಸೆ ಹಣ ಕೊಡುತ್ತಿಲ್ಲ ಎಂದು ಕೆಂಡಾಮಂಡಲರಾದರು.

ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಹೊರನಾಡಿಗೆ ಹೋಗಬೇಕಾ ನಡೆಯಿರಿ

ಧರ್ಮಸ್ಥಳಕ್ಕೆ ಹೋಗಬೇಕಾ ನಡೆಯಿರಿ, ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಬೇಕಾ ನಡೆಯಿರಿ, ಮಹದೇಶ್ವರ ಬೆಟ್ಟಕ್ಕೆ ಹೋಗಬೇಕಾ ನಡೆಯಿರಿ, ಹೊರನಾಡಿಗೆ ಹೋಗಬೇಕಾ ನಡೆಯಿರಿ. ಎಲ್ಲಿಗಾದರೂ ನಡೆಯಿರಿ ಶಕ್ತಿ ಯೋಜನೆಯಡಿ ನೀವು ಯಾವುದೇ ದೇವಸ್ಥಾನಕ್ಕೆ ಹೋದ್ರೂ ಬಸ್‌ನಲ್ಲಿ ಫ್ರೀ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಸ್‌ನಲ್ಲಿ ಈಗ ಫ್ರೀ ಇರುವ ಕಾರಣ ನೀವು ಎಲ್ಲಾ ದೇವಸ್ಥಾನಗಳಿಗೆ ಹೋಗುವ ಅವಕಾಶ ಸಿಕ್ಕಿದೆ. ಆದರೆ ನರೇಂದ್ರ ಮೋದಿ ಸರ್ಕಾರ ಏನೇ ಕೊಡದಿದ್ದರೂ ನೀವು ಕೇಳುತ್ತಿಲ್ಲ. ಏನೇ ಕಡಿಮೆ ಮಾಡಿದರೂ ಪ್ರಶ್ನೆ ಮಾಡುತ್ತಿಲ್ಲವೇಕೆ ಎಂದು ಕೋಪದಿಂದ ಪ್ರಶ್ನಿಸಿದರು. ಭಾವನಾತ್ಮಕ ವಿಚಾರಗಳಿಂದ ಹೊಟ್ಟೆ ತುಂಬುವುದಿಲ್ಲ. ನಾವು ಅನ್ನ, ಬಟ್ಟೆ, ವಸತಿ ಸೇರಿದಂತೆ ಹಲವು ಮೂಲಭೂತ ಸೌಕರ್ಯ ನೀಡುತ್ತಿದ್ದೇವೆ. ಇದು ನಿಮ್ಮ ಗಮನದಲ್ಲಿರಲಿ ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ಲಕ್ಷ್ಮಣ ಫೋಟೋ ಮರೆಮಾಚಲು ಹರಸಾಹಸ

ಇಂದು ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ವೇದಿಕೆಯ ಹಿಂಭಾಗ ಹಾಕಿದ್ದ ಬ್ಯಾನರ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಭಾವಚಿತ್ರ ಮರೆಮಾಚಲಾಯಿತು.

ವೇದಿಕೆಯ ಹಿಂಭಾಗದ ಬ್ಯಾನರ್‌ನಲ್ಲಿ ಲಕ್ಷ್ಮಣ ಫೋಟೋ ರಾರಾಜಿಸುತ್ತಿತ್ತು. ಕಾರ್ಯಕ್ರಮ ಆರಂಭಕ್ಕೆ ಕೆಲವೇ ನಿಮಿಷ ಇರುವಾಗ ಲಕ್ಷ್ಮಣ ಭಾವಚಿತ್ರ ಮುಚ್ಚಲಾಯಿತು. ಲಕ್ಷ್ಮಣನ ಭಾವಚಿತ್ರದ ಮುಂದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಫ್ಲೆಕ್ಸ್ ನಿಲ್ಲಿಸಲಾಯಿತು. ಅದು ಹಾಗಾಗೆ ಗಾಳಿಗೆ ತೂರಿ ಕೆಳಗೆ ಬೀಳುವಾಗ ಅದನ್ನು ಹಾಗೆ ನಿಲ್ಲಿಸಲು ಕಾಂಗ್ರೆಸ್ ಕಾರ್ಯಕರ್ತರು ಹರಸಾಹಸ ಪಡುತ್ತಿದ್ದರು.

ಜೊತೆಗೆ ಬ್ಯಾನರ್ ಮಧ್ಯೆ ಇದ್ದ ಲಕ್ಷ್ಮಣ ಹೆಸರು, ಕ್ರಮ ಸಂಖ್ಯೆ ಹಾಗೂ ಚಿಹ್ನೆಯನ್ನು ಕೂಡ ಮುಚ್ಚಲಾಯಿತು. ಒಂದು ವೇಳೆ ಸಮಾವೇಶದಲ್ಲಿ ಅಭ್ಯರ್ಥಿ ಹೆಸರು, ಚಿಹ್ನೆ ಕ್ರಮ ಸಂಖ್ಯೆ ಇದ್ದರೆ ಚುನಾವಣಾ ಖರ್ಚು ವೆಚ್ಚ ಅಭ್ಯರ್ಥಿ ಲೆಕ್ಕಕ್ಕೆ ಸೇರ್ಪಡೆಯಾಗುತ್ತದೆ ಎಂಬ ಕಾರಣದಿಂದ ಲಕ್ಷ್ಮಣ ಭಾವಚಿತ್ರ, ಕ್ರಮ ಸಂಖ್ಯೆ ಮುಚ್ಚಲಾಯಿತು.

ಸಿದ್ದರಾಮಯ್ಯ ಒನ್‌ಗೆ ಹೋದ್ರೂ ಬಿಡಲ್ವಲ್ಲಾ...

'ಸಿದ್ದರಾಮಯ್ಯ ಒನ್‌ಗೆ ಹೋದ್ರೂ ಬಿಡಲ್ವಲ್ಲಾ.. ಹೇಯ್ ಸುಮ್ನೆ ಬನ್ರಯ್ಯ' ಹೀಗೆಂದು ಹಾಸ್ಯ ಚಟಾಕಿ ಹಾರಿಸಿದವರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ! ವೇದಿಕೆಯಲ್ಲಿ ಆಸೀನರಾಗಿದ್ದ ಸಿದ್ದರಾಮಯ್ಯ ಶೌಚಾಲಯದತ್ತ ಹೊರಟರು. ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಬೆಂಬಲಿಗರು ಅವರನ್ನೇ ಹಿಂಬಾಲಿಸಿದರು.

ಈ ವೇಳೆ ಭಾಷಣ ಮಾಡುತ್ತಿದ್ದ ಡಾ.ಮಹದೇವಪ್ಪ, ಕೈ ಬೆರಳಿನಲ್ಲಿ ಸಂಜ್ಞೆ ಮಾಡಿ ತೋರಿಸಿ, ವಾಪಸು ಬರುವಂತೆ ಸಲಹೆ ನೀಡಿದರು. ಆದರೂ ಬಹಳಷ್ಟು ಜನರು ಸಿದ್ದರಾಮಯ್ಯ ಹಿಂಬಾಲಿಸಿದರು. ಇದನ್ನು ನೋಡಿದ ಡಾ. ಮಹದೇವಪ್ಪ, ಸಿದ್ದರಾಮಯ್ಯ ಒನ್‌ಗೆ ಹೋದ್ರೂ ಬಿಡಲ್ವಲ್ಲಾ. ಹೇಯ್ ಸುಮ್ನೆ ಬನ್ರಯ್ಯ' ಎಂದು ನಗುತ್ತಲೇ ಹೇಳಿದರು. ಈ ಮಾತು ಕೇಳಿ ಇಡೀ ಸಭೆ ನಗೆಗಡಲಲ್ಲಿ ತೇಲಿತು.

ಭಾನುವಾರ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರಧಾನಿ ಮೋದಿ ಕಾರ್ಯಕ್ರಮದ ಹಿನ್ನೆಲೆ

ಮಧ್ಯಾಹ್ನ 1ರಿಂದ ರಾತ್ರಿ 7ರವರೆಗೆ ಮೈಸೂರಿನ ಕೆಲವೆಡೆ ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆ

ವಾಹನ ನಿಲುಗಡೆಗೂ ಸೂಕ್ತ ವ್ಯವಸ್ಥೆ

ಮೈಸೂರು, ಏ.13(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಾಳೆ(ಏ.14) ನಡೆಯುವ ಪ್ರಧಾನಿ ನರೇಂದ್ರ ಮೋದಿಯವರ ಕಾರ್ಯಕ್ರಮ ಹಿನ್ನೆಲೆಯಲ್ಲಿ ವಾಹನ ಸಂಚಾರ ದಟ್ಟಣೆ, ಸುಗಮ ಸಂಚಾರ ಕಲ್ಪಿಸುವ ನಿಟ್ಟಿನಲ್ಲಿ ಮೋಟಾರು ವಾಹನ ಕಾಯ್ದೆ 1988 ಕಲಂ 115 ಹಾಗೂ ಸೆಕ್ಷನ್(3) ಆಫ್ ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಕಾಯ್ದೆ 1960ರನ್ವಯ ವಾಹನಗಳು ಬದಲಿ ಮಾರ್ಗಗಳಲ್ಲಿ ಸಂಚರಿಸುವಂತೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಆದೇಶ ಹೊರಡಿಸಿದ್ದಾರೆ.



ಕೆಎಸ್‌ಆರ್‌ಟಿಸಿ ಬಸ್‌ಗಳು ಸಂಚರಿಸುವ ಮಾರ್ಗ: ಮಧ್ಯಾಹ್ನ 1 ಗಂಟೆಯಿಂದ ರಾತ್ರಿ 7 ಗಂಟೆಯವರೆಗೆ ಮಡಿಕೇರಿ, ಹುಣಸೂರು, ಹಾಸನ ಕಡೆಯಿಂದ ಮೈಸೂರು ನಗರಕ್ಕೆ ಆಗಮಿಸುವ ಸಾರಿಗೆ ಬಸ್‌ಗಳು ಹಿನಕಲ್ ಫ್ಲೈ ಓವರ್ ಜಂಕ್ಷನ್‌ನಿಂದ ಎಡಕ್ಕೆ ತಿರುಗಿ ರಿಂಗ್ ರಸ್ತೆ ಮೂಲಕ ರಾಯಲ್‌ಇನ್ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ಕೆಆರ್‌ಎಸ್ ರಸ್ತೆ ಮೂಲಕ ವಿವಿಪುರಂ, ಆಕಾಶವಾಣಿ ವೃತ್ತದಿಂದ ದಾಸಪ್ಪ ವೃತ್ತಕ್ಕೆ ಬಂದು ಅಲ್ಲಿಂದ ಬಲಕ್ಕೆ ತಿರುಗಿ ಮೆಟ್ರೋಪೋಲ್ ವೃತ್ತದ ಮೂಲಕ ಮುಡಾ ವೃತ್ತದಲ್ಲಿ ಎಡಕ್ಕೆ ತಿರುಗಿ ರಮಾವಿಲಾಸ ರಸ್ತೆ, ಬನುಮಯ್ಯ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ಪುರಂದರ ರಸ್ತೆ, ಕುಸ್ತಿ ಅಖಾಡ ಜಂಕ್ಷನ್, ಹಾರ್ಡಿಂಜ್ ವೃತ್ತ ಮೂಲಕ ಸಬರ್‌ಬನ್ ಬಸ್ ನಿಲ್ದಾಣ ತಲುಪುವುದಾಗಿದೆ. ಹಾಗೆಯೇ ಇದೇ ಮಾರ್ಗದಲ್ಲಿ ಮೈಸೂರು ನಗರದಿಂದ ಹುಣಸೂರು ಮಾರ್ಗದ ಕಡೆಗೆ ಸಂಚರಿಸುವಂತೆ ತಿಳಿಸಲಾಗಿದೆ. ನಂಜನಗೂಡು ಕಡೆಯಿಂದ ಬರುವ ಸಾರಿಗೆ ಬಸ್‌ಗಳು ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ಸಾವಿತ್ರಿ ಬಾಯಿಪುಲೆ ವೃತ್ತ, ಟಿ.ಎನ್.ಪುರ ರಸ್ತೆ ಜಂಕ್ಷನ್, ಲಲಿತಮಹಲ್ ರಸ್ತೆ, ಸಂಗೊಳ್ಳಿ ರಾಯಣ್ಣ ವೃತ್ತ, ಬುಲೆವಾರ್ಡ್ ವೃತ್ತ, ಟ್ಯಾಂಕ್ ಬಂಡ್ ರಸ್ತೆ, ಲೋಕರಂಜನ್ ಮಹಲ್ ರಸ್ತೆ ಹಾರ್ಡಿಂಜ್ ವೃತ್ತದ ಮೂಲಕ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ತಲುಪುವುದಾಗಿದೆ.

ಸಾರ್ವಜನಿಕ ವಾಹನಗಳ ಬದಲಿ ಮಾರ್ಗ: ನಗರಕ್ಕೆ ಆಗಮಿಸುವ ವಾಹನಗಳು ಪಡುವಾರಹಳ್ಳಿ ವೃತ್ತದ ಬಳಿ ಬಲಕ್ಕೆ ತಿರುಗಿ ಬಯಲು ರಂಗಮಂದಿರ ರಸ್ತೆಯಲ್ಲಿ ಸಂಚರಿಸುವುದು. ಮೆಟ್ರೋಪೋಲ್ ವೃತ್ತದಿಂದ ವಿನೋಬ ರಸ್ತೆ, ಚಿಕ್ಕಗಡಿಯಾರ ವೃತ್ತ, ಕೆ.ಆರ್.ವೃತ್ತದ ಮೂಲಕ ಸಂಚರಿಸುವುದು. ಹಾಸನ, ಮಡಿಕೇರಿ, ಹುಣಸೂರು ಕಡೆಯಿಂದ ಮೈಸೂರು ನಗರಕ್ಕೆ ಬರುವ ವಾಹನಗಳು ಸೆಂಟ್ ಜೋಸೆಫ್ ಕಾಲೇಜು ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ಒಂಟಿಕೊಪ್ಪಲು ಟೆಂಪಲ್ ರಸ್ತೆ, ಬಿ.ಸಿ.ಲಿಂಗಯ್ಯ ವೃತ್ತದಿಂದ ಕೆಆರ್‌ಎಸ್ ರಸ್ತೆ ಮೂಲಕ ಸಾಗುವುದು. ಬೋಗಾದಿ ಕಡೆಯಿಂದ ಬರುವ ವಾಹನಗಳು ಆರ್‌ಟಿಓ ವೃತ್ತ, ಬಲ್ಲಾಳ್ ವೃತ್ತ, ಕೆ.ಜಿ.ಕೊಪ್ಪಲು ರಸ್ತೆ, ವಿಜಯ ಬ್ಯಾಂಕ್ ರಸ್ತೆ ಮೂಲಕ ಸಾಗುವುದು.

ಕಾರ್ಯಕ್ರಮಕ್ಕೆ ಬರುವ ಕಾರು ಮತ್ತು ದ್ವಿಚಕ್ರವಾಹನಗಳ ಪಾರ್ಕಿಂಗ್ ಸ್ಥಳ: ವಿ.ಐ.ಪಿ ರಸ್ತೆ ಎಡಭಾಗಕ್ಕೆ ಪಾರ್ಕಿಂಗ್ ಸ್ಥಳ –01 (ವಿ.ಐ.ಪಿ), ವಿ.ಐ.ಪಿ ರಸ್ತೆ ಎಡಭಾಗಕ್ಕೆ ಪಾರ್ಕಿಂಗ್ ಸ್ಥಳ –02 (ವಿ.ಐ.ಪಿ) ಕೆ.ಆರ್.ಬಿ ರಸ್ತೆ ಜಿಲ್ಲಾ ಪಂಚಾಯತ್ ಜಂಕ್ಷನ್‌ನಿಂದ ಏಕಲವ್ಯ ವೃತ್ತದವರೆಗೆ ರಸ್ತೆಯ ಪಶ್ಚಿಮ ಭಾಗದಲ್ಲಿ ಕಾರುಗಳ ಪಾರ್ಕಿಂಗ್ (ಪೊಲೀಸ್ ವಾಹನಗಳು ಮತ್ತು ಮಾಧ್ಯಮ ವಾಹನಗಳು), ಮಹಾರಾಜ ಕಾಲೇಜು ಮೈದಾನದ ಒಳಗಡೆ ವೇದಿಕೆಯ ಬಲಕ್ಕಾದಂತೆ ಜನರೇಟರ್ ಮತ್ತು ಪೊಲೀಸ್ ಅಧಿಕಾರಿಗಳ ವಾಹನಗಳ ಪಾರ್ಕಿಂಗ್, ಮಹಾರಾಜ ಕಾಲೇಜು ಆವರಣ(ಶತಮಾನೋತ್ಸವ ಭವನದ ಬಳಿ), ಹಳೇ ಡಿಸಿ ಕಚೇರಿ, ಎನ್‌ಸಿಸಿ ಕ್ಯಾಂಟಿನ್, ಬಾಸ್ಕೆಟ್ ಬಾಲ್ ಮೈದಾನ, ಜಯಲಕ್ಷ್ಮೀ ವಿಲಾಸ ರಸ್ತೆ, ಗೀತಾ ರಸ್ತೆ, ವಿಷ್ಣುವರ್ಧನ ರಸ್ತೆ, ನರಸ ರಾಜ ರಸ್ತೆ ಬದಿಯಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಬಹುದು. ಹಾಗೆಯೇ ಕಾರ್ಯಕ್ರಮಕ್ಕೆ ಆಗಮಿಸುವ ಬಸ್‌ಗಳು ವಿಲೇಜ್ ಹಾಸ್ಟೆಲ್, ಮಹಾಬೋಧಿ ಮೈದಾನ, ಮೈಸೂರು ವಿವಿ ಆವರಣ, ಜೂನಿಯರ್ ಮಹಾರಾಜ ಕಾಲೇಜು ಮೈದಾನ, ಜೆ.ಕೆ. ಗ್ರೌಂಡ್, ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ವಸ್ತುಪ್ರದರ್ಶನ ಮತ್ತು ದೊಡ್ಡಕೆರೆ ಮೈದಾನದಲ್ಲಿ ನಿಲ್ಲಿಸಬಹುದಾಗಿದೆ.

ನಿರ್ಬಂಧಿತ ರಸ್ತೆಗಳು...!

ಹಳೇ ಡಿಸಿ ಕಚೇರಿ ಆರ್ಚ್‌ಗೇಟ್ ಜಂಕ್ಷನ್‌ನಿಂದ ಕೋರ್ಟ್ ಜಂಕ್ಷನ್‌ವರೆಗಿನ ಕೆಆರ್‌ಬಿ ರಸ್ತೆಯ ಎರಡು ಕಡೆಗಳಲ್ಲಿ ಕಾರ್ಯಕ್ರಮಕ್ಕೆ ಆಗಮಿಸುವ ಬಸ್‌ಗಳನ್ನು ಹೊರತುಪಡಿಸಿ ಉಳಿದೆಲ್ಲಾ ಮಾದರಿಯ ವಾಹನಗಳ ಸಂಚಾರ ಹಾಗೂ ರಸ್ತೆಯ ಎರಡು ಬದಿಯಲ್ಲಿ ವಾಹನಗಳ ನಿಲುಗಡೆಯನ್ನು ನಿರ್ಬಂಧಿಸಲಾಗಿದೆ. ಹಾಗೆಯೇ ಮೆಟ್ರೋಪೋಲ್ ವೃತ್ತದಿಂದ ರಾಮಸ್ವಾಮಿ ವೃತ್ತದವರೆಗಿನ ಜೆಎಲ್‌ಬಿ ರಸ್ತೆ, ಸೆಂಟ್ ಜೋಸೆಫ್ ಜಂಕ್ಷನ್‌ನಿಂದ ಮೆಟ್ರೋಪೋಲ್ ವೃತ್ತದವರೆಗಿನ ಹುಣಸೂರು ರಸ್ತೆ, ಮುಡಾ ಜಂಕ್ಷನ್‌ನಿಂದ ಮೈಸೂರು ವಿವಿ ಕುವೆಂಪು ಪ್ರತಿಮೆ ಜಂಕ್ಷನ್‌ವರೆಗೆ, ಜೆಎಲ್‌ಬಿ ಜಂಕ್ಷನ್‌ನಿಂದ ಕೆಆರ್‌ಬಿ ಜಂಕ್ಷನ್‌ವರೆಗೆ, ರಾಮಸ್ವಾಮಿ ವೃತ್ತದಿಂದ ಅಗ್ನಿಶಾಮಕ ಠಾಣೆ ಜಂಕ್ಷನ್‌ವರೆಗೆ, ಕಲಾಮಂದಿರ ಜಂಕ್ಷನ್‌ನಿಂದ ರೈಲ್ವೆಗೇಟ್ ಜಂಕ್ಷನ್‌ವರೆಗೆ, ಡಾ.ಪದ್ಮವೃತ್ತದಿಂದ ಚಂದ್ರಮೌಳೇಶ್ವರ ದೇವಸ್ಥಾನ ಜಂಕ್ಷನ್‌ವರೆಗೆ, ಸರಸ್ವತಿಪುರಂ 5ನೇ ಕ್ರಾಸ್ ಜಂಕ್ಷನ್‌ನಿಂದ ಬೇಕ್‌ಪಾಯಿಂಟ್‌ವರೆಗೆ, ರಮ್ಯ ಹೋಟೆಲ್ ಜಂಕ್ಷನ್‌ನಿಂದ ಕುಕ್ಕರಹಳ್ಳಿ ಗ್ರಾಮ ಅರಳಿಕಟ್ಟೆ ಜಂಕ್ಷನ್‌ವರೆಗಿನ ಸ್ವಿಮ್ಮಿಂಗ್ ಪೂಲ್ ರಸ್ತೆ, ರೋಟರಿ ಜಂಕ್ಷನ್‌ನಿಂದ ಕೆಆರ್‌ಬಿ ರಸ್ತೆ ಜಂಕ್ಷನ್‌ವರೆಗಿನ ರಸ್ತೆಗಳ ಎರಡು ಕಡೆಗಳಲ್ಲಿ ಹಾಗೂ ಕೆಎಸ್‌ಆರ್‌ಟಿಸಿ ಬಸ್‌ಗಳು ಹಾಗೂ ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕ ವಾಹನಗಳು ಮತ್ತು ಬಸ್‌ಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿದೆ.

ಪಂಜಾಬ್ ವಿರುದ್ಧ ಗೆಲುವು

ಅಗ್ರಸ್ಥಾನದಲ್ಲೇ ಮುಂದುವರೆದ ಆರ್‌ಆರ್


© BCCI

ಮುಲ್ಲನ್ಪುರ್, ಏ.13– ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ಪಂಜಾಬ್ ಕಿಂಗ್ಸ್ ವಿರುದ್ಧ 3 ವಿಕೆಟ್‌ಗಳ ಜಯ ಸಾಧಿಸಿದೆ. ಆ ಮೂಲಕ ಆಡಿರುವ 6 ಪಂದ್ಯಗಳಲ್ಲಿ 5 ಜಯ, 1 ಸೋಲಿನೊಂದಿಗೆ 10 ಅಂಕ ಗಳಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರೆದಿದೆ.

ಇಲ್ಲಿನ ಮಹಾರಾಜ ಯಾದವೀಂದ್ರ ಸಿಂಗ್ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ ನೀಡಿದ ಸಾಧಾರಣ ಗುರಿ ಬೆನ್ನತ್ತಿದ ರಾಜಸ್ಥಾನ್ ಆರಂಭದಿಂದಲೂ ನಿಧಾನಗತಿ ಬ್ಯಾಟಿಂಗ್ ನಡೆಸಿತು. ಆದರೆ ಇನ್ನೂ ಒಂದು ಎಸೆತ ಬಾಕಿ ಇರುವಾಗಲೇ ಪಂದ್ಯ ಗೆದ್ದು ಬೀಗಿತು.

ಪಂಜಾಬ್ ನೀಡಿದ 148ರನ್‌ಗಳ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ 19.5 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 152 ರನ್ ಗಳಿಸಿ ಜಯ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ತನುಷ್ ಕೋಟ್ಯಾನ್ ಹಾಗೂ ಯಶಸ್ವಿ ಜೈಸ್ವಾಲ್ ಮೊದಲ ವಿಕೆಟ್‌ಗೆ 56 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಈ ವೇಳೆ 24 ರನ್ ಗಳಿಸಿದ್ದ ತನುಷ್ ಕೋಟ್ಯಾನ್ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ 4 ಬೌಂಡರಿ ಒಳಗೊಂಡ 39 ರನ್ ಗಳಿಸಿ ಜೈಸ್ವಾಲ್ ಸಹ ನಿರ್ಗಮಿಸಿದರು. ನಂತರ ಬಂದ ನಾಯಕ ಸಂಜು ಸ್ಯಾಮ್ಸನ್ 18, ರಿಯಾನ್ ಪರಾಗ್ 23, ಧ್ರುವ್ ಜುರೇಲ್ 6, ರೋವ್ಮನ್ ಪೊವೆಲ್ 11, ಕೇಶವ್ ಮಹಾರಾಜ್ 1 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆದರೆ ಇನ್ನಿಂಗ್ಸ್ ಕೊನೆಯಲ್ಲಿ ಅಬ್ಬರಿಸಿದ ಶಿಮ್ರಾನ್ ಹೆಟ್ಮೆಯರ್ 10 ಎಸೆತಗಳಲ್ಲಿ 3 ಸಿಕ್ಸರ್, 1 ಬೌಂಡರಿ ಒಳಗೊಂಡ 27 ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು. ಪಂಜಾಬ್ ಪರ ಕಗಿಸೋ ರಬಾಡ, ಸ್ಯಾಮ್ ಕರ್ರನ್ ತಲಾ 2, ಹರ್ಷಲ್ ಪಟೇಲ್, ಅರ್ಷದೀಪ್ ಸಿಂಗ್ ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 147ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ಅಥರ್ವ ಟೈಡೆ, ಜಾನಿ ಬೈರ್ ಸ್ಟೋ ತಲಾ 15, ಪ್ರಭ್‌ಸಿಮ್ರಾನ್ ಸಿಂಗ್ 10, ಜಿತೇಶ್ ಶರ್ಮಾ 29, ಲಿಯಾಮ್ ಲಿವಿಂಗ್‌ಸ್ಟೋನ್ 21, ಅಶುತೋಶ್ ಶರ್ಮಾ 31 ರನ್ ಗಳಿಸಿದರು. ರಾಜಸ್ಥಾನ್ ಪರ ಆವೇಶ್ ಖಾನ್, ಕೇಶವ್ ಮಹಾರಾಜ್ ತಲಾ 2, ಯಜುವೇಂದ್ರ ಚಹಲ್, ಕುಲದೀಪ್ ಸೇನ್ ಹಾಗೂ ಟ್ರೆಂಟ್ ಬೋಲ್ಟ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ರಾಜಸ್ಥಾನ್ ಪರ ಶಿಮ್ರಾನ್ ಹೆಟ್ಮೆಯರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದಿನ ಪಂದ್ಯ

ಕೋಲ್ಕತ್ತಾ ನೈಟ್ ರೈಡರ್ಸ್ / ಲಕ್ನೋ ಸೂಪರ್ ಜೈಂಟ್ಸ್
ಸ್ಥಳ: ಕೋಲ್ಕತ್ತಾ, ಈಡನ್ ಗಾರ್ಡನ್ಸ್ ಕ್ರೀಡಾಂಗಣ.
ಸಮಯ: ಮಧ್ಯಾಹ್ನ 3.30ಕ್ಕೆ

ಮುಂಬೈ ಇಂಡಿಯನ್ಸ್ / ಚೆನ್ನೈ ಸೂಪರ್ ಕಿಂಗ್ಸ್
ಸ್ಥಳ: ಮುಂಬೈ, ವಾಂಖೇಡೆ ಕ್ರೀಡಾಂಗಣ.
ಸಮಯ: ಸಂಜೆ 7.30ಕ್ಕೆ

ಎತ್ತಿನಗಾಡಿ ಜಾಥಾ ಮೂಲಕ ಮತದಾನ ಜಾಗೃತಿ



ಮೈಸೂರು, ಏ.13– ಲೋಕಸಭಾ ಚುನಾವಣೆ ಹಿನ್ನೆಲೆ ಮತದಾನ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಂಜನಗೂಡು ತಾಲೂಕು ಪಂಚಾಯಿತಿಯ ಸ್ವೀಪ್ ಸಮಿತಿ ವತಿಯಿಂದ ಗ್ರಾಮೀಣ ಸೊಗಡಿನ ಶೈಲಿ ನಲ್ಲಿ ಎತ್ತಿನಗಾಡಿ ಜಾಥಾ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ನಂಜನಗೂಡು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ ಅವರ ಮಾರ್ಗದರ್ಶನದಂತೆ, ಬಿಳಿಗೆರೆ ಹೋಬಳಿ ಮಟ್ಟದಲ್ಲಿ ಕಳೆದ ಬಾರಿ ಮತದಾನ ಪ್ರಮಾಣ ಕಡಿಮೆ ಇರುವ ಗ್ರಾಮ ಪಂಚಾಯಿತಿ ಗಳಿಂದ ಸುತ್ತೂರು ಗ್ರಾಮದಲ್ಲಿ ಎತ್ತಿನಗಾಡಿ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಂಭಾಗದಿಂದ ಬಿಳಿಗೆರೆ ಹೋಬಳಿಯ ಎಲ್ಲಾ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿ, ಸಿಬ್ಬಂದಿ ಹಾಗೂ ಸ್ವಸಹಾಯ ಸಂಘದ ಮಹಿಳೆಯರು ಎತ್ತಿನಗಾಡಿ ಏರಿ ಸುತ್ತೂರಿನ ಪ್ರಮುಖ ರಸ್ತೆಗಳಲ್ಲಿ ಸಾಗಿ ಕಡ್ಡಾಯ ಮತದಾನ ಕುರಿತು ಜಾಗೃತಿ ಮೂಡಿಸಿದರು. ಈ ವೇಳೆ ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ವಿವೇಕ್, ತಾಲೂಕು ಸ್ವೀಪ್ ಸಮಿತಿಯ ದಿನೇಶ್, ಕಾವ್ಯ, ಸುತ್ತೂರು, ಹೊಸಕೋಟೆ, ಬಿಳಿಗೆರೆ, ತುಂನೇರಳೆ, ನಗರ್ಲೆ ಹಾಗೂ ಕಾರ್ಯ ಗ್ರಾಪಂ ಕಾರ್ಯದರ್ಶಿ, ತಾಲೂಕು ಎನ್‌ಆರ್‌ಎಲ್‌ಎಂನ ಸಿಬ್ಬಂದಿ ಹಾಜರಿದ್ದರು.

ಚುನಾವಣಾ ಕರ್ತವ್ಯ ಲೋಪ: ಪಾಲಿಕೆ ಇಂಜಿನಿಯರ್ ಅಮಾನತು

ಮೈಸೂರು, ಏ.13(ಎಂಕೆ)– ಲೋಕಸಭಾ ಚುನಾವಣಾ ಕರ್ತವ್ಯದಲ್ಲಿ ಲೋಪವೆಸಗಿದ ಆರೋಪದ ಮೇಲೆ ಮೈಸೂರು ನಗರಪಾಲಿಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಸ್ಟ್ರಾಂಗ್ ರೂಂ ಮತ್ತು ಮ್ಯಾನ್ ಪವರ್ ನೋಡಲ್ ಅಧಿಕಾರಿ ರಾಜೀವ್‌ನಾಥ್‌ರನ್ನು ಅಮಾನತುಪಡಿಸಿ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಆದೇಶ ಹೊರಡಿಸಿದ್ದಾರೆ. ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವಿದ್ಯುನ್ಮಾನ ಮತಯಂತ್ರಗಳನ್ನು ಜೆಎಸ್‌ಎಸ್ ಕಲಾ ಮತ್ತು ವಿಜ್ಞಾನ ಕಾಲೇಜಿನ ಸ್ಟ್ರಾಂಗ್ ರೂಂನಲ್ಲಿ ಇರಿಸುವ ಕರ್ತವ್ಯದಲ್ಲಿ ಕಾಲೇಜಿನ ಆಡಳಿತ ಮಂಡಳಿ ಜೊತೆ ವ್ಯವಹರಿಸಿ ಮುಖ್ಯದ್ವಾರ ತೆರೆಸುವ ವ್ಯವಸ್ಥೆ ಮಾಡಿಲ್ಲದಿದ್ದರಿಂದ ವಿದ್ಯುನ್ಮಾನ ಮತಯಂತ್ರಗಳಿದ್ದ ವಾಹನ ಸುಮಾರು ಅರ್ಧಗಂಟೆ ಕಾಲ ರಸ್ತೆಯಲ್ಲೇ ನಿಂತಿದೆ. ಅಲ್ಲದೆ ವಿದ್ಯುನ್ಮಾನ ಮತಯಂತ್ರಗಳನ್ನು ಸ್ಟ್ರಾಂಗ್ ರೂಂ ನಲ್ಲಿ ಶೇಖರಿಸಿಡಲು ಮುನ್ನೆಚ್ಚರಿಕೆ ಕ್ರಮ ಕೈಗೊಂಡಿರುವುದಿಲ್ಲ ಎಂಬ ಆರೋಪಗಳು ಮೇಲ್ನೋಟಕ್ಕೆ ಸಾಬೀತಾದ ಹಿನ್ನಲೆ ಜಿಲ್ಲಾಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ಡಿಸಿ ಕಚೇರಿಯಲ್ಲಿ ಅಂಚೆ ಮತದಾನ ಕೇಂದ್ರ ಸ್ಥಾಪನೆ



ಮೈಸೂರು, ಏ.13(ಆರ್‌ಕೆ)–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯ ಅಗತ್ಯ ಸೇವೆ ವರ್ಗದಡಿ ಬರುವ ಗೈರು ಹಾಜರಿ ಮತದಾರರಿಗಾಗಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಕಟ್ಟಡದ ನೆಲಮಹಡಿಯ ಕೊಠಡಿ ಸಂಖ್ಯೆ 10ರಲ್ಲಿ ಅಂಚೆ ಮತದಾನ ಕೇಂದ್ರವನ್ನು ಸ್ಥಾಪಿಸಲಾಗಿದೆ ಎಂದು ಜಿಲ್ಲಾ ಚುನಾವಣಾ ಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ. ಚುನಾವಣಾ ಕರ್ತವ್ಯನಿರತ ಅಧಿಕಾರಿ ಗಳು ಹಾಗೂ ಸಿಬ್ಬಂದಿಗೆ ಅಗತ್ಯ ಸೇವೆಯಡಿ ಕರ್ತವ್ಯ ನಿರ್ವಹಿಸುತ್ತಿರುವವರು ಅಂಚೆ ಮತಪತ್ರದ ಮೂಲಕ ಮತ ಚಲಾಯಿಸಲು ಮತದಾನ ಕೇಂದ್ರ ತೆರೆಯ ಲಾಗಿದ್ದು, ಏ.19ರಿಂದ 21ರವರೆಗೆ ಬೆಳಗ್ಗೆ 9ರಿಂದ ಸಂಜೆ 5 ಗಂಟೆವರೆಗೆ ಕೇಂದ್ರ ತೆರೆದಿರಲಿದ್ದು, ಅಗತ್ಯ ಸೇವೆ ವರ್ಗದಡಿ ಬರುವ ಗೈರು ಹಾಜರಿ ಮತದಾರರು ತಮ್ಮ ಮತವನ್ನು ಚಲಾಯಿಸಬಹುದೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮರಾಜ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಮತಯಾಚನೆ

ಮೈಸೂರು, ಏ.13(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧೆಡೆ ಮತಬೇಟೆ ನಡೆಸಿದರು.

ನಜರ್‌ಬಾದ್‌ನ ಶ್ರೀ ನಿಂಬುಜಾದೇವಿ ಅಮ್ಮನವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಸಾಹುಕಾರ್ ಚನ್ನಯ್ಯ ವೃತ್ತದಿಂದ ಶಾಸಕ ಕೆ.ಹರೀಶ್‌ಗೌಡರೊಂದಿಗೆ ಎಂ.ಲಕ್ಷ್ಮಣ ತೆರೆದ ವಾಹನದಲ್ಲಿ ಪ್ರಚಾರ ನಡೆಸಿದರು. ಬಡಾವಣೆಯ ವಿವಿಧ ರಸ್ತೆಗಳಲ್ಲಿ ನಡೆದ ಪ್ರಚಾರ ರ್‍ಯಾಲಿ ಯಲ್ಲಿ ಹೆಚ್ಚು ಸಂಖ್ಯೆಯ ಮಹಿಳೆಯರು ಭಾಗಿಯಾಗಿ, ಕಾಂಗ್ರೆಸ್‌ಗೆ ಜೈಕಾರ ಹಾಕಿದ್ದು ವಿಶೇಷವಾಗಿತ್ತು.



ಮೈಸೂರು–ಕೊಡಗು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಶಾಸಕ ಕೆ.ಹರೀಶ್ ಗೌಡ ಹಾಗೂ ರಾಜ್ಯ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅವರೊಂದಿಗೆ ಮೈಸೂರಿನಲ್ಲಿ ರೋಡ್ ಶೋ ಮೂಲಕ ಮತಯಾಚಿಸಿದರು.

ಹಾರ್ಡಿಂಜ್ ವೃತ್ತ, ಮಹಾತ್ಮ ಗಾಂಧಿ ವೃತ್ತದ ಮೂಲಕ ಕೆ.ಟಿ.ಸ್ಟ್ರೀಟ್‌ಗೆ ತೆರಳಿದ ಶಾಸಕರು ಹಾಗೂ ಅಭ್ಯರ್ಥಿಗೆ ಕಾಂಗ್ರೆಸ್ ಕಾರ್ಯಕರ್ತರು ಹೂವುಳೆಗರೆದು ಸಂಭ್ರಮಿಸಿದರು. ಇದೇ ವೇಳೆ ಗೆಲುವು ನಿಮ್ಮದೇ ಘೋಷಣೆ ಕೂಗುತ್ತಾ ಲಕ್ಷ್ಮಣ ಅವರ ವಿಶ್ವಾಸ ಹೆಚ್ಚಿಸಿದರು.

ಅಲ್ಲಿಂದ ಮಂಡಿ ಮೊಹಲ್ಲಾಗೆ ತೆರಳಿ ಮತ ಯಾಚಿಸಿದರು. ಇಲ್ಲಿ ಅಪಾರ ಸಂಖ್ಯೆಯ ಕಾರ್ಯಕರ್ತರು ಒಗ್ಗೂಡಿ ಕಾಂಗ್ರೆಸ್ ಶಕ್ತಿ ಪ್ರದರ್ಶಿಸಿದರು.

ಅಶೋಕ ರಸ್ತೆಯಲ್ಲಿ ಮುಸ್ಲಿಂ ಮುಖಂಡರು ಹಾಗೂ ಕಾರ್ಯಕರ್ತರು, ಲಕ್ಷ್ಮಣ ಅವರ ಮೇಲೆ ಹೂವು ಸುರಿದು ಜೈಕಾರ ಹಾಕಿದರು. ಮೀನಾ ಬಜಾರ್‌ನಲ್ಲಿ ಅವರಿಗೆ ಸಾಂಪ್ರದಾಯಿಕ ಟೋಪಿ ಹಾಕಿ, ರುಮಾಲ್ ಹೊದಿಸಿದರು. ಕೆಲ ಯುವಕರು ಲಕ್ಷ್ಮಣ ಅವರನ್ನು ಹೆಗಲ ಮೇಲೆ ಹೊತ್ತು ಕುಣಿದು ಸಂಭ್ರಮಿಸಿದರು. ಮನೆ ಮನೆಗೆ ತೆರಳಿ ಮತಯಾಚಿಸಿದ ಲಕ್ಷ್ಮಣ, ಮಸೀದಿಗೆ ಭೇಟಿ ನೀಡಿದ್ದರು.

ರೋಡ್ ಶೋ ಮೂಲಕ ಕೈಲಾಸಪುರಂಗೆ ತೆರಳುತ್ತಿದ್ದಂತೆ ಅಲ್ಲಿನ ಕಾರ್ಯಕರ್ತರು ಡೊಳ್ಳು–ನಗಾರಿ ಮೂಲಕ ಸ್ವಾಗತಿಸಿದರು. ಮಹಿಳೆಯರು ಆರತಿ ಬೆಳಗಿ, ಹರಸಿದರು. ಅಲ್ಲಿಂದ ಬಂಬೂಬಜಾರ್, ನಾರಾಯಣಶಾಸ್ತ್ರಿ ರಸ್ತೆ ಮತ್ತಿತರ ಕಡೆ ಬಿರುಸಿನ ಮತಯಾಚನೆ ನಡೆಸಿದರು.

ಈ ವೇಳೆ ಎಂ.ಲಕ್ಷ್ಮಣ ಮಾತನಾಡಿ, ಇದು ದೇಶದ ಮಹತ್ವದ ಚುನಾವಣೆ. ಎಲ್ಲಾ ಧರ್ಮ, ಜಾತಿಯವರೂ ನೆಮ್ಮದಿಯಿಂದ ಜೀವನ ನಡೆಸುವ ವಾತಾವರಣ ನಿರ್ಮಾಣವಾಗಬೇಕಾದರೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಅವಶ್ಯಕ. ಕಾಂಗ್ರೆಸ್ ಸದಾ ನಿಮ್ಮ ಜೊತೆ ಇರುವ ಪಕ್ಷವಾಗಿದೆ. ನಾನು ಬೀದಿಯಲ್ಲಿ ಇರುವವನು, ನಿಮ್ಮ ಸಮಸ್ಯೆ ಬಲ್ಲವನು. ಆದ್ದರಿಂದ ನಿಮ್ಮ ಸೇವೆಗೆ ಅವಕಾಶ ಕೊಡಿ ಎಂದು ಮನವಿ ಮಾಡಿದರು.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿರುವ ಕಾಂಗ್ರೆಸ್, ಕೇಂದ್ರದಲ್ಲೂ ಅಧಿಕಾರಕ್ಕೆ ಬರಬೇಕು. ಆಗ ದೇಶ ಸುಭಿಕ್ಷವಾಗಿರುತ್ತದೆ. ನೀವು ಬೆಂಬಲ ನೀಡಿದರೆ ಲಕ್ಷ್ಮಣ ಅವರು ಸಂಸದರಾಗುವುದರಲ್ಲಿ ಅನುಮಾನವೇ ಇಲ್ಲ. ಒಮ್ಮೆ ಅವಕಾಶ ಕೊಡಿ, ಅವರ ಅಭಿವೃದ್ಧಿ ಕೆಲಸವನ್ನು ನೀವೇ ಮೆಚ್ಚುತ್ತೀರಿ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಮಿತ್ರ

7 ವರ್ಷಗಳ ನಂತರ ಮುನಿಸು ಮುರಿದ ಸಿದ್ದು, ಪ್ರಸಾದ್

ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ನಿವಾಸಕ್ಕೆ ಭೇಟಿ ನೀಡಿ, ಮಾತುಕತೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಮೈಸೂರು, ಏ.13(ಎಂಟಿವೈ)– ರಾಜಕೀಯ ಕ್ಷೇತ್ರದಲ್ಲಿ ಯಾರೂ ಶಾಶ್ವತ ಮಿತ್ರರೂ ಅಲ್ಲ, ಶತೃಗಳೂ ಅಲ್ಲ ಎಂಬ ಮಾತು ಮತ್ತೊಮ್ಮೆ ಸಾಬೀತಾಗಿದೆ. ಕಳೆದ 7 ವರ್ಷಗಳಿಂದ ಅಂತರ ಕಾಯ್ದುಕೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಇಂದು ಮುಖಾಮುಖಿಯಾದರು.

ಉಭಯ ನಾಯಕರ ಭೇಟಿ ಒಂದಾಗುವ ಮೂಲಕ ಹಳೇ ಮೈಸೂರು ಭಾಗದ ರಾಜಕಾರಣದಲ್ಲಿ ಸಂಚಲವನ್ನುಂಟು ಮಾಡಿದೆ. ಲೋಕಸಭಾ ಚುನಾವಣೆಗೆ ದಿನಗಳು ಸಮೀಪಿಸುತ್ತಿದ್ದಂತೆ ಮೈಸೂರು ಭಾಗದ ಈ ಪ್ರಭಾವಿ ನಾಯಕರ ಸಮಾಗಮ ರಾಜಕೀಯ ಧ್ರುವೀಕರಣಕ್ಕೆ ವೇದಿಕೆ ದೃಷ್ಟಿಸಿದಂತಿದೆ.

ಈ ಇಬ್ಬರೂ ನಾಯಕರು ಸುಮಾರು 10 ನಿಮಿಷ ಉಭಯ ಕುಶಲೋಪರಿ ನಡೆಸಿ, ಕೆಲ ನೆನಪುಗಳನ್ನು ಮೆಲುಕು ಹಾಕುವ ಮೂಲಕ ಮುನಿಸು ಮರೆತರು.

ಪ್ರಸಾದ್ ನಿವಾಸಕ್ಕೆ ಸಿಎಂ ಭೇಟಿ: ಲೋಕಸಭಾ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಲು ಮೈಸೂರಲ್ಲಿ ವಾಸ್ತವ್ಯ ಹೂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಜಯಲಕ್ಷ್ಮೀಪುರಂನಲ್ಲಿರುವ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ನಿವಾಸಕ್ಕೆ ಆಗಮಿಸಿದರು. ಸಿಎಂ ಅವರನ್ನು ಶ್ರೀನಿವಾಸ್ ಪ್ರಸಾದ್ ಕುಟುಂಬ ಸದಸ್ಯರು ಆತ್ಮೀಯವಾಗಿ ಬರಮಾಡಿಕೊಂಡರು. ಒಳ ಬಂದು ಸೋಫಾ ಮೇಲೆ ಸಿಎಂ ಸಿದ್ದರಾಮಯ್ಯ, ಶ್ರೀನಿವಾಸಪ್ರಸಾದ್ ಕುಳಿತುಕೊಂಡರು. ಕೊಠಡಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಸಂಸದ ಶ್ರೀನಿವಾಸ್ ಪ್ರಸಾದ್ ಕೊಠಡಿಯಿಂದ ಸೋಫಾ ಮೇಲೆ ಕುಳಿತಿದ್ದ ಸಿದ್ದರಾಮಯ್ಯರತ್ತ ನಗು ಬೀರಿದರು.

ಈ ವೇಳೆ ಸೋಫಾದಿಂದ ಮೇಲೇಳಲು ಸಿದ್ದರಾಮಯ್ಯ ಪ್ರಯತ್ನಿಸುತ್ತಿದ್ದಂತೆ ಶ್ರೀನಿವಾಸ್‌ಪ್ರಸಾದ್ ಸಿಎಂ ಅವರ ಎರಡೂ ಭುಜದ ಮೇಲೆ ಕೈಯಿಟ್ಟು ಕುಳಿತುಕೊಳ್ಳುವಂತೆ ಹೇಳಿದರು. ಆದರೂ ಸಿದ್ದರಾಮಯ್ಯ ನಿಂತುಕೊಂಡು ಪ್ರಸಾದ್ ಅವರ ಕೈ ಹಿಡಿದುಕೊಂಡು ಪಕ್ಕದಲ್ಲಿ ಕೂರಿಸಿಕೊಂಡರು. ಬಳಿಕ ಸಿದ್ದ ರಾಮಯ್ಯ ಅವರು ಪ್ರಸಾದ್ ಅವರ ಆರೋಗ್ಯ ವಿಚಾರಿಸಿದರು. ಇಬ್ಬರು ಸುಮಾರು ಹತ್ತು ನಿಮಿಷ ಪರಸ್ಪರ ಮಾತನಾಡಿದರು. ಈ ಸಂದರ್ಭದಲ್ಲಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಕೆ.ಹರೀಶ್ ಗೌಡ, ಹೆಚ್.ಎಂ.ಗಣೇಶಪ್ರಸಾದ್, ಮುಡಾ ಅಧ್ಯಕ್ಷ ಕೆ.ಮರೀಗೌಡ ಇನ್ನಿತರರಿದ್ದರು.



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ನಿವಾಸಕ್ಕೆ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ, ಚರ್ಚಿಸಿದರು.

ಪ್ರಸಾದ್, ನಾನು ದೀರ್ಘ ಕಾಲದ ಸ್ನೇಹಿತರು

ಕಾಂಗ್ರೆಸ್ ಮೇಲೆ ಸಿಂಪಥಿ ಇರಲಿ ಎಂದು ಭೇಟಿ: ಸಿಎಂ ಸಿದ್ದು

ಮೈಸೂರು, ಏ.13(ಎಂಟಿವೈ)– ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ನಾನು ದೀರ್ಘಕಾಲದ ಸ್ನೇಹಿತರಾಗಿದ್ದು, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮೇಲೆ ಸಿಂಪಥಿ ಇರಲಿ ಎಂದು ಕೇಳಿಕೊಂಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರ ಮನೆಗೆ ಭೇಟಿ ನೀಡಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಶ್ರೀನಿವಾಸ್‌ಪ್ರಸಾದ್ ಅವರೊಂದಿಗೆ ನನಗೆ ದೀರ್ಘಕಾಲದ ಸ್ನೇಹ. ರಾಜಕೀಯ ಕಾರಣದಿಂದ ಅವರು ಬಿಜೆಪಿಯಲ್ಲಿದ್ದರು. ನಾನು ಕಾಂಗ್ರೆಸ್‌ನಲ್ಲಿದ್ದೇನೆ. ಈಗ ಅವರು ನಿವೃತ್ತಿಯಾಗಿದ್ದಾರೆ. ಅವರನ್ನು ಭೇಟಿ ಮಾಡಿ, ಆರೋಗ್ಯ ವಿಚಾರಿಸಬೇಕು ಎಂದು ಈಗ ಅವರ ನಿವಾಸಕ್ಕೆ ಬಂದಿದ್ದೇನೆ ಎಂದರು.

ಶ್ರೀನಿವಾಸ್‌ಪ್ರಸಾದ್ ಅವರು ಈಗಾಗಲೇ ರಾಜಕೀಯ ನಿವೃತ್ತಿ ಘೋಷಿಸಿದ್ದಾರೆ. ಅಲ್ಲದೆ, ಯಾವುದೇ ಪಕ್ಷಕ್ಕೆ ಸೇರುವುದಿಲ್ಲ. ಯಾರ ಪರ ಪ್ರಚಾರವೂ ಮಾಡುವುದಿಲ್ಲ ಎಂದಿದ್ದಾರೆ. ಈ ಕಾರಣದಿಂದ ಇಂದು ನಾನು ಅವರೊಂದಿಗೆ ರಾಜಕೀಯ ಚರ್ಚೆ ಮಾಡಿಲ್ಲ. ಆರೋಗ್ಯ ವಿಚಾರಿಸಿದ್ದೇನೆ. ಅಲ್ಲದೆ, ನೀವು (ಶ್ರೀನಿವಾಸಪ್ರಸಾದ್) ಕಾಂಗ್ರೆಸ್‌ನಲ್ಲಿ ಇದ್ದವರು, ಕಾಂಗ್ರೆಸ್ ಬಗ್ಗೆ ಸಿಂಪಥಿ ಇರಲಿ ಎಂದು ಹೇಳಿದ್ದೇನೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಸಮಾವೇಶಕ್ಕೆ ಕರೆದರೂ ಹೋಗಲ್ಲ

ಸಂಸದ ಶ್ರೀನಿವಾಸ ಪ್ರಸಾದ್ ಸ್ಪಷ್ಟನೆ

ಮೈಸೂರು,ಏ.13(ಎಂಟಿವೈ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಾಳೆ(ಏ.14) ನಡೆಯಲಿರುವ ಪ್ರಧಾನಿ ನರೇಂದ್ರ ಮೋದಿ ಸಮಾವೇಶಕ್ಕೆ ನನಗೆ ಆಹ್ವಾನ ನೀಡಿಲ್ಲ. ಅವರು ಕರೆದರೂ ನಾನು ಹೋಗುವುದಿಲ್ಲ ಎಂದು ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಸ್ಪಷ್ಟಪಡಿಸಿದ್ದಾರೆ.

ಚಾ.ನಗರದಲ್ಲಿ ಕಾಂಗ್ರೆಸ್‌ಗೆ ಉತ್ತಮ ವಾತಾವರಣ

ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ತಮ್ಮ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಧಾನಿ ಮೋದಿ ಭಾಗವಹಿಸುವ ಕಾರ್ಯಕ್ರಮಕ್ಕೆ ನನಗೆ ಆಹ್ವಾನ ಬಂದಿಲ್ಲ. ಆಹ್ವಾನ ಬರುವುದೂ ಇಲ್ಲ. ಅವರು ಕರೆದರೂ ನಾನು ಹೋಗುವುದು ಇಲ್ಲ. ಈಗಾಗಲೇ ಯಾವುದೇ ಪಕ್ಷದ, ಅಭ್ಯರ್ಥಿಪರ ಮತ ಯಾಚಿಸುವುದಿಲ್ಲ ಎಂದಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಸಿಎಂ ಭೇಟಿ ಖುಷಿ ತಂದಿದೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭೇಟಿ ಖುಷಿ ತಂದಿದೆ. ಸಿದ್ದರಾಮಯ್ಯ ಅವರು ಮನೆಗೆ ಬರುತ್ತಾರೆ ಎಂದು ನಾನು ನಿರೀಕ್ಷೆ ಮಾಡಿರಲಿಲ್ಲ. ನಾವಿಬ್ಬರು ಸಾಕಷ್ಟು ವರ್ಷ ಒಟ್ಟಿಗೆ ಇದ್ದವರು. ಕೆಲ ಕಾರಣದಿಂದ ಬೇರೆ ಬೇರೆ ಪಕ್ಷದಲ್ಲಿದ್ದೇವೆ. ಈಗಾಗಲೇ ನಾನು ರಾಜಕೀಯದಿಂದ ನಿವೃತ್ತಿ ಹೊಂದಿದ್ದೇನೆ. ಈ ಕಾರಣದಿಂದ ಭೇಟಿ ವೇಳೆ ರಾಜಕೀಯ ಚರ್ಚೆ ನಡೆದಿಲ್ಲ. ಆರೋಗ್ಯ ವಿಚಾರಿಸಿದರು. ಇಬ್ಬರು ಆತ್ಮೀಯತೆಯಿಂದ ನೆನಪನ್ನು ಮೆಲುಕು ಹಾಕಿದ್ದೇವೆ. ಇಬ್ಬರ ಭೇಟಿ ಸಂತೋಷವನ್ನುಂಟು ಮಾಡಿದೆ ಎಂದರು.

ಇನ್ನು ಮುಂದೆ ರಾಜಕೀಯ ವೈರತ್ವ ಇರಲ್ಲ: ಇದುವರೆಗೆ ಪರಸ್ಪರ ಬೇರೆ ಪಕ್ಷದಲ್ಲಿದ್ದೆವು. ಈ ವೇಳೆ ನಾನು ಸಿಎಂ ಸಿದ್ದರಾಮಯ್ಯ ವಿರುದ್ಧ ಕಟುವಾಗಿ ಟೀಕೆ ಮಾಡಿದ್ದೇನೆ. ವಿರೋಧ ಪಕ್ಷದಲ್ಲಿದ್ದವರನ್ನು ಹೊಗಳಲು ಸಾಧ್ಯವಿಲ್ಲ. ಹಾಗಾಗಿ ಟೀಕೆ ಮಾಡಬೇಕಾಗುತ್ತದೆ. ಇಂದಿನ ಭೇಟಿ ನಂತರ ಈ ಹಿಂದೆ ಇದ್ದ ರಾಜಕೀಯ ವೈರತ್ವ ಮುಕ್ತಾಯಗೊಂಡಿದೆ. 7 ವರ್ಷಗಳ ಮುನಿಸು ಕೊನೆಗೊಂಡಿದೆ ಎಂದರು.

ಕಾಂಗ್ರೆಸ್‌ಗೆ ಉತ್ತಮ ವಾತಾವರಣವಿದೆ: ಪ್ರಸ್ತುತ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ಕಾಂಗ್ರೆಸ್‌ಗೆ ಉತ್ತಮ ವಾತಾವರಣ ಇದೆ ಎಂದು ಹೇಳಿದರು.

ಯದುವೀರ್ ಪರ ಮಾಜಿ ಮೇಯರ್ ಮತಯಾಚನೆ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಪರ ಮಾಜಿ ಮೇಯರ್ ಶಿವಕುಮಾರ್, ಕುವೆಂಪುನಗರದಲ್ಲಿ ಮತಯಾಚಿಸಿದರು.

ಮೈಸೂರು, ಏ.13(ಎಂಕೆ)– ಧನ್ಯತಾ ಭಾವದೊಂದಿಗೆ ರಾಜವಂಶಸ್ಥರಾದ ಯದುವೀರ್ ಅವರಿಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಜನತೆ ಮತ ನೀಡಲಿದ್ದಾರೆ ಎಂದು ಮಾಜಿ ಮೇಯರ್ ಶಿವಕುಮಾರ್ ಹೇಳಿದರು.

ಮೈಸೂರಿನ ಕುವೆಂಪುನಗರದ ವಿವಿಧೆಡೆ ಶುಕ್ರವಾರ ಮನೆ ಮನೆಗೆ ತೆರಳಿ ಮತಯಾಚಿಸಿದ ಅವರು, ಬಿಜೆಪಿ ಅಭ್ಯರ್ಥಿ ಯದುವೀರ್ ಅವರಿಗೆ ಮತ ನೀಡುವಂತೆ ಮನವಿ ಮಾಡಿದರು. ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಯದುವೀರ್ ಅವರ ಪರವಾಗಿ ಕುವೆಂಪುನಗರದಲ್ಲಿ ಮತಯಾಚಿಸಿದ್ದು, ಎಲ್ಲೆಡೆ ಮತದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೈಸೂರಿನ ಜನತೆ ಒಡೆಯರ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದು, ಧನ್ಯತಾ ಭಾವದಿಂದ ಮತ ನೀಡಿ, ಯದುವೀರ್ ಅವರನ್ನು ಸಂಸದರನ್ನಾಗಿ ಮಾಡಲಿದ್ದಾರೆ ಎಂದರು.

ದೇಶದ ಜನತೆಯೂ ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗುವುದನ್ನು ಬಯಸಿದ್ದಾರೆ. ರಷ್ಯಾ–ಉಕ್ರೇನ್ ನಡುವಿನ ಯುದ್ಧ ನಿಲ್ಲಲು ಪ್ರಧಾನಿ ಮೋದಿಯವರ ಮಧ್ಯಸ್ಥಿಕೆ ಅವಶ್ಯವಿದೆ ಎಂದು ಇಡೀ ವಿಶ್ವವೇ ಒಪ್ಪಿಕೊಂಡಿದೆ. ಹಾಗೆಯೇ ವಿಶ್ವವೇ ಮೋದಿ ಹಾಗೂ ದೇಶದ ಮಧ್ಯಸ್ಥಿಕೆಯನ್ನು ಬಯಸಿದೆ. ಅದರಂತೆ ಮೋದಿ ಯವರು ಮತ್ತೊಮ್ಮೆ ಪ್ರಧಾನಿ ಹಾಗೂ ಯದುವೀರ್ ಅವರು ಸಂಸದರಾಗುವುದು ಖಚಿತ ಎಂದು ಹೇಳಿದರು.

ಜೂ.4ರಂದು ನಾಲ್ವಡಿ ಕೃಷ್ಣರಾಜ ಒಡೆಯರ ಜಯಂತಿ. ಅದೇ ದಿನ ಲೋಕಸಭಾ ಚುನಾವಣೆಯ ಫಲಿತಾಂಶವೂ ಹೊರಬೀಳಲಿದೆ. ಯದುವೀರ್ ಅವರ ವಿಜಯದೊಂದಿಗೆ ನಾಲ್ವಡಿ ಕೃಷ್ಣರಾಜ ಒಡೆಯರ ಜಯಂತಿ ಆಚರಿಸುವ ಮೂಲಕ ಸ್ಮರಿಸಲಾಗುವುದು. ಅದರಂತೆ ಕ್ಷೇತ್ರದ ಜನತೆಯೂ ಯದುವೀರ್ ಅವರನ್ನು ಗೆಲ್ಲಿಸುವ ಸಂಕಲ್ಪ ಮಾಡಿದ್ದಾರೆ ಎಂದರು.



ವಿಧಾನಪರಿಷತ್ ಮಾಜಿ ಸದಸ್ಯರೂ ಆದ ಕಾಂಗ್ರೆಸ್ ಮುಖಂಡ ಸಂದೇಶ್ ನಾಗರಾಜ್, ಅವರ ಪುತ್ರ, ಉದ್ಯಮಿ ಸಂದೇಶ್.ಎನ್ ಅವರನ್ನು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಭೇಟಿ ಮಾಡಿ, ಬೆಂಬಲ ಕೋರಿದರು. ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಚಿತ್ರದಲ್ಲಿದ್ದಾರೆ.



ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಶಾಸಕ ತನ್ವೀರ್ ಸೇಠ್ ಅವರನ್ನು ಶೋಷಿತ ಸಮುದಾಯದ ಅಧ್ಯಕ್ಷರೂ ಆದ ಮಾಜಿ ಶಾಸಕ ವೇಣುಗೋಪಾಲ್, ಕೆಪಿಸಿಸಿ ಸದಸ್ಯ ಪಿ. ರಾಜು, ಮಾಜಿ ಕಾರ್ಪೋರೇಟರ್‌ಗಳಾದ ನಾಗಭೂಷಣ್, ಎನ್.ಬಿ. ತಿವಾರಿ, ಕೆಪಿಸಿಸಿ ಓಬಿಸಿ ಪ್ರಧಾನ ಕಾರ್ಯದರ್ಶಿ ಮೊಗಣ್ಣಾಚಾರ್, ಮುಖಂಡರಾದ ಕೆ.ಎಸ್.ಶಿವರಾಂ, ಯೋಗೀಶ್‌ಕುಮಾರ್ ಉಪ್ಪಾರ್, ಕಮಲ, ಪ್ರಕಾಶ್, ಲೋಕೇಶ್ ಇನ್ನಿತರರು ಭೇಟಿ ಮಾಡಿ ಲೋಕಸಭಾ ಚುನಾವಣೆ ಬಗ್ಗೆ ಚರ್ಚಿಸಿದ್ದಲ್ಲದೇ, ಅವರನ್ನು ಅಭಿನಂದಿಸಿದರು.

ಬೆಂಗಳೂರಿನ ಜಯನಗರದಲ್ಲಿ ಕಾರಲ್ಲಿತ್ತು ಕೋಟಿ ಕೋಟಿ ಹಣ



ಬೆಂಗಳೂರು, ಏ.13– ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಗಳು ಚೆಕ್‌ಪೋಸ್ಟ್‌ಗಳಲ್ಲಿ ಹದ್ದಿನ ಕಣ್ಣಿಟ್ಟಿದ್ದಾರೆ. ಇನ್ನು ಬೆಂಗಳೂರಿನ ಜಯನಗರದ ಕಾರೊಂದರಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 1.40 ಕೋಟಿ ರೂಪಾಯಿ ಹಣವನ್ನು ಚುನಾವಣಾಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ.

ಜಯನಗರದಲ್ಲಿ ಬೆಂಜ್ ಕಾರಿನಲ್ಲಿ ಕೋಟಿ ಕೋಟಿ ಹಣವನ್ನು ಸಾಗಿಸಲಾಗುತ್ತಿದೆ ಎಂದು ಅಪರಿಚಿತರು ಕರೆ ಮಾಡಿದ ಹಿನ್ನೆಲೆಯಲ್ಲಿ ಅಖಾಡಕ್ಕಿಳಿದ ಅಧಿಕಾರಿಗಳು, ಸ್ಕೂಟಿಯಲ್ಲಿದ್ದ ಕೋಟಿ ಕೋಟಿ ಹಣವನ್ನು ಕಾರಿಗೆ ಶಿಫ್ಟ್ ಮಾಡಿದ್ದಾರೆ ಎಂಬ ಮಾಹಿತಿ ಸಿಕ್ಕಿದ್ದು ಕೂಡಲೇ ಎರಡು ಕಾರುಗಳನ್ನು ನಿಲ್ಲಿಸಿ ಪರಿಶೀಲನೆ ಮಾಡುವಾಗ ಕೋಟಿ ಕೋಟಿ ಹಣ ಪತ್ತೆಯಾಗಿದೆ. ಯಾರಿಗೂ ಅನುಮಾನ ಬಾರದಿರಲಿ ಎಂದು ಕಿಡಿಗೇಡಿಗಳು ಸುಮಾರು 1.40 ಕೋಟಿ ರೂ. ಹಣವನ್ನು ಗೋಣಿಚೀಲದಲ್ಲಿ ತುಂಬಿದ್ದರು. ಅಧಿಕಾರಿಗಳು ತಪಾಸಣೆಗೆ ಮುಂದಾದಾಗ ಮಾವಿನ ಹಣ್ಣಿನ ಬ್ಯಾಗ್ ಎಂದು ಸಬೂಬು ಹೇಳಿ ಕಾರನ್ನು ಲಾಕ್ ಮಾಡಿದ್ದಾರೆ. ಅನುಮಾನಗೊಂಡ ಚುನಾವಣಾಧಿಕಾರಿಗಳು ಕಾರಿನ ಗ್ಲಾಸ್ ಒಡೆದು ಪರಿಶೀಲನೆ ನಡೆಸಿದಾಗ ನಗದು ಪತ್ತೆಯಾಗಿದೆ. ಕಂತೆ ಕಂತೆ ಹಣ ಸಿಗುತ್ತಿದ್ದಂತೆ ಕಾರಿನಲ್ಲಿದ್ದ ಐವರು ನಾಪತ್ತೆಯಾಗಿದ್ದಾರೆ ಎಂದು ತಿಳಿದು ಬಂದಿದೆ.

ಚಿಕಿತ್ಸೆ ಫಲಕಾರಿಯಾಗದೆ ದುಬಾರೆ ಶಿಬಿರದಲ್ಲಿ ಮೃತಪಟ್ಟ ಮರಿಯಾನೆ

ಸಿದ್ದಾಪುರ, ಏ.13– ಅವರೆಗುಂದ ಬಸವನ ಹಳ್ಳಿಯ ಬಳಿ ಆಹಾರ ತ್ಯಜಿಸಿ ನಿತ್ರಾಣ ಗೊಂಡಿದ್ದ 5 ತಿಂಗಳ ಮರಿಯಾನೆ ಚಿಕಿತ್ಸೆ ಫಲಕಾರಿಯಾಗದೆ ದುಬಾರೆ ಶಿಬಿರದಲ್ಲಿ ಮೃತಪಟ್ಟಿದೆ. ಕಳೆದೆರಡು ದಿನಗಳಿಂದ ವನ್ಯ ಜೀವಿ ವೈದ್ಯ ಡಾ.ಚೆಟ್ಟಿಯಪ್ಪ ಮರಿಯಾನೆಗೆ ಚಿಕಿತ್ಸೆಯೊಂದಿಗೆ ಆರೈಕೆ ಮಾಡಿದ್ದರು. ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡ ನಂತರ ದುಬಾರೆ ಅರಣ್ಯ ಇಲಾಖೆ ವಾಹನದಲ್ಲಿ ದುಬಾರೆ ಶಿಬಿರದಲ್ಲಿ ಆರೈಕೆಗೆ ಸ್ಥಳಾಂತರಿಸಲಾಗಿತ್ತು.

ಗಂಜಿ, ಹಾಲು ಸೇರಿದಂತೆ ಗ್ಲೂಕೋಸ್ ನೀಡಿ ಆರೈಕೆಯೊಂದಿಗೆ ಮತ್ತೆ ಚಿಕಿತ್ಸೆ ಮುಂದುವರಿಸಿ ನಿಗಾ ವಹಿಸಲಾಗಿತ್ತು. ಬೆಳಗಿನ ಜಾವ



ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದೆ. ಇಲಾಖೆಯ ನಿಯಮಾನುಸಾರ ಮೃತಪಟ್ಟ ಮರಿಯಾನೆಯನ್ನು ಅಂತ್ಯಸಂಸ್ಕಾರ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿದ್ದಾಪುರ ಬಳಿ ಬೈಕ್‌ನಲ್ಲಿ ಹೋಗುತ್ತಿದ್ದ ಸಹೋದರರ ಮೇಲೆ ಕಾಡಾನೆ ದಾಳಿ

ಓರ್ವನಿಗೆ ಗಾಯ, ಮತ್ತೊಬ್ಬ ಪಾರು

ಮಡಿಕೇರಿ,ಏ.13– ಬೈಕ್‌ನಲ್ಲಿ ತೆರಳುತ್ತಿದ್ದ ಸಹೋದರರ ಮೇಲೆ ಕಾಡಾನೆ ದಾಳಿ ಮಾಡಿರುವ ಘಟನೆ ಸಿದ್ದಾಪುರ ಸಮೀಪದ ಅತ್ತಿಮಂಗಲದಲ್ಲಿ ನಡೆದಿದೆ. ನೆಲ್ಯಹುದಿಕೇರಿಯ ಎಂ.ಜಿ. ಕಾಲನಿ ನಿವಾಸಿ ರುಶಾದ್ ಹಾಗೂ ರಾಶೀದ್ ಅವರುಗಳು ಅರೆಕಾಡಿಗೆ ತೆರಳುತ್ತಿದ್ದ ಸಂದರ್ಭ ಅತ್ತಿಮಂಗಲ ತಲುಪುತ್ತಿದ್ದಂತೆ ಕಾಫಿ ತೋಟದಿಂದ ರಸ್ತೆಗೆ ಬಂದ ಕಾಡಾನೆ ಬೈಕಿನ ಮೇಲೆ ದಾಳಿ ಮಾಡಿದೆ ಇದರಿಂದ ರುಶಾದ್ ಹೊಟ್ಟೆ ಹಾಗೂ ಕಾಲಿಗೆ ಗಾಯವಾಗಿದ್ದು, ಸಹೋದರ ರಾಶಿದ್ ಓಡಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಸ್ಥಳೀಯರು ಗಾಯಾಳುವನ್ನು ಸಿದ್ದಾಪುರ ಸರಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ.



ಸಿದ್ದಾಪುರ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿದ ಡಿಆರ್‌ಎಫ್‌ಒ ಸುಬ್ರಾಯ ಅವರನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು. ಈ ಭಾಗದಲ್ಲಿ ಕಾಡಾನೆ ಹಾವಳಿ ಮಿತಿ ಮೀರಿದ್ದು, ಕಳೆದ ಹಲವು ದಿನಗಳಿಂದ ದಾಂಧಲೆ ನಡೆಸುತ್ತಿದೆ. ವಾಹನ ಸವಾರರ ಮೇಲೆ ಹಲವು ಬಾರಿ ದಾಳಿಗೆ ಯತ್ನಿಸಿದೆ. ಅರಣ್ಯ ಇಲಾಖೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಯದುವೀರ್ ಗೆಲುವಿಗೆ ಪೂರಕ ವಾತಾವರಣವಿದೆ

ಬಿಜೆಪಿ-ಜೆಡಿಎಸ್ ಪ್ರಮುಖರ ಸಭೆಯಲ್ಲಿ ಎಂಎಲ್‌ಸಿ ಹೆಚ್.ವಿಶ್ವನಾಥ್ ವಿಶ್ವಾಸ

ಮಡಿಕೇರಿ,ಏ.13– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಯಾಗಿರುವ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಗೆಲುವಿಗೆ ಪೂರಕವಾಗಿ ಎರಡೂ ಪಕ್ಷಗಳು ಪರಸ್ಪರ ಅರ್ಥೈಸಿಕೊಂಡು ಮುನ್ನಡೆಯುವ ಮೂಲಕ, ಮೈಸೂರು ರಾಜವಂಶಸ್ಥರ ಕುಡಿಯ ಗೆಲುವಿಗೆ ಕಾರಣೀಭೂತರಾಗೋಣ ಎಂದು ಮಾಜಿ ಸಚಿವರು ಹಾಗೂ ಹಾಲಿ ಎಂಎಲ್‌ಸಿ ಹೆಚ್.ವಿಶ್ವನಾಥ್ ಆಶಯ ವ್ಯಕ್ತಪಡಿಸಿದರು.

ನಗರದ ವಾಣಿಜ್ಯೋದ್ಯಮಿಗಳ ವಿವಿಧೋದ್ದೇಶ ಸಭಾಂಗಣದಲ್ಲಿ ನಡೆದ ಬಿಜೆಪಿ ಮತ್ತು ತಟಸ್ಥವಾಗಿ ಉಳಿದಿದ್ದ ಜೆಡಿಎಸ್ ಪ್ರಮುಖರನ್ನು ಒಳಗೊಂಡ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಬಿಜೆಪಿ ನಾಯಕರು ಜೆಡಿಎಸ್ ಅನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಚುನಾವಣೆಯಲ್ಲಿ ಮುಂದುವರೆಯಬೇಕೆಂದು ಕಿವಿ ಮಾತು ಹೇಳಿದರಲ್ಲದೇ, ಪ್ರಸ್ತುತ ವಾತಾವರಣ ಯದುವೀರ್ ಅವರ ಗೆಲುವಿಗೆ ಪೂರಕವಾಗಿದೆ ಎಂದು ಅಭಿಪ್ರಾಯಿಸಿದರು.

ಇಡೀ ಜಗತ್ತಿನ ಅತ್ಯಂತ ದೊಡ್ಡ ಜನತಾಂತ್ರಿಕ ವ್ಯವಸ್ಥೆಯ, 145 ಕೋಟಿ ಜನಸಂಖ್ಯೆ ಹೊಂದಿರುವ, ಜನರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಬೇಕಾಗಿರುವ ಅತ್ಯಂತ ಮಹತ್ವದ ಲೋಕಸಭಾ ಚುನಾವಣೆ ಇದಾಗಿದೆ. ಈ ಹಿನ್ನೆಲೆಯಲ್ಲಿ ತಟಸ್ಥರಾಗಿದ್ದ ಇಲ್ಲಿನ ಜೆಡಿಎಸ್ ಪ್ರಮುಖರನ್ನು ಸಂಪರ್ಕಿಸಿ ಅವರನ್ನು ಈ ಚುನಾವಣೆಯಲ್ಲಿ ಯದುವೀರ್ ಪರವಾಗಿ ಸಕ್ರಿಯರಾಗುವಂತೆ ಮನವಿ ಮಾಡಿದ್ದೇನೆ ಎಂದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕಳೆದ ಒಂದು ದಶಕದ ಮೋದಿ ಆಡಳಿತವನ್ನು ಇಡೀ ವಿಶ್ವವೇ ಮೆಚ್ಚಿದೆ ಇಂತಹ ಸರ್ಕಾರದ ವಿರುದ್ಧ 'ಐಎನ್‌ಡಿಐಎ' ಎನ್ನುವ ಕೂಟವನ್ನು ಕಟ್ಟಿ ಮಾಡುತ್ತಿರುವ ಸುಳ್ಳು ಆರೋಪಗಳಿಗೆ ಈ ಲೋಕಸಭಾ ಚುನಾವಣೆಯಲ್ಲಿ ಉತ್ತರ ನೀಡಬೇಕಾಗಿದೆ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಸಂವಿಧಾನಕ್ಕೆ ಅಪಾಯವೆನ್ನುವ ಸುಳ್ಳು ಆರೋಪಗಳನ್ನು ಮಾಡಲಾಗುತ್ತಿದೆ. ತುರ್ತು ಪರಿಸ್ಥಿತಿ ಸೇರಿದಂತೆ ವಿವಿಧ ಸಂದರ್ಭಗಳಲ್ಲಿ ಸಂವಿಧಾನವನ್ನು ದುರುಪಯೋಗಪಡಿಸಿಕೊಂಡದ್ದು ಕಾಂಗ್ರೆಸ್ ಪಕ್ಷ ಎಂದು ಕಟುವಾಗಿ ನುಡಿದರು.

ಇದು ಗ್ಯಾರಂಟಿಗಳ ಚುನಾವಣೆಯಲ್ಲ: ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಂಚ ಗ್ಯಾರಂಟಿ ನೀಡಿದ್ದರೆ, ಲೋಕಸಭಾ ಚುನಾವಣೆಯಲ್ಲಿ ಇದರ ಐದು ಪಟ್ಟಿನ 25 ಗ್ಯಾರಂಟಿಗಳನ್ನು ಕಾಂಗ್ರೆಸ್ ಘೋಷಿಸಿದೆ ಎಂದು ಬೋಪಯ್ಯ ಟೀಕಿಸಿದರು. ಈ ಚುನಾವಣೆ ರಾಷ್ಟ್ರೀಯ ಹಿತಾಸಕ್ತಿಯ, ಭದ್ರತೆಯ, ದೇಶದ ಭವಿಷ್ಯವನ್ನು ನಿರೂಪಿಸುವ ಚುನಾವಣೆಯೇ ಹೊರತು 'ಗ್ಯಾರಂಟಿಗಳ ಚುನಾವಣೆ' ಅಲ್ಲ ಎಂದರು. ಜೆಡಿಎಸ್ ಮಾಜಿ ಜಿಲ್ಲಾಧ್ಯಕ್ಷ ಕೆ.ಎಂ. ಗಣೇಶ್, ಎಂಎಲ್‌ಸಿ ಸುಜಾ ಕುಶಾಲಪ್ಪ, ಸುನಿಲ್ ಸುಬ್ರಮಣಿ ಮಾತನಾಡಿದರು.

ಜೆಡಿಎಸ್ ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆದಿಲ್ ಪಾಷ ಮಾತನಾಡಿ, ಪ್ರಸ್ತುತ ಜೆಡಿಎಸ್ ಪ್ರಮುಖರಾದ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಮೋದಿ ಅವರಿಗೆ ಬೆಂಬಲವನ್ನು ನೀಡಿದ್ದಾರೆ ಎಂದರು.



ಸಭೆಯನ್ನು ಉದ್ಘಾಟಿಸುತ್ತಿರುವ ಎಂಎಲ್‌ಸಿ ಹೆಚ್.ವಿಶ್ವನಾಥ್.

ಗಂಡಸರಿಗೆ 'ಹೆಂಡ'...

"ಯಾವುದೇ ಸರ್ಕಾರಗಳು ಮೂಲಭೂತವಾಗಿ ಅಕ್ಷರ, ಆರೋಗ್ಯ ಮತ್ತು ಉದ್ಯೋಗ ಭದ್ರತೆಯನ್ನು ಜನತೆಗೆ ಒದಗಿಸುವ ಮೂಲಭೂತ ಜವಾಬ್ದಾರಿ ಹೊಂದಿವೆ. ಇದನ್ನು ಮೀರಿ ಇಂದು ರಾಜ್ಯದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಭಾಗ್ಯಗಳ ಮೂಲಕ ಮಹಿಳೆಯರಿಗೆ ಮಾಸಿಕ 2 ಸಾವಿರ ಹಣವನ್ನು ನೀಡುತ್ತಿದೆ. ಇದರ ಹೊಂದಾಣಿಕೆಗಾಗಿ ಅಬಕಾರಿ ಇಲಾಖೆಯ ಆದಾಯವನ್ನು 23 ಸಾವಿರ ಕೋಟಿ ರೂ.ಗಳಿಂದ 40 ಸಾವಿರ ಕೋಟಿಗಳಿಗೆ ಬೆಲೆ ಹೆಚ್ಚಳದ ಮೂಲಕ ಮಾಡಿದೆ. ಗಂಡಸರಿಗೆ ಹೆಂಡ ಕುಡಿಸಿ ಹೆಂಗಸರಿಗೆ 2 ಸಾವಿರ ರೂ. ನೀಡುತ್ತಿದ್ದಾರೆ.

– ಹೆಚ್.ವಿಶ್ವನಾಥ್, ಎಂಎಲ್‌ಸಿ

ಕೊಡಗಲ್ಲಿ 268 ನೀತಿ ಸಂಹಿತೆ ಪ್ರಕರಣ ದಾಖಲು

ಮಡಿಕೇರಿ,ಏ.13– ಲೋಕಸಭಾ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಒಟ್ಟು 268 ಪ್ರಕರಣಗಳು ದಾಖಲಾಗಿವೆ ಎಂದು ಚುನಾವಣಾ ನೀತಿ ಸಂಹಿತೆ ನೋಡಲ್ ಅಧಿಕಾರಿ ವರ್ಣಿತ್ ನೇಗಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಮಾ.16ರಿಂದ ಮಾದರಿ ನೀತಿ ಸಂಹಿತೆ ಜಾರಿಯಾಗಿದ್ದು, ಏ.12ರವರೆಗೆ ಅಬಕಾರಿ ಇಲಾಖೆ ಸಮರ್ಪಕ ದಾಖಲೆ ಇಲ್ಲದೇ ಸಾಗಿಸುತ್ತಿದ್ದ 62.41 ಲಕ್ಷ ರೂ. ಮೌಲ್ಯದ ಮದ್ಯ, 38 ಸಾವಿರ ರೂ. ಮೌಲ್ಯದ 1 ಕೆ.ಜಿ. 647 ಗ್ರಾಂ ಮಾದಕ ವಸ್ತುಗಳು, ಪೊಲೀಸ್ ಇಲಾಖೆ ಮತ್ತು ಚುನಾವಣಾ ಅಧಿಕಾರಿಗಳು ಸೂಕ್ತ ದಾಖಲಾತಿ ಇಲ್ಲದೆ ಸಾಗಿಸುತ್ತಿದ್ದ 16.54 ಲಕ್ಷ ರೂ. ನಗದನ್ನು ವಶಕ್ಕೆ ಪಡೆಯಲಾಗಿದೆ. ಈ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆ 29 ಎಫ್‌ಐಆರ್ ದಾಖಲಿಸಿದ್ದರೆ, ಅಬಕಾರಿ ಇಲಾಖೆ ಒಟ್ಟು 239 ಪ್ರಕರಣ ದಾಖಲಿಸಿದೆ ಎಂದು ನೋಡಲ್ ಅಧಿಕಾರಿಗಳಾದ ವರ್ಣಿತ್ ನೇಗಿ ಮಾಹಿತಿ ನೀಡಿದ್ದಾರೆ.

ದಾಖಲೆಯಿಲ್ಲದ 95,500 ರೂ. ವಶ

ಮಡಿಕೇರಿ,ಏ.13– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಎಲ್ಲಾ ಗಡಿ ತಪಾಸಣೆ ಕೇಂದ್ರಗಳಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದ್ದು, ವಾಹನ ತಪಾಸಣೆ ವೇಳೆ ದಾಖಲೆಯಿಲ್ಲದ 95,500 ರೂ. ಹಣವನ್ನು ಅಧಿಕಾರಿಗಳು ವಶಕ್ಕೆ ಪಡೆದಿರುವ ಘಟನೆ ವಿರಾಜಪೇಟೆಯ ಪೆರುಂಬಾಡಿ ತಪಾಸಣೆ ಕೇಂದ್ರದಲ್ಲಿ ನಡೆದಿದೆ.

ವಿರಾಜಪೇಟೆ ಪೆರುಂಬಾಡಿ ಪೊಲೀಸ್ ತಪಾಸಣೆ ಕೇಂದ್ರಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಕೇರಳ ರಾಜ್ಯದಿಂದ ಗಡಿಯ ಮೂಲಕ ರಾಜ್ಯಕ್ಕೆ ಬರುವ ಎಲ್ಲಾ ರೀತಿಯ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗಿದೆ. ಈ ಸಂದರ್ಭದಲ್ಲಿ ಮೈಸೂರಿಗೆ ತೆರಳುತ್ತಿದ್ದ ಕೇರಳದ ಇರಿಟಿ ನಗರದ ರಶೀದ್ (35) ಅವರ ಕಾರನ್ನು ತಪಾಸಣೆ ನಡೆಸಿ, ದಾಖಲೆ ಇಲ್ಲದ 95,500 ರೂ. ನಗದನ್ನು ಚುನಾವಣೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಈ ಹಣವನ್ನು ಚುನಾವಣೆ ಅಧಿಕಾರಿಗಳು ಉಪ ಖಜಾನೆ ಅಧಿಕಾರಿಗಳಿಗೆ ಒಪ್ಪಿಸಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ. ತಪಾಸಣೆ ಕೇಂದ್ರದಲ್ಲಿ ಸ್ಥಿರ ಕಣ್ಗಾವಲು ತಂಡದ ಶಿಕ್ಷಣ ಇಲಾಖೆಯ ವೆಂಕಟೇಶ್, ಕೃಷಿ ಇಲಾಖೆಯ ಆಶ್ವಿನ್ ಕುಮಾರ್ ಮತ್ತು ಪೊಲೀಸ್ ಸಿಬ್ಬಂದಿ ಹಾಜರಿದ್ದರು.

ಸಿಇಟಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಮಡಿಕೇರಿ: 2024ನೇ ಸಾಲಿನ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿ ಸಿಇಟಿ ಪರೀಕ್ಷೆ ಏ.18 ಮತ್ತು 19ರಂದು ಮಡಿಕೇರಿಯ 5 ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಆದೇಶಿಸಿದ್ದಾರೆ.

ಇಂಜಿನಿಯರಿಂಗ್, ಕೃಷಿ, ವಿಜ್ಞಾನ, ವೆಟರಿನರಿ, ಫಾರ್ಮಸಿ, ಬಿಎಸ್‌ಸಿ (ನರ್ಸಿಂಗ್) ಮುಂತಾದ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿ ಸಿಇಟಿ ಪರೀಕ್ಷೆ ನಗರದ ಸರ್ಕಾರಿ ಪಪೂ ಕಾಲೇಜು, ಸಂತ ಮೈಕಲರ ಸಂಯುಕ್ತ ಪಪೂ ಕಾಲೇಜು, ಸಂತ ಜೋಸೆಫರ ಬಾಲಕಿಯರ ಸಂಯುಕ್ತ ಪಪೂ ಕಾಲೇಜು, ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆ ಹಾಗೂ ಕೊಡಗು ವಿದ್ಯಾಲಯದಲ್ಲಿ ನಡೆಯಲಿದೆ. ಪರೀಕ್ಷಾ ವೇಳೆ ನಿಷೇಧಿತ ಪ್ರದೇಶದ ಒಳಗೆ ಅಭ್ಯರ್ಥಿಗಳು ಹಾಗೂ ಪರೀಕ್ಷಾ ಕರ್ತವ್ಯನಿರತ ಅಧಿಕಾರಿ, ಸಿಬ್ಬಂದಿ ಹೊರತುಪಡಿಸಿ, ಬೇರೆಯವರಿಗೆ ಪ್ರವೇಶ ಇರುವುದಿಲ್ಲ.

ಕುಮಾರಸ್ವಾಮಿ ಬೆಂಬಲಿಸುವಂತೆ ಬೊಹ್ರಾ ಮನವಿ



ಜೆಡಿಎಸ್ ಮುಖಂಡ ಅಬ್ಬಾಸ್ ಅಲಿ ಬೊಹ್ರಾ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವುದು.


ಮಂಡ್ಯ,ಏ.13– ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಒಕ್ಕಲಿಗ ಸಮುದಾಯವೇ ಅತಿ ಹೆಚ್ಚಿದ್ದರೂ ನಿರ್ಣಾಯಕ ಪಾತ್ರ ವಹಿಸುವುದು ಮಾತ್ರ ಹಿಂದುಳಿದವರು, ದಲಿತರು ಹಾಗೂ ಅಲ್ಪಸಂಖ್ಯಾತರು. ಈ ನಿಟ್ಟಿನಲ್ಲಿ ಅಲ್ಪಸಂಖ್ಯಾತ ಸಮುದಾಯ ಈ ಬಾರಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಬೆಂಬಲಿಸಬೇಕೆಂದು ಜೆಡಿಎಸ್ ಮುಖಂಡ ಹಾಗೂ ಕೇಂದ್ರದ ವಕ್ಫ್ ಕೌನ್ಸಿಲ್‌ನ ಮಾಜಿ ಸದಸ್ಯ ಅಬ್ಬಾಸ್ ಅಲಿ ಬೊಹ್ರಾ ಮನವಿ ಮಾಡಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿ ಸ್ಪರ್ಧೆ ಮಂಡ್ಯ ಜಿಲ್ಲೆಯ ಜನರ ಪಾಲಿಗೆ ಸುವರ್ಣಾವಕಾಶ ಒದಗಿ ಬಂದಂತಾಗಿದ್ದು, ಕುಮಾರಸ್ವಾಮಿ ಮಂಡ್ಯದಿಂದ ಆಯ್ಕೆಯಾದರೆ ಕೇಂದ್ರದಲ್ಲಿ ಮಂತ್ರಿಯಾಗಲಿದ್ದಾರೆ. ಈ ಭಾಗದ ರೈತರಿಗೆ, ಅಲ್ಪಸಂಖ್ಯಾತರಿಗೆ ಇದರಿಂದ ಅನುಕೂಲವಾಗಲಿದ್ದು, ಜೊತೆಗೆ ಕಾವೇರಿ ಸಮಸ್ಯೆಯನ್ನು ಬಗೆಹರಿಸಲು ಸಹ ಹೆಚ್ಚಿಕೆ ಹೋರಾಟ ಮಾಡಲಿದ್ದಾರೆ ಎಂದರು.

ಪ್ರಸ್ತುತ ಬರ ತಾಂಡವವಾಡುತ್ತಿದ್ದು, ಇದರಿಂದ ಕೆಆರ್‌ಎಸ್‌ನಲ್ಲಿ ನೀರಿಲ್ಲ, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ತಮಿಳುನಾಡಿನ ಓಲೈಕೆಗಾಗಿ ಕಾಂಗ್ರೆಸ್ ಸರ್ಕಾರ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಿದೆ. ಈ ಹಿಂದೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕಾವೇರಿಗಾಗಿ ಸಂಸತ್‌ನಲ್ಲಿ ನಿರಂತರ ಹೋರಾಟ ಮಾಡಿದ್ದಾರೆ. ಈ ಹೋರಾಟವನ್ನು ಮತದಾರರು ಸ್ಮರಿಸಿಕೊಂಡು ದೇವೇಗೌಡರ ಪುತ್ರ ಕುಮಾರಸ್ವಾಮಿಗೆ ಮತ ಕೊಡಿ ಎಂದು ಮನವಿ ಮಾಡಿದರು.

ಮುಸ್ಲಿಂರ ಪರ ನಿಂತಿರುವುದು ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ. ಮೋದಿ ಕಳೆದ ಹತ್ತು ವರ್ಷದಲ್ಲಿ ಮುಸ್ಲಿಂ ಸಮುದಾಯದ ನಜ್ಮಾ ಹೆಫ್ತುಲ್ಲಾ, ಮುಕ್ತಾರ್ ಅಬ್ಬಾಸ್ ನಖ್ವಿ, ಸಹನವಾಜ್ ಹುಸೇನ್ ಮತ್ತು ಎಂ.ಜೆ. ಅಕ್ಬರ್‌ರನ್ನು ರಾಜ್ಯಸಭೆಗೆ ಕಳುಹಿಸಿ ಕೇಂದ್ರದಲ್ಲಿ ಮಂತ್ರಿ ಸ್ಥಾನ ಕೊಟ್ಟಿದ್ದರು. ರಾಷ್ಟ್ರಪತಿ ಹುದ್ದೆಯನ್ನು ಡಾ.ಎ.ಪಿ.ಜೆ. ಅಬ್ದುಲ್ ಕಲಾಂಗೆ ನೀಡುವ ಮೂಲಕ ಮುಸ್ಲಿಂ ಸಮುದಾಯಕ್ಕೆ ರಾಷ್ಟ್ರಪತಿ ಹುದ್ದೆಯನ್ನು ಕೊಟ್ಟಿದ್ದರು. ಆದರೆ ಕಾಂಗ್ರೆಸ್ ಇಂಥ ಒಂದೇ ಒಂದು ಹುದ್ದೆಯನ್ನು ಮುಸ್ಲಿಂ ಸಮುದಾಯಕ್ಕೆ ಕೊಟ್ಟಿದೆಯೇ ಎಂದು ಪ್ರಶ್ನಿಸಿದರು.

ಸ್ಟಾರ್ ಚಂದ್ರು ಬೆಂಬಲಿಸುವಂತೆ ಅಸಾದುಲ್ಲಾ ಖಾನ್ ಮನವಿ



ಮಂಡ್ಯ: ದೇಶದಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಶ್ರಮಿಸುತ್ತಿರುವ ಏಕೈಕ ಪಕ್ಷವೆಂದರೆ ಅದು ಕಾಂಗ್ರೆಸ್. ಈ ನಿಟ್ಟಿನಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು)ರನ್ನು ಮುಸ್ಲಿಂ ಸಮುದಾಯ ಬೆಂಬಲಿಸಿ ಮತಕೊಡಬೇಕೆಂದು ಕಾಂಗ್ರೆಸ್ ಮುಖಂಡ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಸಾದುಲ್ಲಾ ಖಾನ್ ಮನವಿ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಅಧಿಕಾರ, ಅನುದಾನಗಳು, ಶಿಕ್ಷಣ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಒದಗಿಸಿದ್ದರೆ ಅದು ಕಾಂಗ್ರೆಸ್ ಪಕ್ಷ ಮಾತ್ರ. ದೇಶದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯವಾಗಿದ್ದು, ಕಾಂಗ್ರೆಸ್ ಅಧಿಕಾರದಲ್ಲಿದ್ದರೆ ಮಾತ್ರ ಮುಸ್ಲಿಮರಿಗೆ ರಕ್ಷಣೆ ಸಿಗಲಿದೆ. ಈ ನಿಟ್ಟಿನಲ್ಲಿ ಕಾಂಗ್ರೆಸ್‌ಗೆ ಮುಸ್ಲಿಮರು ಮತ ಹಾಕಬೇಕೆಂದು ಒತ್ತಾಯಿಸಿದರು.

ಬಿಜೆಪಿ ಅಧಿಕಾರದಲ್ಲಿರುವ ರಾಜ್ಯದಲ್ಲೆಲ್ಲಾ ಮುಸ್ಲಿಮರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಕೇಂದ್ರ ಸರ್ಕಾರ ಸಹ ಮುಸ್ಲಿಮರಿಗೆ ಯಾವುದೇ ಕೊಡುಗೆ ನೀಡದೇ ಅವರನ್ನು ಅಪಮಾನಿಸಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ ಸಮಯದಲ್ಲಿ ಹಿಜಾಬ್, ಹಲಾಲ್ ವಿಚಾರದಲ್ಲಿ ಸಾಕಷ್ಟು ಗೊಂದಲಗಳನ್ನು ಮೂಡಿಸಿ, ಸಮುದಾಯಕ್ಕೆ ಅಪಮಾನ ಎಸಗಿತ್ತು. ಆ ನಿಟ್ಟಿನಲ್ಲಿ ಬಿಜೆಪಿ ಅದರ ಮಿತ್ರ ಪಕ್ಷ ಜೆಡಿಎಸ್ ಬೆಂಬಲಿಸದಂತೆ ಕೋರಿದರು.

ಎಲ್ಲಾ ಸಮುದಾಯವನ್ನು ಒಂದೇ ರೀತಿಯಲ್ಲಿ ನೋಡುವ ಪಕ್ಷವೆಂದರೆ ಅದು ಕಾಂಗ್ರೆಸ್. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರ ಐದು ಗ್ಯಾರಂಟಿಗಳನ್ನು ನೀಡಿದ್ದು, ಇದರಿಂದ ರಾಜ್ಯದ ಕೋಟ್ಯಾಂತರ ಜನಕ್ಕೆ ಲಾಭವಾಗುತ್ತಿದೆ. ಜನರ ಅಭಿವೃದ್ಧಿಯೇ ಕಾಂಗ್ರೆಸ್ ಧ್ಯೇಯವಾಗಿದ್ದು, ಕೇಂದ್ರದಲ್ಲೂ ಕಾಂಗ್ರೆಸ್ ಸರ್ಕಾರ ಬಂದರೆ ಮತ್ತಷ್ಟು ಯೋಜನೆಗಳು ಜನಪರ ಜಾರಿಗೆ ಬರಲಿವೆ ಎಂದರು.

ಮೋದಿಗೆ ರೈತರಿಗಿಂತ ಉದ್ಯಮಿಗಳ ಮೇಲೆ ವ್ಯಾಮೋಹ ಹೆಚ್ಚು: ಸಚಿವ ಕೃಷ್ಣ ಭೈರೇಗೌಡ

ಮಂಡ್ಯ,ಏ.13– ಪ್ರಧಾನಿ ನರೇಂದ್ರಮೋದಿ ಅವರಿಗೆ ದೇಶದ ಬಡ ರೈತರಿಗಿಂತ ಹಣವುಳ್ಳ ಉದ್ಯಮಿಗಳ ಮೇಲೆಯೇ ಹೆಚ್ಚು ವ್ಯಾಮೋಹ. ಈ ನಿಟ್ಟಿನಲ್ಲಿ ಸಾಲ ಮನ್ನಾ ಮಾಡಿ ಎಂದು ರೈತರು ಕೇಳಿದರೆ ರೈತರ ಸಾಲ ಮನ್ನಾ ಮಾಡಿದರೆ ದೇಶ ಬರ್ಬಾದ್ ಆಗಲಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತದೆ. ಆದರೆ ಉದ್ಯಮಿಗಳ ಕೋಟ್ಯಂತರ ರೂ. ಸಾಲವನ್ನು ಯಾವುದೇ ಕಾರಣವಿಲ್ಲದೇ ಮನ್ನಾ ಮಾಡುತ್ತದೆ. ಇದು ಮೋದಿ ಸರ್ಕಾರದ ದ್ವಂದ್ವ ನೀತಿ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಕಿಡಿಕಾರಿದರು.

ನಗರದ ಖಾಸಗಿ ಸಮುದಾಯ ಭವನದಲ್ಲಿ ಶನಿವಾರ ಆಯೋಜಿಸಿದ್ದ ಕರ್ನಾಟಕಕ್ಕಾದ ತೆರಿಗೆ ಪಾಲಿನ ವಂಚನೆ, ರೈತರ ಗಾಯದ ಮೇಲೆ ಬರೆ ವಿಷಯದ ಮೇಲಿನ ಎಂಬುದರ ಬಗೆಗಿನ ವಿಚಾರಗೋಷ್ಠಿಯಲ್ಲಿ ಸುದೀರ್ಘ ಭಾಷಣ ಮಾಡಿದ ಅವರು, ಪ್ರಸ್ತುತ ಅಂದಾಜಿನ ಪ್ರಕಾರ ದೇಶದಲ್ಲಿ ರೈತರ ಸಾಲ ಮನ್ನಾ ಮಾಡಲು ಮೂರು ಲಕ್ಷ ಕೋಟಿ ರೂ. ಹಣಬೇಕು. ಆದರೆ ರೈತರು ಸಾಲ ಮನ್ನಾ ಮಾಡಿ ಎಂದರೆ ಕೇಂದ್ರದ ಮೋದಿ ಸರ್ಕಾರ ಒಪ್ಪುವುದಿಲ್ಲ. ದೇಶ ದಿವಾಳಿಯಾಗುತ್ತದೆ ಎನ್ನುತ್ತಾರೆ. ಆದರೆ ಈ ಹಿಂದೆ ಪ್ರಧಾನಿಯಾಗಿದ್ದ ಡಾ.ಮನಮೋಹನ್‌ಸಿಂಗ್ ಕಾಲದಲ್ಲಿ 72 ಸಾವಿರ ಕೋಟಿ ರೈತರ ಸಾಲ ಮನ್ನಾ ಮಾಡಲಾಗಿತ್ತು. ಆಗ ಏಕೆ ದೇಶ ದಿವಾಳಿಯಾಗಲಿಲ್ಲ ಎಂದು ಪ್ರಶ್ನಿಸಿದರು.

ಕೇವಲ ಮೂರು ಲಕ್ಷ ಕೋಟಿ ರೈತರ ಸಾಲ ಮನ್ನಾ ಮಾಡಲು ಹಿಂದೆ ಮುಂದೆ ನೋಡುತ್ತಿರುವ ಮೋದಿ ಸರ್ಕಾರ ಕಾರ್ಪೋರೇಟ್ ವಲಯದ ಬೃಹತ್ ಉದ್ಯಮಿಗಳ ಬರೋಬ್ಬರಿ 20 ಲಕ್ಷದ 47 ಸಾವಿರ ಕೋಟಿ ಸಾಲವನ್ನು ಕಳೆದ ಹತ್ತು ವರ್ಷದಲ್ಲಿ ಮನ್ನಾ ಮಾಡಿದ್ದಾರೆ. ಆದರೆ ದೇಶ ಮಾತ್ರ ದಿವಾಳಿಯಾಗಿಲ್ಲ. ರೈತರ ಸಾಲ ಮನ್ನಾ ಮಾಡಲು ಆಗದ ಈ ಸರ್ಕಾರ ಕಾರ್ಪೋರೇಟ್ ಉದ್ಯಮಿಗಳ ಸಾಲವನ್ನು ಮನಬಂದಂತೆ ಮನ್ನಾ ಮಾಡುತ್ತಿರುವುದರ ಹಿಂದಿನ ಮರ್ಮದ ಬಗ್ಗೆ ಮೋದಿ ಉತ್ತರಿಸಬೇಕೆಂದು ಆಗ್ರಹಿಸಿದರು.



ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡುತ್ತಿರುವ ಕಂದಾಯ ಸಚಿವ ಕೃಷ್ಣಬೈರೇಗೌಡ.

ಹಿಂದಿನ ಮನಮೋಹನ್‌ಸಿಂಗ್ ಸರ್ಕಾರ ಕೃಷಿ ಹಾಗೂ ಪಶುಸಂಗೋಪನೆ ಇಲಾಖೆಗೆ ಅನುದಾನವಾಗಿ ಐದೂವರೆ ಪರ್ಸೆಂಟ್ ಹಣ ನೀಡುತ್ತಿತ್ತು. ಪ್ರಸ್ತುತ ಮೋದಿ ಸರ್ಕಾರ ಅನುದಾನದ ಪರ್ಸೆಂಟೇಜ್‌ನ್ನು 3 ಪರ್ಸೆಂಟ್‌ಗೆ ಇಳಿಸಿದೆ. ಈ ಹಿಂದೆ ಯೂರಿಯಾ ಗೊಬ್ಬರ ಖರೀದಿಗೆ ಮನಮೋಹನ್‌ಸಿಂಗ್ ಸರ್ಕಾರ ಕೊಡುತ್ತಿದ್ದ 1.65 ಲಕ್ಷ ಹಣವನ್ನು ಪ್ರಸ್ತುತ ಮೋದಿ ಸರ್ಕಾರ 1 ಲಕ್ಷಕ್ಕೆ ಇಳಿಸಿದೆ. ರೈತರ ಸಾಲ ಹೆಚ್ಚಾಗಿದೆ ಹೊರತು ಆದಾಯ ಹೆಚ್ಚಿಲ್ಲ. ಇದರ ವಿರುದ್ಧ ಹೋರಾಡಲು ದೇಶಾದ್ಯಂತ ರೈತರು ದೆಹಲಿ ಚಲೋಗೆ ಕರೆ ಕೊಟ್ಟರೆ ಅವರನ್ನು ದೆಹಲಿಯ ಗಡಿಯೊಳಗೆ ಪ್ರವೇಶ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದರು. ವಿಚಾರಗೋಷ್ಠಿಯಲ್ಲಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ಗಣಿಗ ರವಿಕುಮಾರ್, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಸಿಐಟಿಯು ನಾಯಕಿ ಕುಮಾರಿ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರುಗಳು, ರೈತಸಂಘದ ಮುಖಂಡರುಗಳು, ಸಿಐಟಿಯು ಹಾಗೂ ಕೃಷಿ ಕೂಲಿಕಾರ್ಮಿಕ ಸಂಘಟನೆಗಳ ಮುಖಂಡರುಗಳು ಭಾಗವಹಿಸಿದ್ದರು.

ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ನನಗೊಂದು ಅವಕಾಶ ಕೊಡಿ

ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಮನವಿ

ಚಾಮರಾಜನಗರ, ಏ.13– ನರೇಂದ್ರ ಮೋದಿ ಅವರನ್ನು ಪ್ರಧಾನಿ ಮಾಡಲು ಕ್ಷೇತ್ರದ ಮತದಾರರು ಬಿಜೆಪಿಯನ್ನು ಬೆಂಬಲಿಸುವ ಮೂಲಕ ನನಗೊಂದು ಅವಕಾಶ ಮಾಡಿಕೊಡಬೇಕೆಂದು ಬಿಜೆಪಿ ಅಭ್ಯರ್ಥಿ ಎಸ್. ಬಾಲರಾಜು ಮನವಿ ಮಾಡಿದರು.

ತಾಲೂಕಿನ ಮಾದಾಪುರ, ಅಲೂರು, ಚಂದಕವಾಡಿ ಹಾಗೂ ಹರದಹಳ್ಳಿ ಶಕ್ತಿ ಕೇಂದ್ರಗಳಲ್ಲಿ ನಡೆದ ಬಿಜೆಪಿ ಚುನಾವಣೆ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈಗಾಗಲೇ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಆ ಕುಟುಂಬಕ್ಕೆ ಅಧಿಕಾರ ನೀಡಿ, ಮಹದೇವಪ್ಪ ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿದ್ದಾರೆ. ಮತ್ತೊಮ್ಮೆ ಅವರ ಕುಟುಂಬದವರಿಗೆ ಮತ ಹಾಕುವುದು ಯಾವ ನ್ಯಾಯ? ಅಪ್ಪ ಸಚಿವರಾಗಿ ಸಾಕಷ್ಟು ಸಂಪಾದನೆ ಮಾಡಿದ್ದಾರೆ. ಇನ್ನು ಮಗನಿಗೂ ಅಧಿಕಾರ ಬೇಕು ಎನ್ನುತ್ತಿದ್ದಾರೆ. ಇವೆಲ್ಲವನ್ನು ಪ್ರಬುದ್ಧ ಮತದಾರರು ಅರ್ಥೈಸಿಕೊಂಡಿದ್ದು, ಬಿಜೆಪಿಯನ್ನು ಬೆಂಬಲಿಸುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದರು.

ಸಾಮಾನ್ಯ ಕಾರ್ಯಕರ್ತನಾಗಿ ನಿಮ್ಮ ಸೇವೆ ಮಾಡಲು ಸಿದ್ಧನಿದ್ದೇನೆ. ಸದಾ ನಿಮ್ಮೊಂದಿಗೆ ಬೆರತು ಕ್ಷೇತ್ರದ ಅಭಿವೃದ್ಧಿಗೆ ದುಡಿಯಬೇಕು. ಪ್ರಧಾನಿ ನರೇಂದ್ರ ಮೋದಿ ಅವರ ಜನಪರ ಕಾರ್ಯಕ್ರಮಗಳನ್ನು ಪ್ರತಿ ಹಳ್ಳಿ ಹಳ್ಳಿಗೂ ತಲುಪಿಸಲು ಈ ಬಾರಿ ಬಿಜೆಪಿಗೆ ಅವಕಾಶ ನೀಡಿ. ನನ್ನನ್ನು ಆಶೀರ್ವದಿಸಬೇಕು. ಸಂಸದರಾಗಿದ್ದ ನಮ್ಮೆಲ್ಲರ ನಾಯಕರಾದ ವಿ.ಶ್ರೀನಿವಾಸಪ್ರಸಾದ್ ಇನ್ನು ಒಂದೂವರೆ ತಿಂಗಳು ನಮ್ಮ ಪಕ್ಷದ ಸಂಸದರಾಗಿರುತ್ತಾರೆ ಅವರ ಬೆಂಬಲ ಸದಾ ಬಿಜೆಪಿ ಹಾಗೂ ನರೇಂದ್ರ ಮೋದಿ ಅವರಿಗಿದೆ ಎಂದರು.


ಸೋಲಿನ ಹತಾಶೆಯಿಂದ ಕಾಂಗ್ರೆಸ್‌ನವರು ನಿವೃತ್ತಿ ಘೋಷಣೆ ಮಾಡಿರುವ ವಿ.ಶ್ರೀನಿವಾಸ ಪ್ರಸಾದ್ ಅವರ ಮನೆಗೆ ಹೋಗುತ್ತಿದ್ದಾರೆ. ಈಗಾಗಲೇ ಒಂದಲ್ಲ ನಾಲ್ಕು ಬಾರಿ ನನ್ನ ಬೆಂಬಲ ಪ್ರಧಾನಿ ಮೋದಿಗೆ. ನನ್ನ ಮತ ಬಿಜೆಪಿಗೆ ಎಂದು ಪ್ರಸಾದ್ ಹೇಳಿದ್ದಾರೆ. ಅದರೂ ಸಹ ಮಹದೇವಪ್ಪ ತನ್ನ ಮಗನನ್ನು ಗೆಲ್ಲಿಸಿಕೊಳ್ಳಲು ಶ್ರೀನಿವಾಸಪ್ರಸಾದ್ ಅವರ ಮುಂದೆ ನಿಂತಿದ್ದಾರೆ. ಸಾಲದು ಎಂಬಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಸಾದ್ ಅವರ ಮನೆಗೆ ಕರೆದೊಯ್ದಿರುವುದು ದುರಂತವೇ ಸರಿ. ಜನರು ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಹೀಗಾಗಿ ಮೈಸೂರು ಹಾಗೂ ಚಾಮರಾಜನಗರ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ವಿಶ್ವಾಸದ ಮಾತುಗಳನ್ನಾಡಿದರು.

ಮುಖಂಡರಾದ ಎಂ. ರಾಮಚಂದ್ರು, ನಾಗಶ್ರೀ ಪ್ರತಾಪ್, ನಿಜಗುಣರಾಜು ಸೇರಿದಂತೆ ಅನೇಕ ಮುಖಂಡರು ಮಾತನಾಡಿದರು. ಚಾಮುಲ್ ನಿರ್ದೇಶಕ ಎಚ್.ಎಸ್.ಬಸವರಾಜು, ಸುಂದ್ರಪ್ಪ, ಕೋಡಿಮೋಳೆ ರಾಜಶೇಖರ್, ಚಂದಕವಾಡಿ ಶಕ್ತಿ ಕೇಂದ್ರ ಅಧ್ಯಕ್ಷ ಅಯ್ಯನಪುರ ವಿಜಯೇಂದ್ರ, ಆಲೂರು ಶಕ್ತಿ ಕೇಂದ್ರದ ಅಧ್ಯಕ್ಷ ಶಿವಾನಂದ, ಶಿವಾಂಲ ಕಾರಪ್ಪ ಚಿನ್ನಮುತ್ತು, ದಡದಹಳ್ಳಿ ಗೋವಿಂದ ರಾಜು, ಅರಕಲವಾಡಿ ನಾಗೇಂದ್ರ, ಕಾಗಲವಾಡಿ ಮಹದೇವಸ್ವಾಮಿ, ಯುವ ಮೋರ್ಚಾ ಅಧ್ಯಕ್ಷ ಸೂರ್ಯ ಬಾಲರಾಜು, ಉಪಾಧ್ಯಕ್ಷ ವಿರಾಟ್ ಶಿವು, ಆನಂದ ಭಗೀರಥ, ಗ್ರಾಪಂ ಅಧ್ಯಕ್ಷೆ ಶೋಭಾ, ಗ್ರಾಮಾಂತರ ಮಂಡಲದ ಅಧ್ಯಕ್ಷೆ ರಾಜೇಶ್ವರಿ ರವಿ, ಕಿಲಗೆರೆ ಬಸವರಾಜು, ಕೆ.ವೀರಭದ್ರಸ್ವಾಮಿ, ಪ್ರಣಯ್, ಮೂಡ್ನಾಕೂಡು ಪ್ರಕಾಶ್, ಕಾಗಲವಾಡಿ ಕಾರ್ತಿಕ್, ಶಕ್ತಿ ಕೇಂದ್ರದ ಅಧ್ಯಕ್ಷರಾದ ಶಿವಾಂಕಪ್ಪ, ರಾಜುನಾಯಕ, ಕಪನಿನಾಯಕ, ರಾಜೇಂದ್ರ, ಮಹದೇವಶೆಟ್ಟಿ, ಚಿನ್ನಸ್ವಾಮಿ, ಕುಮಾರ್, ನಂಜುಂಡಸ್ವಾಮಿ, ನಾಗಮಲ್ಲೇಶ್, ಪುಟ್ಟಸ್ವಾಮಿ, ನಾಗಸುಂದರ್, ಮಹದೇವಪ್ರಸಾದ್, ನಂಜುಂಡಸ್ವಾಮಿ, ಶೇಖರ್, ಕಾಳಶೆಟ್ಟಿ, ಗಣೇಶ್, ಶಾಂತರಾಜು ಇತರರಿದ್ದರು.



ವಿವಿಧ ಗ್ರಾಮಗಳಲ್ಲಿ ನಡೆದ ಬಿಜೆಪಿ ಚುನಾವಣೆ ಪ್ರಚಾರ ಸಭೆಯಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಮಾತನಾಡಿದರು.

ಭ್ರಮರಾಂಬ ಕ್ಲಿನಿಕ್ ವೈದ್ಯ ಎ.ಬಿ. ನಂಜಪ್ಪ ನಿಧನ



ಚಾಮರಾಜನಗರ,ಏ.13– ತಾಲೂಕು ಆಲೂರು ಗ್ರಾಮದವರಾಗಿದ್ದು, ನಗರದ ಪಚ್ಚಪ್ಪ ಸರ್ಕಲ್‌ನಲ್ಲಿದ್ದ ಶ್ರೀ ಭ್ರಮರಾಂಬ ಕ್ಲಿನಿಕ್‌ನ ವೈದ್ಯ ಡಾ. ಎ.ಬಿ.ನಂಜಪ್ಪ (75) ಶನಿವಾರ ಬೆಳಗಿನ ಜಾವ ನಿಧನರಾದರು.

ಮೃತರು ಪತ್ನಿ, ನಿವೃತ್ತ ಪ್ರಾಧ್ಯಾಪಕಿ ಡಾ. ಶೀಲಾಕುಮಾರಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರ ಸ್ವಗ್ರಾಮ ಆಲೂರಿನ ತೋಟದಲ್ಲಿ ಇಂದು ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿವಿಧ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್‌ಬೋಸ್ ಪ್ರಚಾರ

ಚಾಮರಾಜನಗರ, ಏ.13– ಚಾಮರಾಜನಗರ ಲೋಕಸಭೆ ಅಭ್ಯರ್ಥಿ ಸುನೀಲ್ ಬೋಸ್ ಅವರು ತಾಲೂಕಿನ ಚಂದಕವಾಡಿ ಗ್ರಾಮದ ಲಕ್ಷ್ಮೀದೇವಿ ಅಮ್ಮನವರಿಗೆ ಪೂಜೆ ಸಲ್ಲಿಸಿ ಪ್ರಚಾರಕ್ಕೆ ಚಾಲನೆ ನೀಡಿದರು.

ಇದೇವೇಳೆ ಸುನೀಲ್‌ಬೋಸ್ ಚಂದಕವಾಡಿ, ನಾಗವಳ್ಳಿ, ಕಾಗಲವಾಡಿ, ಆಲೂರು, ದೊಡ್ಡರಾಯಪೇಟೆ, ಮಾದಾಪುರ, ಮಂಗಲ ಸೇರಿದಂತೆ ಇತರೇ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ, ಕಳೆದ 16 ವರ್ಷಗಳಿಂದಲೂ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತನಾಗಿ ದುಡಿದಿದ್ದೇನೆ. ಹಿಂದಿನ ಸಂಸದರಾಗಿದ್ದ ದಿ.ಧ್ರುವನಾರಾಯಣ ಅವರಂತೆ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಕ್ಷೇತ್ರದ ಮತದಾರರು ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, 2013ರಿಂದ 2018 ರವರೆಗೆ ಅಧಿಕಾರದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದಾರೆ. ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ಉಳಿವು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ಕ್ಷೇತ್ರದ ಮತದಾರರು ಕಾಂಗ್ರೆಸ್ ಅಭ್ಯರ್ಥಿಯನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸಿ, ತಮ್ಮಗಳ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಪಂ ಮಾಜಿ ಸದಸ್ಯರಾದ ಆರ್.ಬಾಲರಾಜು, ಕೆ.ಪಿ.ಸದಾಶಿವಮೂರ್ತಿ, ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್, ಪ್ರದಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವ, ಆರ್.ಮಹದೇವ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹಮದ್ ಅಸ್ಗರ್, ಎ.ಎಸ್.ಗುರುಸ್ವಾಮಿ ಇನ್ನಿತರರು ಹಾಜರಿದ್ದು ಮತಯಾಚಿಸಿದರು. ಮತಯಾಚನೆ ವೇಳೆ ಆಲೂರು ಗ್ರಾಮದಲ್ಲಿ ಮಾಜಿ ರಾಜ್ಯಪಾಲರಾದ ದಿ. ಬಿ.ರಾಚಯ್ಯ ಅವರ ಸಮಾಧಿ ಬಳಿ ಅಭ್ಯರ್ಥಿ ಸುನೀಲ್ ಬೋಸ್ ತೆರಳಿ ನಮನ ಸಲ್ಲಿಸಿದರು.



ಚಾಮರಾಜನಗರ ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಚಾಮರಾಜನಗರ ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮತಯಾಚನೆ ಮಾಡಿದರು.

ಶ್ರೀ ಬಂಡಿಗೆರೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ

ಬೇಗೂರು(ಗುಂಡ್ಲುಪೇಟೆ): ಬೇಗೂರು ಗ್ರಾಮದ ಶ್ರೀ ಬಂಡಿಗೆರೆ ಮಹದೇಶ್ವರಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವವು ಏ.15 ಹಾಗೂ 16ರಂದು ವಿಜೃಂಭಣೆಯಿಂದ ನಡೆಯಲಿದೆ

ಏ.15ರಂದು ಬೇಗೂರು ಗ್ರಾಮ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಾದ ಕಮರಹಳ್ಳಿ ಮತ್ತು ಬೆಳಚಲವಾಡಿಯಿಂದ ದೇವರ ಉತ್ಸವ ಮೂರ್ತಿಯನ್ನು ಬೇಗೂರಿಗೆ ವಾದ್ಯಮೇಳಗಳೊಂದಿಗೆ ತಂದು ಉತ್ಸವ ಮಾಡಲಾಗುವುದು.

ಏ.16 ರಂದು ಬೆಳಗ್ಗೆ ಕೊಂಡ ಮಹೋತ್ಸವ ನಡೆಯಲಿದ್ದು ನಂತರ ಸಂಜೆ ಶ್ರೀ ಮಹದೇಶ್ವರಸ್ವಾಮಿಯ ನೂತನ ರಥೋತ್ಸವ ನಡೆಯಲಿದೆ. ಬೇಗೂರು ಸೇರಿದಂತೆ ಸುತ್ತಮುತ್ತಲ ಗ್ರಾಮಗಳಾದ ಬೆಳಚಲವಾಡಿ, ಕಮರಹಳ್ಳಿ, ನಿಟ್ರೆ, ಮಾದಾಪಟ್ಟಣ, ಸೋಮಹಳ್ಳಿ ಹಾಗೂ ಕಬ್ಬಳ್ಳಿ ಸೇರಿದಂತೆ ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಜಾತ್ರಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.



ಐದನೇ ಪುಟದಿಂದ

ಮೋದಿ ಮತ ಬೇಟೆ

ಮಂಡ್ಯದ ಅಭ್ಯರ್ಥಿ ಜೊತೆಗೆ ಮೈಸೂರು–ಕೊಡಗು ಅಭ್ಯರ್ಥಿ ಯದುವೀರ್ ಒಡೆಯರ್, ಚಾಮರಾಜನಗರ ಅಭ್ಯರ್ಥಿ ಎಸ್.ಬಾಲರಾಜ್ ಹಾಗೂ ಹಾಸನದ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಭಾಗವಹಿಸಲಿದ್ದಾರೆ ಎಂದರು.

ಲಕ್ಷಕ್ಕೂ ಹೆಚ್ಚು ಜನ: ಸದ್ಯ 60 ಸಾವಿರಕ್ಕೂ ಹೆಚ್ಚು ಆಸನ ವ್ಯವಸ್ಥೆ ಮಾಡಲಾಗುತ್ತಿದ್ದು, ಎರಡೂ ಪಕ್ಷಗಳ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಸೇರಿ ಲಕ್ಷಕ್ಕೂ ಹೆಚ್ಚು ಜನ ಸಮಾವೇಶಗೊಳ್ಳಲಿದ್ದಾರೆ. ಮೈಸೂರು ನಗರದ ಪ್ರತೀ ವಾರ್ಡ್‌ನಿಂದ ಕನಿಷ್ಠ 300 ಮಂದಿಯಂತೆ ಒಂದೆಡೆ ಸೇರಿ ಕಾರ್ಯಕ್ರಮ ಸ್ಥಳಕ್ಕೆ ಬರುವಂತೆ ಯೋಜನೆ ಮಾಡಿಕೊಂಡಿದ್ದೇವೆ. ಒಟ್ಟಾರೆ ಮೈಸೂರು–ಕೊಡಗು ಕ್ಷೇತ್ರದಿಂದ 30 ಸಾವಿರ, ಮಂಡ್ಯ ಕ್ಷೇತ್ರದಿಂದ 20 ಸಾವಿರ, ಹಾಸನ ಕ್ಷೇತ್ರದಿಂದ 15 ಸಾವಿರ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ 25 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾರ್ವಜನಿಕರು ಉತ್ಸುಕರಾಗಿದ್ದಾರೆ. 10–15 ಮಂದಿ ಅನಿವಾಸಿ ಭಾರತೀಯರೂ ನೋಂದಣಿ ಮಾಡಿಕೊಂಡಿದ್ದಾರೆ. ಪ್ರಧಾನಿ ಮೋದಿ ಅವರು ಸಮಾವೇಶದಲ್ಲಿ ಭಾಗವಹಿಸುತ್ತಿರುವುದು ನಮ್ಮ ಸುಯೋಗ. ಈ ಸಮಾವೇಶದ ಅಭೂತಪೂರ್ವ ಯಶಸ್ಸಿಗೆ ಮೈತ್ರಿಕೂಟದ ಮುಖಂಡರು ಎಲ್ಲಾ ತಯಾರಿ ಮಾಡಿಕೊಂಡಿದ್ದೇವೆ ಎಂದು ವಿವರಣೆ ನೀಡಿದರು.

ನಾಲ್ಕು ಹಂತಗಳಲ್ಲಿ ಚುನಾವಣಾ ಪ್ರಚಾರ ನಡೆಸಲು ಯೋಜನೆ ರೂಪಿಸಿಕೊಳ್ಳಲಾಗಿದೆ. ಜೊತೆಗೆ ಏ.15ರಿಂದ ಮನೆ ಮನೆಗೆ ತೆರಳಿ ಅವರ ಮತಗಟ್ಟೆ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮವನ್ನೂ ಆರಂಭಿಸಲಾಗುತ್ತಿದೆ ಎಂದು ಇದೇ ವೇಳೆ ಶ್ರೀವತ್ಸ ತಿಳಿಸಿದರು.

ಅದ್ಭುತ ಸ್ಪಂದನೆ: ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಹಳೇ ಮೈಸೂರು ಭಾಗದ ನಾಲ್ಕು ಲೋಕಸಭಾ ಕ್ಷೇತ್ರಗಳಲ್ಲೂ ಮೈತ್ರಿ ಅಭ್ಯರ್ಥಿಗಳ ಗೆಲುವಿಗೆ ಪೂರಕವಾದ ವಾತಾವರಣ ನಿರ್ಮಾಣವಾಗಿದೆ. ಪ್ರಚಾರದ ವೇಳೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದ್ದು, ಸಾವಿರಾರು ಮಂದಿ ಸ್ವಯಂ ಪ್ರೇರಣೆಯಿಂದ ಒಗ್ಗೂಡಿ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ. ಪ್ರಧಾನಿ ಮೋದಿ ಅವರ ಪ್ರವಾಸದಿಂದ ಮತ್ತಷ್ಟು ಹುಮ್ಮಸ್ಸು ಸಿಗಲಿದೆ ಎಂದರು.

ಸಂಸದ ವಿ.ಶೀನಿವಾಸ ಪ್ರಸಾದ್ ಅವರು ನಮ್ಮ ಮುಖಂಡರು. ಅವರ ನೇತೃತ್ವದಲ್ಲಿ ನಾವು ಚುನಾವಣೆ ಎದುರಿಸುತ್ತಿದ್ದೇವೆ. ಅವರನ್ನು ಭೇಟಿ ಮಾಡಿ, ಪ್ರಧಾನಿ ಮೋದಿ ಅವರ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತೇವೆ. ಈಗಾಗಲೇ ನಮ್ಮ ಅಭ್ಯರ್ಥಿಗಳು, ಮುಖಂಡರು ಅವರನ್ನು ಭೇಟಿಯಾಗಿದ್ದೇವೆ. ಶ್ರೀನಿವಾಸ ಪ್ರಸಾದ್ ಅವರ ಅಳಿಯ ಹರ್ಷವರ್ಧನ್ ಅವರು ಚಾಮರಾಜನಗರದಲ್ಲಿ ನಿರಂತರವಾಗಿ ಪ್ರಚಾರದಲ್ಲಿ ಭಾಗಿಯಾಗಿದ್ದಾರೆ. ಕಾಂಗ್ರೆಸ್ ನಾಯಕರಿಗೆ ತಪ್ಪಿತಸ್ಥ ಮನೋಭಾವ, ಸೋಲಿನ ಭಯ ಕಾಡಲಾರಂಭಿಸಿದೆ. ಅದಕ್ಕಾಗಿ ಎಲ್ಲಾ ಪಕ್ಷದ ನಾಯಕರನ್ನೂ ಭೇಟಿಯಾಗುತ್ತಿದ್ದಾರೆ ಎಂದು ಟಾಂಗ್ ನೀಡಿದರು. ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವತ್ಥನಾರಾಯಣ್ ಹಾಗೂ ಮಾಜಿ ಶಾಸಕ ಪ್ರೀತಂಗೌಡ ಇಬ್ಬರೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಉಸ್ತುವಾರಿಗಳಾಗಿದ್ದಾರೆ. ಸಂಸದ ಪ್ರತಾಪ್ ಸಿಂಹ ಸ್ಟಾರ್ ಪ್ರಚಾರಕರಾಗಿರುವ ಕಾರಣ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಚಾರದಲ್ಲಿ ಭಾಗಿಯಾಗಬೇಕು. ಹಾಗೆಯೇ ಮೈಸೂರಿಗೂ ಬರುತ್ತಾರೆ. ಅವರು ಸಂಸದರಾಗಿ ಉತ್ತಮವಾಗಿ ಕೆಲಸ ಮಾಡಿದ್ದಾರೆ. ರಾಜ್ಯದ 12 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಬದಲಾವಣೆಯಾಗಿದ್ದು, ಪಕ್ಷದ ತೀರ್ಮಾನಕ್ಕೆ ಬದ್ಧರಾಗಿ ಎಲ್ಲರೂ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದರು. ಮಾಜಿ ಮೇಯರ್ ಶಿವಕುಮಾರ್, ಮುಖಂಡರಾದ ದೇವರಾಜ್, ಜೋಗಿ ಮಂಜು, ಮಹೇಶ್ ರಾಜೇ ಅರಸ್, ರಾಕೇಶ್ ಗೌಡ, ಸಂತೋಷ್ ಮತ್ತಿತರರಿದ್ದರು.

ಭಾರಿ ಪೊಲೀಸ್ ಭದ್ರತೆ; ಎಸ್‌ಪಿಜಿ ಕಟ್ಟೆಚ್ಚರ

ವೇಳಾಪಟ್ಟಿಯಲ್ಲಿ ತಿಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಧಾನ ಮಂತ್ರಿಗಳ ಆಗಮನದ ಹಿನ್ನಲೆಯಲ್ಲಿ ಮೈಸೂರಿನಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿದ್ದು, ಮಂಡಕಳ್ಳಿ ವಿಮಾನ ನಿಲ್ದಾಣ, ಓವಲ್ ಮೈದಾನ ಮತ್ತು ಮಹಾರಾಜ ಕಾಲೇಜು ಮೈದಾನದಲ್ಲಿ ಈಗಾಗಲೇ ಎಸ್‌ಪಿಜಿ ಅಧಿಕಾರಿಗಳು ನಿಗಾ ವಹಿಸಿದ್ದಾರೆ.

ಎಸ್‌ಪಿಜಿ ಅಧಿಕಾರಿಗಳ ನಿರ್ದೇಶನದಂತೆ ಮೈಸೂರು ಪೊಲೀಸರು ಪರ್ಯಾಯ ರಸ್ತೆ ಮಾರ್ಗವನ್ನೂ ಸಜ್ಜುಗೊಳಿಸಿದ್ದಾರೆ. ಮಂಡಕಳ್ಳಿಗೆ ಆಗಮಿಸಲಿರುವ ಮೋದಿ ಅವರನ್ನು ಭಾರೀ ಭದ್ರತೆಯೊಂದಿಗೆ ಕಾರಿನಲ್ಲಿ ನಂಜನಗೂಡು ರಸ್ತೆ, ಗನ್‌ಹೌಸ್ ಸರ್ಕಲ್, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ, ಮುಡಾ ಜಂಕ್ಷನ್ ಮಾರ್ಗವಾಗಿ ಕ್ರಾಫರ್ಡ್ ಹಾಲ್ ಬಳಿಯ ರೈಲ್ವೇ ಲೆವೆಲ್ ಕ್ರಾಸಿಂಗ್ ಬಳಿ ಎಡಕ್ಕೆ ತಿರುಗಿ ಸಮಾವೇಶ ನಡೆಯುವ ಮಹಾರಾಜ ಕಾಲೇಜು ಮೈದಾನದ ವೇದಿಕೆಗೆ ಕರೆತಂದು, ಅದೇ ಮಾರ್ಗ ವಾಪಸ್ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಕರೆದೊಯ್ಯಲು ಪರ್ಯಾಯ ಮಾರ್ಗವನ್ನು ಸಿದ್ಧಪಡಿಸಲಾಗಿದೆ.

ವೇದಿಕೆ ಸುತ್ತಲಿನ 60 ಅಡಿ ಅಳತೆಯ ಜಾಗವನ್ನು ಬಿಟ್ಟು ಡಬಲ್ ಬ್ಯಾರಿಕೇಡ್ ಮಾಡಿ ಮುಂದೆ ಆಸನ ವ್ಯವಸ್ಥೆಗೆ ಅನುವು ಮಾಡಿಕೊಡಲಾಗಿದೆ. ಬೃಹತ್ ವಾಟರ್ ಪ್ರೂಫ್ ಪೆಂಡಾಲ್ ನಿರ್ಮಿಸಿ, ಗಣ್ಯರು, ಪ್ರಮುಖರು, ಮಹಿಳೆಯರು, ಮಾಧ್ಯಮ ಪ್ರತಿನಿಧಿಗಳಿಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಮೆಟಲ್ ಡೋರ್ ಡಿಟೆಕ್ಟಿವ್ ಮೂಲಕವೇ ನಿಗದಿತ ದ್ವಾರದಲ್ಲೇ ಪ್ರವೇಶಿಸುವಂತೆ ಸುತ್ತಲೂ ಬ್ಯಾರಿಕೇಟ್ ನಿರ್ಮಿಸಿ, ಕಟ್ಟೆಚ್ಚರ ವಹಿಸಲಾಗಿದೆ. ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ, ಆಂಬುಲೆನ್ಸ್, ಅಗ್ನಿಶಾಮಕ ಸಿಬ್ಬಂದಿ ವಾಹನ, ಸ್ವಚ್ಛತೆ ವ್ಯವಸ್ಥೆ ಮಾಡಲಾಗಿದೆ.

ಅಧಿಕಾರಿಗಳ ಪರಿಶೀಲನೆ: ಎಸ್‌ಪಿಜಿ ಹಿರಿಯ ಅಧಿಕಾರಿಗಳು, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ ಅವರು ಇಂದು ಬೆಳಿಗ್ಗೆಯಿಂದ ಸಂಜೆವರೆಗೂ ಮಹಾರಾಜ ಕಾಲೇಜು ಮೈದಾನ ಹಾಗೂ ರಸ್ತೆ ಮಾರ್ಗದಲ್ಲಿ ಮಾಡಿರುವ ಸಿದ್ಧತೆ ಪರಿಶೀಲಿಸಿದರು. ಒಂದೇ ಹೆಲಿಕಾಪ್ಟರ್ 8 ಬಾರಿ ತಾಲೀಮು ನಡೆಸಿ ಟೇಕ್ ಆಫ್ ಮತ್ತು ಲ್ಯಾಂಡಿಂಗ್‌ನಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಭೌತಿಕ ಅಡಚಣೆಗಳಿವೆಯೇ ಎಂಬುದನ್ನು ಎಸ್‌ಪಿಜಿ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಹಾಗೆಯೇ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಮಹಾರಾಜ ಕಾಲೇಜು ಮೈದಾನದವರೆಗಿನ ಪರ್ಯಾಯ ಮಾರ್ಗದಲ್ಲಿ ಪೊಲೀಸರು ತಾಲೀಮು ನಡೆಸಿದರು.

ಸಿಎಂ, ಡಿಸಿಎಂ ಹರಸಾಹಸ

ಆದರೆ, ಈ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕರ ತಂತ್ರ ಫಲಿಸುವುದಿಲ್ಲ. ಬಿಜೆಪಿ ಅಭ್ಯರ್ಥಿ ಯದು ವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಗೆಲುವು ನಿಶ್ಚಿತ ಎಂದರು. ಬಿಜೆಪಿ–ಜೆಡಿಎಸ್ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರು ಸಹಮತದಿಂದ ಪ್ರಚಾರ ಕಾರ್ಯದಲ್ಲಿ ಒಟ್ಟಿಗೆ ಸಾಗುತ್ತಿ ದ್ದಾರೆ. ಎರಡೂ ಪಕ್ಷಗಳ ಕಾರ್ಯಕರ್ತರ ಗುರಿ ಮೈತ್ರಿ ಅಭ್ಯರ್ಥಿಯನ್ನು ಗೆಲ್ಲಿಸುವುದೇ ಆಗಿದೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಜೊತೆ ಜೊತೆಯಾಗಿ ಯದುವೀರ್ ಗೆಲುವಿಗೆ ಶ್ರಮಿಸುತ್ತಿದ್ದೇವೆ ಎಂದು ತಿಳಿಸಿದರು.

ಬಿಜೆಪಿ ಅಭ್ಯರ್ಥಿ ಯದುವೀರ್ ಅವರಿಗೆ ಎಲ್ಲಾ ಜಾತಿ, ಜನಾಂಗ, ಧರ್ಮಗಳ ಬೆಂಬಲ ಸಿಗುತ್ತಿದೆ. ದೇಶಕ್ಕೆ ಮೋದಿ ಆಡಳಿತ ಬೇಕಾಗಿದೆ. ಪ್ರಧಾನಿ ಮೋದಿ ಉಳಿವಿಗೆ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಶಕ್ತಿ ತುಂಬುವ ನಿಟ್ಟಿನಲ್ಲಿ ಎರಡೂ ಪಕ್ಷಗಳ ಕಾರ್ಯಕರ್ತರು, ಮುಖಂಡರು ಉತ್ಸುಕರಾಗಿ ಈ ಚುನಾವಣೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕರು ಒಕ್ಕಲಿಗ ಪ್ಲೇ ಕಾರ್ಡ್ ಬಳಸುತ್ತಿದ್ದಾರೆ. ಇದು ಯಶಸ್ವಿಯಾಗುವುದಿಲ್ಲ. ಒಕ್ಕಲಿಗರು ಜಾತಿವಾದಿಗಳಲ್ಲ. ಒಕ್ಕಲಿಗ ಮತದಾರರು ಕೇವಲ ತಮ್ಮದೇ ಜಾತಿಗೆ ಸೇರಿದ ಅಭ್ಯರ್ಥಿಯನ್ನು ಬೆಂಬಲಿಸುವುದಿಲ್ಲ. ಆ ಕಾರಣದಿಂದ ಈ ಬಾರಿ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಒಕ್ಕಲಿಗ ಸಮುದಾಯ ಬೆಂಬಲ ನೀಡುತ್ತದೆ ಎಂದು ತಿಳಿಸಿದರು.

ನಮಗೆ ಸ್ಫೂರ್ತಿ: ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪರ ಮತಯಾಚಿಸಲು ಪ್ರಧಾನಿ ನರೇಂದ್ರ ಮೋದಿ ನಾಳೆ (ಏ.14) ಮೈಸೂರಿಗೆ ಬರುತ್ತಿರುವುದು ನಮಗೆ ಸ್ಫೂರ್ತಿ ತಂದಿದೆ. ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ಕಾರ್ಯಕರ್ತರ ಸಮಾವೇಶದಲ್ಲಿ ಪಕ್ಷದ ಕಾರ್ಯಕರ್ತರು ಸ್ವಯಂ ಪ್ರೇರಣೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇಂದಿನ ಪ್ರಚಾರ ಸಭೆಗೆ ಶಾಸಕ ಜಿ.ಟಿ.ದೇವೇಗೌಡರು ಉತ್ಸಾಹದಿಂದ ಪಾಲ್ಗೊಂಡಿದ್ದಾರೆ. ಇದು ನಮಗೆ ಹೆಚ್ಚಿನ ಶಕ್ತಿ ತುಂಬಿದೆ ಎಂದರು.

ರಾತ್ರಿವರೆಗೂ ಪ್ರಚಾರ: ಬೆಳಗ್ಗೆ ಸಿದ್ದಲಿಂಗಪುರ ಪಂಚಾಯ್ತಿ ವಿವಿಧ ಗ್ರಾಮಗಳಲ್ಲಿ ಪ್ರಚಾರ ನಡೆಸಿದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 9.30 ರವರೆಗೆ ಮೈದುನಹಳ್ಳಿ, ಮಲ್ಲೇಗೌಡನಕೊಪ್ಪಲು, ಆನಂದೂರು, ಕಲ್ಲೂರು, ರಾಮನಹಳ್ಳಿ, ಹೊಸಕೋಟೆ, ದಡದಕಲ್ಲಹಳ್ಳಿ, ಗುಂಗ್ರಾಲ್‌ಛತ್ರ, ಇಲವಾಲ, ಮೈಗಳಾಪುರ, ಉಂಡವಾಡಿ, ಕಲ್ಲೂರು ನಾಗಹಳ್ಳಿ, ಎಡಹಳ್ಳಿ, ಸಾಗರಕಟ್ಟೆ, ಯಾಚೇಗೌಡನಹಳ್ಳಿ, ದೊಡ್ಡೇಗೌಡನಕೊಪ್ಪಲು ಹಾಗೂ ಯಲಚಹಳ್ಳಿಯಲ್ಲಿ ರೋಡ್ ಶೋ, ಪಾದಯಾತ್ರೆ, ಎತ್ತಿನಗಾಡಿಯಲ್ಲಿ ಮೆರವಣಿಗೆ ನಡೆಸಿ ಮತಯಾಚಿಸಿದರು.

ಈ ವೇಳೆ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಯುವರಾಜರು ನಿಮ್ಮನ್ನು ನೋಡಲು ಚಾಮುಂಡೇಶ್ವರಿ ಕ್ಷೇತ್ರಕ್ಕೆ ಆಗಮಿಸಿದ್ದಾರೆ. ಚಾಮುಂಡೇಶ್ವರಿ ಆಶೀರ್ವಾದ ಹಾಗೂ ನಿಮ್ಮೆಲ್ಲರ ಬೆಂಬಲದಿಂದ ಯದುವೀರ್, ಅವರನ್ನು ಗೆಲ್ಲಿಸಿ ಲೋಕಸಭೆಗೆ ಕಳುಹಿಸಬೇಕು. ಹೆಚ್ಚಿನ ಮತಗಳನ್ನು ನೀಡಿ ಅವರನ್ನು ಗೆಲ್ಲಿಸಬೇಕು. ರಾಜ್ಯದ ಎಲ್ಲಾ ಲೋಕಸಭಾ ಕ್ಷೇತ್ರಗಳಿಗಿಂತ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರು ಅತ್ಯಂತ ಹೆಚ್ಚಿನ ಲೀಡ್‌ನಲ್ಲಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಅರುಣ್‌ಕುಮಾರ್ ಗೌಡ, ಹೇಮಂತ್‌ಕುಮಾರ್‌ಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿಯಿಂದ ಜನರ ದಿಕ್ಕು ತಪ್ಪಿಸುವ ತಂತ್ರಗಾರಿಕೆ

ಎನ್‌ಡಿಎ ಮೈತ್ರಿಕೂಟಕ್ಕೆ ಹಿನ್ನಡೆಯ ಆತಂಕ: ಸಿಎಂ ಸಿದ್ದರಾಮಯ್ಯ



ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರೊಂದಿಗೆ ಮಾತನಾಡಿದರು.

> ಬೆಂಗಳೂರಿನ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ಪ್ರಮುಖ ಆರೋಪಿಗಳನ್ನು ಬಂಧಿಸಿರುವ ಎನ್‌ಐಎ ತಂಡ ಹಾಗೂ ಕರ್ನಾಟಕ ಪೊಲೀಸರಿಗೆ ಅಭಿನಂದಿಸುತ್ತೇನೆ. ಆರೋಪಿಗಳನ್ನು ಕೋಲ್ಕತ್ತಾದಿಂದ ಬೆಂಗಳೂರಿಗೆ ಕರೆ ತಂದು ಹೆಚ್ಚಿನ ವಿಚಾರಣೆಗೊಳಪಡಿಸಿದ ಬಳಿಕ ಆರೋಪಿಗಳ ಪೂರ್ವಾಪರ ಹಾಗೂ ಇನ್ನಿತರ ಮಾಹಿತಿ ಲಭ್ಯವಾಗಲಿದೆ.
> – ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೈಸೂರು, ಏ.13(ಎಂಟಿವೈ)– ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಬಹುಮತ ಬರುವುದಿಲ್ಲ ಎಂದು ಮನವರಿಕೆಯಾಗುತ್ತಿದ್ದಂತೆ ಬಿಜೆಪಿ ನಾಯಕರು ಜನರನ್ನು ದಿಕ್ಕು ತಪ್ಪಿಸುವ ತಂತ್ರಗಾರಿಕೆಯಲ್ಲಿ ತೊಡಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ತಮ್ಮ ನಿವಾಸದ ಬಳಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯಾವುದೇ ಅಭಿವೃದ್ಧಿ ಕಾರ್ಯ ಮಾಡದೆ, ಕೋಮುಭಾವನೆ ಕೆರಳಿಸುವ ಕೆಲಸವನ್ನೇ ಮಾಡುತ್ತಿರುವುದರಿಂದ ದೇಶದ ಜನತೆ ಬೇಸತ್ತಿದ್ದಾರೆ. ಇದರಿಂದ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗಲಿದೆ ಎಂದರು.

ಎನ್‌ಡಿಎ ಮೈತ್ರಿಕೂಟಕ್ಕೆ ಬಹುಮತ ಲಭಿಸುವುದಿಲ್ಲ ಎಂದು ಬಿಜೆಪಿ ನಾಯಕರಿಗೆ ಗೊತ್ತಾಗಿದೆ. ಇದರಿಂದ ಜನರನ್ನು ಮಂಕು ಮಾಡುವ ತಂತ್ರಗಾರಿಕೆ ನಡೆಸುತ್ತಿದ್ದಾರೆ. ಇಂಡಿಯಾ ಮೈತ್ರಿಕೂಟಕ್ಕೆ ದೇಶದಾದ್ಯಂತ ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ ಇದನ್ನು ಸಹಿಸಲಾಗದೇ ಬಿಜೆಪಿ ನಾಯಕರು ಈ ಬಾರಿ 400ಕ್ಕೂ ಹೆಚ್ಚು ಸ್ಥಾನ ಪಡೆಯುವುದಾಗಿ ಹೇಳಿಕೊಳ್ಳುತ್ತಿದ್ದಾರೆ. ಇದು ಜನರ ದಾರಿ ತಪ್ಪಿಸುವ ಹುನ್ನಾರ ಎಂದು ಕಿಡಿಕಾರಿದರು.

ಕರ್ನಾಟಕಕ್ಕೆ ನೀಡಿದ ಕೊಡುಗೆ ಏನು: ಚುನಾವಣಾ ಪ್ರಚಾರಕ್ಕೆ ರಾಜ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಆಗಮನಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಪ್ರಧಾನಿ ಮೋದಿ ರಾಜ್ಯಕ್ಕೆ ಬಂದು, ಹೋಗುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ರಾಜ್ಯಕ್ಕೆ ಬಂದಾಗ ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಿರುವ ಕೊಡುಗೆ ಏನು ಎಂದು ಜನರಿಗೆ ತಿಳಿಸಬೇಕು. ರಾಜ್ಯದ ಜನತೆಗೆ ಸತ್ಯ ಹೇಳಬೇಕು. ನಿರುದ್ಯೋಗ ಸಮಸ್ಯೆ ಬಗೆಹರಿಸಲು ಕೈಗೊಂಡಿರುವ ಕ್ರಮ, ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯ, ಭೀಕರ ಬರಗಾಲ ತಲೆದೋರಿದ್ದರೂ ಇದುವರೆಗೆ ಪರಿಹಾರ ನೀಡದೇ ಇರುವ ಕಾರಣವನ್ನು ರಾಜ್ಯದ ಜನರ ಮುಂದೆ ಇಡಬೇಕು ಎಂದು ಆಗ್ರಹಿಸಿದರು.

ಈಗ ಸಂವಿಧಾನದ ಬಗ್ಗೆ ಸುಳ್ಳು ಮಮಕಾರ: ಡಾ.ಅಂಬೇಡ್ಕರ್ ಬಂದರೂ ಸಂವಿಧಾನ ಬದಲಿಸಲು ಸಾಧ್ಯವಿಲ್ಲ. ಬಿಜೆಪಿ ಸಂವಿಧಾನದ ಪರವಾಗಿದೆ ಎಂದು ಪ್ರಧಾನಿ ಮೋದಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆಯಾಗುತ್ತಿರುವುದು ಮನವರಿಕೆಯಾದ ನಂತರ ಇದೀಗ ಮೋದಿ ಅವರಿಗೆ ಸಂವಿಧಾನದ ಮೇಲೆ ಮಮಕಾರ ಉಂಟಾಗುತ್ತಿರುವಂತೆ ಕಾಣುತ್ತಿದೆ ಎಂದರು.

ಈ ಹಿಂದೆ ತಮ್ಮದೇ ಸಂಪುಟದಲ್ಲಿ ಸಚಿವರಾಗಿದ್ದ ಅನಂತಕುಮಾರ್ ಹೆಗಡೆ ನಾವು ಅಧಿಕಾರಕ್ಕೆ ಬಂದಿರುವುದೇ ಸಂವಿಧಾನ ಬದಲಿಸಲು ಎಂದು ಹೇಳಿಕೆ ನೀಡಿದ್ದರು. ಆಗ ಅನಂತ ಕುಮಾರ್ ಹೆಗಡೆ ವಿರುದ್ಧ ಏನು ಕ್ರಮ ಕೈಗೊಂಡರು. ಅವರನ್ನು ಪಕ್ಷದಿಂದ ಅಥವಾ ಮಂತ್ರಿ ಸ್ಥಾನದಿಂದ ಕೈಬಿಟ್ಟರೇ ಎಂದು ಪ್ರಶ್ನಿಸಿದರು. ಈಗ 400ಕ್ಕಿಂತ ಹೆಚ್ಚು ಸ್ಥಾನ ಬಂದರೆ ಸಂವಿಧಾನ ತಿದ್ದುಪಡಿ ಮಾಡುತ್ತೇವೆ ಎಂದು ಹೇಳಿಕೆ ನೀಡಿದ್ದಾರೆ. ಕೇವಲ ಬಾಯಿ ಮಾತಿಗೆ ಸಂವಿಧಾನದ ಜಪ ಮಾಡುತ್ತಿದ್ದಾರೆ. ಜನ ಇದ್ದಕ್ಕೆ ತಕ್ಕಪಾಠ ಕಲಿಸುತ್ತಾರೆ ಎಂದ ಅವರು, ಉತ್ತರ ಕರ್ನಾಟಕದಲ್ಲಿ ಐದು ವರ್ಷಗಳಿಂದ ಏನೂ ಕೆಲಸ ಮಾಡದೇ ಮನೆಯಲ್ಲಿ ಕುಳಿತಿದ್ದರು. ಕೊನೇ 3–4 ತಿಂಗಳಿನಿಂದ ಮನೆ ಹೊರಗೆ ಬಂದಿದ್ದಾರೆ. ಸೋಲುವುದು ಖಚಿತ ಎಂದು ಗೊತ್ತಾಗುತ್ತಿದ್ದಂತೆ ಅನಂತ ಕುಮಾರ್ ಹೆಗಡೆಗೆ ಟಿಕೆಟ್ ದೊರೆತಿಲ್ಲ ಎಂದರು.

ಬಿಜೆಪಿ ಎಂದಿಗೂ ಸಂವಿಧಾನದ ಪರವಿಲ್ಲ: ಈ ಹಿಂದಿನಿಂದಲೂ ಬಿಜೆಪಿ ಸಂವಿಧಾನದ ಪರವಾಗಿಲ್ಲ. ಸಂವಿಧಾನ ಜಾರಿಯಾದಾಗ ಸಾವರ್ಕರ್ ಹಾಗೂ ಆರ್‌ಎಸ್‌ಎಸ್ ಮುಖ್ಯಸ್ಥ ಗೋಲ್ವಾಲ್ಕರ್ ಭಾರತದ ಸಂವಿಧಾನವನ್ನು ವಿರೋಧಿಸಿದ್ದರು. ಡಾ.ಅಂಬೇಡ್ಕರ್ ಬರೆದಿದ್ದಾರೆ ಎನ್ನುವ ಕಾರಣಕ್ಕೆ ವಿರೋಧಿಸಿದ್ದರು. ಆ ಚಾಳಿಯನ್ನು ಇಂದಿನ ಬಿಜೆಪಿ ನಾಯಕರು ಮುಂದುವರೆಸುತ್ತಿದ್ದಾರೆ ಎಂದು ಆರೋಪಿಸಿದರು. ಈ ಸಂದರ್ಭದಲ್ಲಿ ಸಚಿವ ಕೆ.ವೆಂಕಟೇಶ್, ಶಾಸಕ ಎ.ಆರ್. ಕೃಷ್ಣಮೂರ್ತಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಂಡ್ಯ ಪ್ರವಾಸಿ ಸ್ಥಳಗಳ ಅಭಿವೃದ್ಧಿ; ನೀರಾವರಿ ಯೋಜನೆಗೆ ಒತ್ತು

● ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಭರವಸೆ ● ಸಾಲಿಗ್ರಾಮದಲ್ಲಿ ಚಲುವರಾಯಸ್ವಾಮಿ ರೋಡ್ ಶೋ



ಸಾಲಿಗ್ರಾಮದಲ್ಲಿ ಸ್ಟಾರ್ ಚಂದ್ರು, ಸಚಿವ ಚಲುರಾಯಸ್ವಾಮಿ ರೋಡ್ ಶೋ

ಕೆ.ಆರ್.ನಗರ,ಏ13– ಬೆಲೆ ಏರಿಕೆ ಮತ್ತು ನಿರುದ್ಯೋಗ ದೇಶದ ಜನತೆಯನ್ನು ತೀವ್ರವಾಗಿ ಕಾಡುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕೆಂದರೆ ಕೃಷಿ ಆಧಾರಿತ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳ ಸ್ಥಾಪನೆಗೆ ಆದ್ಯತೆ ನೀಡಬೇಕು. ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸಿ ಗ್ರಾಮೀಣ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕೆಂಬ ಕನಸು ಕಟ್ಟಿಕೊಂಡು ರಾಜಕೀಯಕ್ಕೆ ಬಂದಿದ್ದೇನೆ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ(ಸ್ಟಾರ್ ಚಂದ್ರು) ಹೇಳಿದರು.

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಚುನಾವಣಾ ಪ್ರಚಾರ ನಡೆಸುವ ಸಂದರ್ಭದಲ್ಲಿ ಮಾತನಾಡಿ, ನಾನು ಕಡಿಮೆ ಮಾತನಾಡುತ್ತೇನೆ. ಮಣ ಮಾತಿಗಿಂತ ಕಣ ಕೃತಿ ಲೇಸು ಎಂಬ ಮಾತನ್ನು ನಂಬಿದವನು. ನನ್ನ ಜಿಲ್ಲೆಯನ್ನು ಅಭಿವೃದ್ಧಿಪಡಿಸಬೇಕೆಂದು ಬಂದಿದ್ದೇನೆ ಎಂದರು. ಜಿಲ್ಲೆಯಲ್ಲಿ ಅನೇಕ ಪ್ರವಾಸಿ ತಾಣಗಳು, ಪುಣ್ಯಕ್ಷೇತ್ರಗಳಿವೆ. ಪ್ರವಾಸೋದ್ಯಮ ಉತ್ತೇಜಿಸಲು ಟೂರಿಸ್ಟ್ ಸರ್ಕ್ಯೂಟ್ ರೂಪಿಸಬೇಕಿದೆ ಕೇಂದ್ರದಿಂದ ವಿಶೇಷ ಅನುದಾನ ತಂದು ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸುತ್ತೇನೆ ನೀರಾವರಿ ಯೋಜನೆಗಳಿಗೆ ಒತ್ತು ನೀಡುತ್ತೇನೆ ಎಂದು ಹೇಳಿದರು.

ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು ಎಲ್ಲಾ ವರ್ಗದವರನ್ನು ತಲುಪುತ್ತಿವೆ. ಕಾಂಗ್ರೆಸ್‌ನ ಜನಪರ ಕಾರ್ಯಕ್ರಮಗಳಿಗೆ ಜನಮನ್ನಣೆ ಸಿಗಲಿದ್ದು, ಈ ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ ಎಂದರು. ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ಬೆಳೆ ವಿಮೆ, ಕನಿಷ್ಠ ಬೆಂಬಲ ಬೆಲೆ ಜಾರಿಗೆ ತಂದು ರೈತಪರ ಆಡಳಿತ ನೀಡಲಾಗುತ್ತದೆ. ಬಡ ಮಹಿಳೆಯರಿಗೆ ವರ್ಷಕ್ಕೆ 1 ಲಕ್ಷ ನೀಡಲಾಗುವುದು. ಗೃಹಲಕ್ಷ್ಮಿ ಜೊತೆಗೆ ಮಹಾಲಕ್ಷ್ಮಿ ಕೂಡ ಮಹಿಳೆಯರ ಮನೆ ಬಾಗಿಲಿಗೆ ತಲುಪಲಿದೆ. ಇದರಿಂದ ರಾಜ್ಯದ ಮಹಿಳೆಯರಿಗೆ ಪ್ರತಿ ವರ್ಷಕ್ಕೆ 1.24 ಲಕ್ಷ ರೂ. ಮನೆಯ ಯಜಮಾನಿಗೆ ಸಿಗಲಿದೆ ಎಂದು ಹೇಳಿದರು.

ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಮಾತನಾಡಿ, ಎಲ್ಲರ ಹಿತ ಕಾಯುವ ಪಕ್ಷ ಕಾಂಗ್ರೆಸ್. ರೈತ ವಿರೋಧಿ ಪಕ್ಷ ಬಿಜೆಪಿ. ಸಂವಿಧಾನ, ಪ್ರಜಾಪ್ರಭುತ್ವ ಉಳಿವಿಗಾಗಿ ಕಾಂಗ್ರೆಸ್‌ಅನ್ನು ಬೆಂಬಲಿಸಬೇಕು. ಸ್ವಾಭಿಮಾನದ ಚುನಾವಣೆ ಇದಾಗಿದ್ದು, ಜಿಲ್ಲೆಯ ಜನರ ಸ್ವಾಭಿಮಾನ ಮತ್ತೆ ಗೆಲ್ಲಬೇಕು ಎಂದು ಹೇಳಿದರು.

ಈ ವೇಳೆ ಶಾಸಕ ಡಿ.ರವಿಶಂಕರ್, ಜಿಪಂ ಮಾಜಿ ಸದಸ್ಯ ಸಿ.ಪಿ.ರಮೇಶ್ ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.

ಸ್ಟಾರ್ ಚಂದ್ರು ಅವರು ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಹೊನ್ನೇನಹಳ್ಳಿಯಲ್ಲಿ ಬಾಬಾಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಸಾಲಿಗ್ರಾಮದಲ್ಲಿ ರೋಡ್ ಶೋ: ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಸಚಿವ ಚಲುವರಾಯಸ್ವಾಮಿ ಅವರೊಂದಿಗೆ ಸಾಲಿಗ್ರಾಮ ಪಟ್ಟಣದಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರು. ಶಾಸಕ ರವಿಶಂಕರ್, ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಅವರೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರು. ಕಾರ್ಯಕರ್ತರು ಪಟಾಕಿ ಸಿಡಿಸಿ, ಹೂ ಮಾಲೆ ಹಾಕಿ ಸ್ವಾಗತ ಕೋರಿದರು.

ಈ ವೇಳೆ ಮಾತನಾಡಿದ ಸಚಿವ ಚಲುವರಾಯಸ್ವಾಮಿ, ದಕ್ಷಿಣ ಭಾರತದಲ್ಲಿ ನೂರಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲ್ಲಲಿದ್ದು, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದೆ. ಸಾಲಿಗ್ರಾಮ ತಾಲೂಕಿನ ಜನತೆ ಕಾಂಗ್ರೆಸ್ ಬೆಂಬಲಿಸಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ ಕೈ ಬಲಪಡಿಸಬೇಕು ಎಂದು ಹೇಳಿದರು. ಕೇಂದ್ರದಲ್ಲಿ 10 ವರ್ಷ ಆಡಳಿತ ನಡೆಸಿದ ನರೇಂದ್ರ ಮೋದಿ ಅವರು ಕೊಟ್ಟ ಭರವಸೆಗಳನ್ನು ಈಡೇರಿಸಲಿಲ್ಲ. ನಮ್ಮ ರಾಜ್ಯಕ್ಕೆ ಬರಬೇಕಾದ ತೆರಿಗೆ ಪಾಲು ಕೊಡಲಿಲ್ಲ. ಏಳು ತಿಂಗಳಾದರೂ ಬರ ಪರಿಹಾರ ಹಣ ಬಿಡುಗಡೆ ಮಾಡಿಲ್ಲ. ಈಗ ಚುನಾವಣಾ ಆಯೋಗದ ನೆಪ ಹೇಳುತ್ತಿದ್ದಾರೆ ಎಂದರು. ನರೇಂದ್ರ ಮೋದಿ, ಅಮಿತ್ ಶಾ ಅವರನ್ನು ಹೀನಾಯವಾಗಿ ಬೈದವರೇ ಈಗ ಅವರ ಜೊತೆ ಮೈತ್ರಿ ಮಾಡಿಕೊಂಡಿದ್ದಾರೆ. ಗ್ಯಾರಂಟಿ ಸರಿಯಿಲ್ಲ, ಅದನ್ನು ನಿಲ್ಲಿಸಬೇಕೆಂದು ಜೆಡಿಎಸ್, ಬಿಜೆಪಿ ಹೋರಾಟ ನಡೆಸಿ ಈಗ ಅದನ್ನು ಸ್ಥಗಿತಗೊಳಿಸುವಂತೆ ಕೋರಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ. ಬಡವರಿಗೆ ಕಾರ್ಯಕ್ರಮ ಮಾಡಿದವರಿಗೆ ವೋಟ್ ಹಾಕ್ತಿರ ಅಥವಾ ಇದನ್ನು ವಿರೋಧಿಸಿ ಬರ ಪರಿಹಾರ ಹಣ ಬಿಡುಗಡೆ, ನೀರಾವರಿ ಯೋಜನೆಗಳಿಗೆ ಅಡ್ಡಿ ಮಾಡುವವರಿಗೆ ವೋಟ್ ಹಾಕ್ತಿರಾ ನೀವೇ ನಿರ್ಧರಿಸಿ ಎಂದರು.



ನೆರೆದಿದ್ದ ಜನತೆ ಉದ್ದೇಶಿಸಿ ಸ್ಟಾರ್ ಚಂದ್ರು ಭಾಷಣ

ಮಂಡ್ಯದಲ್ಲಿ ಏಪ್ರಿಲ್ 17 ರಂದು ರಾಹುಲ್ ಗಾಂಧಿ ಪ್ರಚಾರ



ಬೆಂಗಳೂರು, ಏ.13– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬುಧವಾರ (ಏಪ್ರಿಲ್ 17) ಮಂಡ್ಯದಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ. ನಂತರ ಕೋಲಾರಕ್ಕೂ ಬರಲಿದ್ದಾರೆ ಎಂದು ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಹುಲ್ ಗಾಂಧಿಯವರ ವ್ಯಕ್ತಿತ್ವವನ್ನು ತೇಜೋವಧೆ ಮಾಡುವುದನ್ನು ಬಿಜೆಪಿ ಕಾಯಂ ಕಾರ್ಯಸೂಚಿಯನ್ನಾಗಿ ಮಾಡಿಕೊಂಡಿದೆ. ರಾಹುಲ್ ಗಾಂಧಿಯವರ ವ್ಯಕ್ತಿತ್ವ ಏನು ಎನ್ನುವುದು ದೇಶದ ಜನರಿಗೆ ಚೆನ್ನಾಗಿ ಗೊತ್ತಿದೆ ಎಂದರು.

ಅಂದು ಬೆಳಗ್ಗೆ ಬೆಂಗಳೂರಿಗೆ ಆಗಮಿಸುವ ರಾಹುಲ್ ಗಾಂಧಿ ರಾಜ್ಯ ನಾಯಕರೊಂದಿಗೆ ಮೊದಲು ಮಂಡ್ಯ ಜಿಲ್ಲೆಗೆ ತೆರಳಿ ಪಕ್ಷದ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ಕ್ಷೇತ್ರದ ವಿವಿಧೆಡೆ ಪ್ರಚಾರ ನಡೆಸಲಿದ್ದಾರೆ. ನಂತರ ಸಂಜೆ ಕೋಲಾರಕ್ಕೆ ತೆರಳಿ ಪಕ್ಷದ ಅಭ್ಯರ್ಥಿ ಕೆ.ವಿ.ಗೌತಮ್ ಪರವಾಗಿ ಕ್ಷೇತ್ರದ ಹಲವೆಡೆ ಭರ್ಜರಿ ಪ್ರಚಾರ ನಡೆಸಲಿದ್ದಾರೆ. ಇದೇ ವೇಳೆ ಬೆಂಗಳೂರಿನಲ್ಲಿ ರೋಡ್ ಶೋ ನಡೆಸುವ ಯೋಜನೆಯೂ ಇದ್ದು, ಅದು ಇನ್ನೂ ಖಚಿತಗೊಂಡಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿನಲ್ಲಿ ಕಾಂಗ್ರೆಸ್ ಪ್ರಚಾರ ಮಾಡುತ್ತಿರುವ ಬಗ್ಗೆ ಮಾಜಿ ಸಿಎಂ ಬಿ ಎಸ್ ಯಡಿಯೂರಪ್ಪ ಅಣಕವಾಡಿದ್ದಾರೆ. ರಾಹುಲ್ ಶೀಘ್ರದಲ್ಲೇ ಪ್ರಚಾರದಲ್ಲಿ ಪಾಲ್ಗೊಳ್ಳುತ್ತಾರೆ, ಆದರೆ ಈಗ ನಿಗದಿಪಡಿಸಿರುವ ದಿನಾಂಕವು ತಾತ್ಕಾಲಿಕವಾಗಿದೆ ಎಂದು ಹೇಳಿದ್ದಾರೆ.

ಧರ್ಮದ ಹೆಸರಲ್ಲಿ ರಾಜಕೀಯ ಮಾಡುವವರ ಧಿಕ್ಕರಿಸಿ; ಕಾಂಗ್ರೆಸ್ ಬೆಂಬಲಿಸಿ

ನಾಯಕ ಸಮಾಜಕ್ಕೆ ಸಚಿವ ಸತೀಶ್ ಜಾರಕಿಹೊಳಿ ಮನವಿ



ಮೈಸೂರು ನಗರದ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ನಡೆದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಪಂಗಡ ಮುಖಂಡರ ಸಭೆಯಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿದರು.

ಮೈಸೂರು, ಏ.13(ಎಂಟಿವೈ)– ಧರ್ಮ ರಕ್ಷಣೆಯ ಹೆಸರಿನಲ್ಲಿ ರಾಜಕೀಯ ಮಾಡುವವರನ್ನು ಧಿಕ್ಕರಿಸಿ, ಗ್ಯಾರಂಟಿ ಯೋಜನೆಗಳಿಂದ ಎಸ್‌ಸಿ, ಎಸ್ಟಿ, ಹಿಂದುಳಿದ ವರ್ಗಗಳ ಜನರ ಬದುಕು ಹಸನಾಗಿಸಿರುವ ಕಾಂಗ್ರೆಸ್ ಬೆಂಬಲಿಸಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮನವಿ ಮಾಡಿದ್ದಾರೆ.

ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಹೋಟೆಲ್ ಸಭಾಂಗಣದಲ್ಲಿ ಮೈಸೂರು–ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಪರಿಶಿಷ್ಟ ಪಂಗಡದ ಮುಖಂಡರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಧರ್ಮ ರಕ್ಷಣೆಗಿಂತ ಜನರ ಬದುಕು ರಕ್ಷಣೆ ಮಾಡುವುದು ಮುಖ್ಯ. ನಾವು ಬದುಕಿದರೆ ದೇಶ ಉಳಿಯಲಿದೆ ಎನ್ನುವುದನ್ನು ಅರಿಯಬೇಕು. ಕಾಂಗ್ರೆಸ್ ಪಕ್ಷಕ್ಕೆ ನಾಯಕ ಸಮಾಜ ಬೆಂಬಲ ನೀಡಬೇಕು. ಸಮಾಜದ ಮುಖಂಡರಿಗೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು. ಸರ್ಕಾರದಿಂದ ಸಿಗುವ ಸವಲತ್ತುಗಳು ಸಮುದಾಯಕ್ಕೆ ಸಿಗುವಂತಾಗಬೇಕಾದರೆ ಲೋಕಸಭಾ ಚುನಾವಣೆಯಲ್ಲಿ ಈ ಬಾರಿಯೂ ಕಾಂಗ್ರೆಸ್ ಬೆಂಬಲಿಸಬೇಕು ಎಂದು ಕೋರಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಶೋಷಿತ ಸಮುದಾಯ ಹಿತ ಕಾಯಲು ಹಲವು ಕಾರ್ಯಕ್ರಮ ರೂಪಿಸಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಜನಸಂಖ್ಯೆ ಅನುಗುಣವಾಗಿ ಅನುದಾನ ಮೀಸಲಿಡಲಾಗಿದ್ದು, ಎಸ್‌ಟಿ ವರ್ಗದವರಿಗೆ 7500 ಕೋಟಿ ರೂ. ನೀಡಲಾಗಿದೆ. ಕೆಐಎಡಿಬಿಯಲ್ಲಿ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಭೂಮಿ ನೀಡಲಾಗುತ್ತಿದೆ. ಕೆಎಸ್‌ಎಫ್‌ಸಿಯಲ್ಲಿ ಹತ್ತು ಕೋಟಿ ರೂ. ಸಾಲ ನೀಡುತ್ತಿರುವುದರಿಂದ ಸಮಾಜ ಜನ ಕೈಗಾರಿಕೋದ್ಯಮಿಗಳಾಗಿ ರೂಪುಗೊಳ್ಳುತ್ತಿದ್ದಾರೆ. ನಾವು ಸಂವಿಧಾನವನ್ನು ಒಪ್ಪಿಕೊಂಡು ನಡೆಯುತ್ತಿದ್ದೇವೆ. ಸಂವಿಧಾನ ನಮಗೆ ರಕ್ಷಣೆ ನೀಡುತ್ತಿದೆ. ಮೈಸೂರು ಭಾಗದವರನ್ನು ಗುರುತಿಸಿ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎನ್ನುವುದನ್ನು ಮನವರಿಕೆ ಮಾಡಿಕೊಳ್ಳಬೇಕು. ಕಾಂಗ್ರೆಸ್‌ನ ಎಲ್ಲಾ ಶಾಸಕರು ಒಟ್ಟಾಗಿ ಸರ್ಕಾರದ ಗಮನ ಸೆಳೆಯುತ್ತಿದ್ದೇವೆ. ಸಿಗುವ ಅವಕಾಶವನ್ನು ಬಳಸಿಕೊಂಡು ಹೆಜ್ಜೆ ಹಾಕಬೇಕು. ಸಮುದಾಯ ಕಟ್ಟುವುದು ಮತ್ತು ರಾಜಕೀಯ ಮಾಡುವುದು ಬೇರೆಯಾಗಿದೆ. ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಿ ಗೆಲ್ಲುವ ಕೆಲಸ ಮಾಡಬೇಕು. ಸಮುದಾಯದ ಪ್ರಾಬಲ್ಯ ತೋರಬೇಕು. ಸಂವಿಧಾನಕ್ಕೆ ಅಪಾಯ ಬಂದಾಗ ಅದನ್ನು ಕಾಪಾಡಲು ನಾವು ನಿಲ್ಲಬೇಕು ಎಂದರು.

ಶಾಸಕ ಅನಿಲ್ ಕುಮಾರ್ ಮಾತನಾಡಿ, ನಾಯಕ ಸಮಾಜದ ಸಮಸ್ಯೆಗಳ ಪರಿಹಾರಕ್ಕಾಗಿ ಚುನಾವಣೆ ಮುಗಿದ ಬಳಿಕ ಮತ್ತೊಂದು ಸಭೆಯನ್ನು ಕರೆಯಲಾಗುವುದು. ಮುಖ್ಯಮಂತ್ರಿ ಸಿದ್ಧರಾಮಯ್ಯ ಮೈಸೂರು ಜಿಲ್ಲೆಯವರೇ ಆಗಿರುವ ಕಾರಣ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜು ಮಾತನಾಡಿ, ಮೈಸೂರು ಭಾಗದ ನಾಯಕ ಸಮಾಜ ಸತೀಶ್ ಜಾರಕಿಹೊಳಿ ಅವರ ನಾಯಕತ್ವವನ್ನು ನಂಬಿದೆ. ಬಿಜೆಪಿ ಸರ್ಕಾರ ಬಂದಾಗ ಬಿ.ಶ್ರೀರಾಮುಲು ಅವರನ್ನು ಉಪ ಮುಖ್ಯಮಂತ್ರಿ ಮಾಡುತ್ತೇವೆಂದು ಕೊಟ್ಟ ಭರವಸೆ ಹುಸಿಯಾಯಿತು. ನಂತರದ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಮಾಡುತ್ತಾರೆಂಬ ನಿರೀಕ್ಷೆ ಇಟ್ಟುಕೊಂಡು ಬೆಂಬಲ ನೀಡಲಾಗುತ್ತಿದೆ. ಮುಂದೆ ಮುಖ್ಯಮಂತ್ರಿ ಆಗುವ ಅವಕಾಶ ಬರುವುದರಿಂದ ನಾಯಕ ಸಮಾಜ ಕಾಂಗ್ರೆಸ್ ಬೆಂಬಲಿಸುತ್ತದೆ ಎಂದರು.

ಸಭೆಯಲ್ಲಿ ನಾಯಕ ಸಮುದಾಯದ ಮುಖಂಡ ಕಲ್ಲಂಬಳ್ಳಿ ಶ್ರೀನಿವಾಸ ನಾಯಕ, ರಮ್ಮನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ನಾಗರಾಜು ಸೇರಿದಂತೆ ಇನ್ನಿತರರು ಮಾತನಾಡಿದರು.

ಸಾಮಾಜಿಕ ಸಮಸ್ಯೆಗೆ 'ದಿವ್ಯೌಷಧ' ಡಾ.ಅಂಬೇಡ್ಕರ್



ಬಾಬಾ ಸಾಹೇಬರೆಂಬ ವಿಶ್ವಜ್ಞಾನಿ 'ಸಾಮಾಜಿಕ ವೈದ್ಯ'ರಾಗಿ ಭಾರತದ ತಳಸಮುದಾಯಗಳಿಗೆ, ಶೋಷಿತರಿಗೆ ಎಲ್ಲಾ ರೀತಿಯ ಸಾಮಾಜಿಕ ರೋಗ-ರುಜಿನಗಳಿಗೆ (ಅಸ್ಪೃಶ್ಯತೆ, ಸಾಮಾಜಿಕ ಅಸಮಾನತೆ, ತಾರತಮ್ಯ, ಲಿಂಗ ಭೇದ, ಬಹಿಷ್ಕಾರ, ಬಡತನ ಇತ್ಯಾದಿ) ಸಂವಿಧಾನವೆಂಬ 'ದಿವ್ಯೌಷಧ'ವನ್ನು ನೀಡಿದ್ದಾರೆ. ಸಂವಿಧಾನ ಜಾರಿಯಾಗಿ ಎಪ್ಪತ್ತೈದು ವರ್ಷಗಳು ಕಳೆದರೂ, ಬಾಬಾ ಸಾಹೇಬರು ಹೇಳಿದ ರೀತಿಯಲ್ಲಿ ಮತ್ತು ಪ್ರಮಾಣದಲ್ಲಿ ಈ ದಿವ್ಯೌಷಧವನ್ನು ಸೇವಿಸುವ ಸ್ಥಿತಿಯಲ್ಲಿ ಭಾರತದ ಈ ಸಾಮಾಜಿಕ ರೋಗಿಗಳು ತಯಾರಿಲ್ಲ. ಅದನ್ನು ಬಿಟ್ಟು ಯಾರ್‍ಯಾರೋ ಹೇಳಿದ 'ನಕಲಿ ಔಷಧಿ'ಗಳನ್ನು ಸೇವಿಸುವ ಮೂಲಕ ಈ ಸಾಮಾಜಿಕ ರೋಗ-ರುಜಿನಗಳು ಇನ್ನೂ ತಾಂಡವವಾಡುವ ಜೊತೆಗೆ ದಮನಿತರು ಮನುವಾದದ ವಿರುದ್ಧ ಪ್ರತಿರೋಧ ಒಡ್ಡಲು ಸಾಧ್ಯವಾಗದೇ ಪರದಾಡುತ್ತಿದ್ದಾರೆ.

ಸಿ.ಹರಕುಮಾರ್
ಮೊ:9900557591

ಜಗತ್ತಿನಲ್ಲಿ ಪ್ರತಿ ನಿಮಿಷಕ್ಕೂ ನೆನಪಿಸಿಕೊಳ್ಳುವಂತಹ ವ್ಯಕ್ತಿ ಮತ್ತು ವ್ಯಕ್ತಿತ್ವ ಯಾರಾದರೂ ಇದ್ದರೆ ಅದು ಡಾ. ಭೀಮ್‌ರಾವ್ ಅಂಬೇಡ್ಕರ್ ಮಾತ್ರ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿರುವುದು ಅತ್ಯಂತ ಸಂದರ್ಭೋಚಿತ. ಯಾಕೆಂದರೆ, ಡಾ.ಬಿ.ಆರ್.ಅಂಬೇಡ್ಕರ್ ಹುಟ್ಟಿ ಇಂದಿಗೆ 133 ವರ್ಷಗಳು ಸಂದಿವೆ. ಬಹುಶಃ ತನ್ನ ಸಾವಿನ ನಂತರವೂ ಜಗತ್ತಿನಾದ್ಯಂತ ಜನರ ಹೃದಯದಲ್ಲಿ, ಪ್ರಗತಿಪರ ಚಳವಳಿಯಲ್ಲಿ, ಮಾನವ ಹಕ್ಕುಗಳ ಹೋರಾಟದಲ್ಲಿ, ಸಾಹಿತ್ಯಾಸಕ್ತರ ಬರವಣಿಗೆಯಲ್ಲಿ, ಕಾನೂನು ಅಭ್ಯಸಿಸುವವರಲ್ಲಿ, ಸಂವಿಧಾನಿಕ ವಿಷಯಗಳನ್ನು ಅಧ್ಯಯನ ಮಾಡುವವರಲ್ಲಿ, ಅಂಬೇಡ್ಕರ್ ಇಂದಿಗೂ ಜೀವಂತವಾಗಿದ್ದಾರೆ. ಹಾಗಾಗಿ, ಮನೋಶಾಸ್ತ್ರಜ್ಞರ ಜನರ ಜ್ಞಾಪಕಶಕ್ತಿ ಅಲ್ಪಕಾಲಿಕ (Public memory is very short) ಎನ್ನುವ ಸಿದ್ಧಾಂತವೂ ಅಂಬೇಡ್ಕರ್ ವಿಚಾರದಲ್ಲಿ ತಿರುವುಮುರುವಾಗಿದೆ. ವರ್ಷದಿಂದ ವರ್ಷಕ್ಕೆ ಅಂಬೇಡ್ಕರ್‌ರವರು ಭಾರತದ ಎಲ್ಲೆ ಮೀರಿ ಜಗತ್ತಿನಾದ್ಯಂತ ಆವರಿಸಿಕೊಳ್ಳುತ್ತಿದ್ದಾರೆ. ಅಂಬೇಡ್ಕರ್‌ರವರ ಬಗೆಗಿನ ಅಧ್ಯಯನ, ಅವರ ಬರಹ-ಭಾಷಣಗಳ ವಿಶ್ಲೇಷಣೆ, ಅವರು ಪ್ರತಿಪಾದಿಸಿದ ಸಿದ್ಧಾಂತ ದಿನೇದಿನೆ ವ್ಯಾಪಕಗೊಳ್ಳುತ್ತಿದೆ. ಇದನ್ನು ಮನಗಂಡೇ ವಿಶ್ವಸಂಸ್ಥೆಯು 2016 ರಲ್ಲಿ ಏಪ್ರಿಲ್ 14' ಅನ್ನು 'ವರ್ಲ್ಡ್ ನಾಲೆಡ್ಜ್ ಡೇ' (ವಿಶ್ವ ಜ್ಞಾನದ ದಿನ) ಎಂದು ಘೋಷಿಸಿದೆ. ಅಸ್ಪೃಶ್ಯತೆಯ ಕಳಂಕದಿಂದಾಗಿ, ಶಿಕ್ಷಣದಿಂದ ವಂಚಿತರಾಗಿ, ಅಪಾರ ನೋವು, ಸಂಕಟ, ಅವಮಾನಗಳನ್ನು ಎದುರಿಸಿದ ಒಬ್ಬ ತಳ ಸಮುದಾಯದ ವ್ಯಕ್ತಿ, ತನ್ನ ಜೀವಿತಾವಧಿಯಲ್ಲಿ 36 ಡಿಗ್ರಿಗಳನ್ನು ಸಂಪಾದಿಸಿ, 64 ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿ, ಒಂಬತ್ತು ಭಾಷೆಗಳಲ್ಲಿ ಪಾಂಡಿತ್ಯ ಪಡೆದು, ವಿಶ್ವದ ವಿವಿಧ ಸಂವಿಧಾನಗಳನ್ನು ಅಧ್ಯಯನ ಮಾಡಿ, ತನ್ನ ತಾಯ್ನಾಡಿಗೆ 'ವಿಶ್ವದಲ್ಲೇ ಅತ್ಯಂತ ಬೃಹತ್ ಲಿಖಿತ ಸಂವಿಧಾನ'ವನ್ನು ಧಾರೆ ಎರೆದುಕೊಟ್ಟ ಧೀಮಂತನ ಹುಟ್ಟಿದ ದಿನವನ್ನು 'ವಿಶ್ವ ಜ್ಞಾನದ ದಿನ'ವನ್ನಾಗಿ ಆಚರಿಸಲಾಗುತ್ತದೆಂಬುದನ್ನು ಯಾರೂ ಊಹಿಸಿರಲಿಲ್ಲ. ಆದರೆ, ಅದನ್ನು ಸಾಧ್ಯವಾಗಿಸಿದವರು ಡಾ.ಭೀಮ್‌ರಾವ್ ಅಂಬೇಡ್ಕರ್.

ಏಪ್ರಿಲ್ ತಿಂಗಳ ವಿಶೇಷತೆಗಳು:

ಸಾಮಾನ್ಯವಾಗಿ ಏಪ್ರಿಲ್ 14 ಅಂಬೇಡ್ಕರ್‌ರವರ ಜನ್ಮ ದಿನಾಚರಣೆಯೆಂದು ಎಲ್ಲರಿಗೂ ಗೊತ್ತು. ಆದರೆ, ಏಪ್ರಿಲ್ ತಿಂಗಳು, ಅವರ ಬದುಕಿನಲ್ಲಿಯೂ ಬಹಳಷ್ಟು ವಿಶೇಷತೆಗಳಿಂದ ಕೂಡಿವೆ. ಜಗತ್ತಿನಾದ್ಯಂತ 'ಏಪ್ರಿಲ್ 01' ಅನ್ನು 'ವಿಶ್ವ ಮೂರ್ಖರ' ದಿನವನ್ನಾಗಿ ಆಚರಿಸುತ್ತಾರೆ. ಆದರೆ, ಭಾರತದ ಮಟ್ಟಿಗೆ 'ಏಪ್ರಿಲ್-01' ಬಹಳ ವಿಶೇಷವಾದ ದಿನ. ಯಾಕೆಂದರೆ ಭಾರತದ ಬ್ಯಾಂಕರುಗಳ ಬ್ಯಾಂಕ್ (Banker's Bank) ಆಗಿರುವ 'ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ' (RBI) ವನ್ನು ಅಂಬೇಡ್ಕರ್‌ರವರು ಕೊಡುಗೆಯಾಗಿ ನೀಡಿದ ದಿನ. ವಿಶ್ವದ ಮೊದಲ ಮಹಾಯುದ್ಧವಾದ ನಂತರ ಭಾರತದಲ್ಲಿ ರೂಪಾಯಿಯ ಅಪಮೌಲ್ಯವಾದ್ದರಿಂದ ತೀವ್ರ ಕುಸಿತಕ್ಕೊಳಗಾಗಿದ್ದ ರೂಪಾಯಿಯ ಮೌಲ್ಯವನ್ನು ಸರಿದಾರಿಗೆ ತರಲು ಅಂದಿನ ಬ್ರಿಟಿಷ್ ಸರ್ಕಾರ ಭಾರತಕ್ಕೆ ನಿಯೋಜಿಸಿದ್ದ Royal (Hilton) Commission ನಿಯೋಗವು ಅಂಬೇಡ್ಕರ್‌ರವರ ವಿರಚಿತ 'The problem of the Rupee' ಎನ್ನುವ ಗ್ರಂಥದ ಶಿಫಾರಸ್ಸುಗಳ ಆಧಾರದ ಮೇಲೆ ಭಾರತದಲ್ಲಿ ದಿನಾಂಕ: 01.04.1935ರಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಸ್ಥಾಪನೆಯಾಯಿತು. ಎರಡನೆಯದಾಗಿ, ದಿನಾಂಕ:04.04.1906ರಂದು ಅಂಬೇಡ್ಕರ್‌ರವರು ರಮಾಬಾಯಿಯವರನ್ನು ಮದುವೆಯಾಗಿ ವೈವಾಹಿಕ ಜೀವನಕ್ಕೆ ಅಡಿಯಿಟ್ಟ ದಿನ. ಬಾಬಾ ಸಾಹೇಬರ ಜೀವನದಲ್ಲಿ ಅವರ ಎಲ್ಲಾ ಸಾಧನೆಗೂ ಹೆಗಲು ಕೊಟ್ಟು ಉತ್ತಮ ಬಾಳಸಂಗಾತಿಯಾಗಿ, ಸ್ನೇಹಿತೆಯಾಗಿ, ತನ್ನ ಬದುಕನ್ನು ಧಾರೆಯೆರೆದವರು ಶ್ರೀಮತಿ ರಮಾಬಾಯಿಯವರು. ಅಂಬೇಡ್ಕರ್ ಬದುಕಿನ ಮಜಲಿಗೆ ಬಂದ ತಿಂಗಳೂ ಕೂಡ 'ಏಪ್ರಿಲ್'. ಅಂಬೇಡ್ಕರ್‌ರವರ ಹುಟ್ಟುಹಬ್ಬದ ನೆನಪಿನಲ್ಲಿ ಈ ಎರಡೂ ಘಟನೆಗಳು ಹಾಸುಹೊಕ್ಕಾಗಿವೆ. ಇನ್ನೊಂದು ವಿಶೇಷವೆಂದರೆ ಕೆನಡಾ ದೇಶದ ಒಂಟಾರಿಯೊ ಪ್ರಾಂತ್ಯದ ಬರ್ಲಿಂಗ್ಟನ್ ನಗರವು 'ಏಪ್ರಿಲ್-2024' ತಿಂಗಳನ್ನು 'ದಲಿತ ಇತಿಹಾಸದ' ಮಾಸವನ್ನಾಗಿ ಆಚರಿಸಲು ಮತ್ತು ಏಪ್ರಿಲ್ 14, 2024 ಅನ್ನು 'ಡೇ ಆಫ್ ಇಕ್ವಿಟಿ' ಎಂದು ಆಚರಿಸಲು ನಿರ್ಧರಿಸುವುದಾಗಿ ಬರ್ಲಿಂಗ್‌ಟನ್ ನಗರದ ಮೇಯರ್ ಮರಿಯಾನ್ನೆ ಮೀಡ್ ವಾರ್ಡ್ ಘೋಷಿಸಿದ್ದಾರೆ. 2024ರ ಏಪ್ರಿಲ್ 14ರಂದು ವಿಶ್ವಸಂಸ್ಥೆಯ ಎಲ್ಲಾ 193 ಸದಸ್ಯ ರಾಷ್ಟ್ರಗಳು ಏಕಕಾಲಕ್ಕೆ ಡಾ.ಬಿ.ಆರ್.ಅಂಬೇಡ್ಕರ್‌ರವರ ದಿನವನ್ನು ಆಚರಿಸುತ್ತಿವೆ.

ವಿಶ್ವಜ್ಞಾನಿಯನ್ನು ಪಡೆದ ಭಾರತವೇಕೆ ಹೀಗೆ?

ಇಂತಹ ವಿಶ್ವಜ್ಞಾನಿಯನ್ನು ಪಡೆದ ಭಾರತ ಮಾತ್ರ ಏಕೆ ಹೀಗೆ? ಎಂಬುದೇ ಇಲ್ಲಿನ ಚರ್ಚಾ ವಸ್ತು. ಸ್ವಾತಂತ್ರ್ಯ ಬಂದ ಎಪ್ಪತ್ತೆಂಟು ವರ್ಷಗಳ ನಂತರವೂ ಮತ್ತು ಸಂವಿಧಾನ ಅಂಗೀಕಾರಗೊಂಡ ಎಪ್ಪತ್ತೈದು ವರ್ಷಗಳ ನಂತರವೂ ಒಂದು ನಿರ್ದಿಷ್ಟ ಸಮುದಾಯವನ್ನು ಜಾತಿಯ ಹೆಸರಿನಲ್ಲಿ ದೌರ್ಜನ್ಯಕ್ಕೊಳಪಡಿಸುವುದು, ಅಪಮಾನಿಸುವುದು, ಅಧಿಕಾರದಿಂದ ದೂರವಿಡುವುದು, ಮಹಿಳೆಯರ ಮೇಲಿನ ಅತ್ಯಾಚಾರ, ಮಹಿಳೆಯರನ್ನು ಭೋಗದ ವಸ್ತುಗಳನ್ನಾಗಿ ನೋಡುವುದು, ತಲೆ ಮೇಲೆ ಮಲ ಹೊರಿಸುವುದು (ಇಂದಿಗೂ ಕೆಲವು ಉತ್ತರ ಭಾರತದ ರಾಜ್ಯಗಳಲ್ಲಿ) ಜಾರಿಯಲ್ಲಿವೆ. ಇತ್ತೀಚೆಗೆ ಮಣಿಪುರದಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಬೆತ್ತಲೆ ಮೆರವಣಿಗೆ ಮಾಡಿಸಿದ ಪ್ರಕರಣ, ವಿಧವೆಯರನ್ನು ಅಮಂಗಳವೆಂದು ಕಾರ್ಯಕ್ರಮಗಳಿಗೆ ಆಹ್ವಾನಿಸದೆ ಅಪಮಾನಿಸುವುದು, ಯಾವುದಾದರೂ ಕಾರ್ಯಕ್ರಮದಲ್ಲಿ ಆಗುವ ಅವಘಡಗಳಿಗೆ ವಿಧವೆಯರನ್ನು ಆಹ್ವಾನಿಸಿದ್ದರಿಂದ ಈ ರೀತಿ ಆಯಿತು ಎಂದು ಬಿಂಬಿಸುವುದು, ಅದೇ ಹೆಂಡತಿಯರನ್ನು ಕಳೆದುಕೊಂಡ ವಿದುರರನ್ನು ಎಲ್ಲಾ ಶುಭ ಕಾರ್ಯಕ್ರಮಗಳಿಗೂ ಆಕ್ಷೇಪಿಸದೆ ಆಹ್ವಾನಿಸುವುದು ಇತ್ಯಾದಿ, 'ಮೂಢನಂಬಿಕೆಗಳು' ಭಾರತದಲ್ಲಿ ತಲುಪಿರುವ 'Height of stupidity' ಎಂದು ಹೇಳಲೇಬೇಕಿದೆ. ಭಾರತದಲ್ಲಿ ಮೂಢನಂಬಿಕೆ ಎಷ್ಟು ವ್ಯಾಪಕವಾಗಿದೆಯೆಂದರೆ 'ಕುಡಿಯುವ ಶುದ್ಧ ಹಾಲನ್ನು ಬೀದಿಗೆ ಚೆಲ್ಲಿ, ಗೋವಿನ ಮೂತ್ರವನ್ನು ಕುಡಿಯಲು ಪ್ರೇರೇಪಿಸುತ್ತದೆ'

ಮನುಷ್ಯನ ಮಲವನ್ನು ಮನುಷ್ಯನಿಗೆ (ಅಸ್ಪೃಶ್ಯರಿಗೆ) ತಿನ್ನಿಸಿರುವ ಪ್ರಕರಣ ಕರ್ನಾಟಕದಲ್ಲಿ ಜರುಗಿದೆ. ಮಧ್ಯಪ್ರದೇಶದಲ್ಲಿ ಬುಡಕಟ್ಟು ಜನಾಂಗದ ಯುವಕನ ಮುಖದ ಮೇಲೆ ಮೂತ್ರ ವಿಸರ್ಜಿಸಿದ ಪ್ರಕರಣ ಜರುಗಿದೆ. ತಮಿಳುನಾಡಿನಲ್ಲಿ ವಾಚು ಧರಿಸಿ ಬಂದ ಯುವಕನ ಮಣಿಕಟ್ಟನ್ನು ಕತ್ತರಿಸಿದ ಪ್ರಸಂಗವಿದೆ. ನಗರ ಪ್ರದೇಶದಲ್ಲಿ ಈಗಲೂ ಪರಿಶಿಷ್ಟ ಸಮುದಾಯದವರಿಗೆ ಜಾತಿಯ ಹೆಸರಲ್ಲಿ ಮನೆಯನ್ನು ಬಾಡಿಗೆ ನೀಡಲು ನಿರಾಕರಿಸಲಾಗುತ್ತಿದೆ. ಗುಜರಾತ್, ಉತ್ತರಪ್ರದೇಶ, ಮಧ್ಯಪ್ರದೇಶ, ತಮಿಳುನಾಡು, ಬಿಹಾರದಂತಹ ರಾಜ್ಯಗಳಲ್ಲಿ ಅಸ್ಪೃಶ್ಯತೆಯ ಕರಾಳಮುಖಗಳು ದಿನದಿಂದ ದಿನಕ್ಕೆ ವ್ಯಾಪಕವಾಗುತ್ತಿವೆ. ಧರ್ಮದ ಹೆಸರಿನಲ್ಲಿ ಅಲ್ಪಸಂಖ್ಯಾತರನ್ನು ನಿರ್ದಿಷ್ಟವಾಗಿ ಗುರಿಯಾಗಿಸಿಕೊಂಡು ಹಿಂಸೆ ನೀಡಲಾಗುತ್ತಿದೆ. ಕರ್ನಾಟಕದಲ್ಲಿ ಇತ್ತೀಚೆಗೆ ಜರುಗಿದ ಹಿಜಾಬ್, ಹಲಾಲ್, ಅಜಾನ್ ಮುಂತಾದ ಪ್ರಕರಣಗಳೇ ಇದಕ್ಕೆ ಸಾಕ್ಷಿ. ಗುಜರಾತ್‌ನ ಹಾಸ್ಟೆಲ್‌ವೊಂದರಲ್ಲಿ ನಮಾಜ್ ಮಾಡಿದ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆದಿದೆ. ದೆಹಲಿಯ ರಸ್ತೆಯಲ್ಲಿ ನಮಾಜ್ ಮಾಡಿದ ವ್ಯಕ್ತಿಯನ್ನು ಪೊಲೀಸರು ಬೂಟಿನಿಂದ ಒದ್ದಿದ್ದಾರೆ.

ವೇದ, ಉಪನಿಷದ್, ರಾಮ-ಕೃಷ್ಣರ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಕಲಿಯುವ ಹಕ್ಕು ಇರಲಿಲ್ಲ. ಹೆಣ್ಣು ಮಕ್ಕಳು ಇರುವುದು ಮಕ್ಕಳ ಹಡೆಯಲಿಕ್ಕೆ, ಮನೆ ಚಾಕರಿ ಮತ್ತು ಗಂಡಸರ ಸೇವೆಯನ್ನು ಮಾಡುವುದಕ್ಕೆ ಸೀಮಿತ ಎಂಬ ಅಭಿಪ್ರಾಯ ಮನುವಾದದಲ್ಲಿತ್ತು. ಇದೇ ಮನುಸ್ಮೃತಿ ಅಸ್ಪೃಶ್ಯ ಹೆಣ್ಣು ಮಕ್ಕಳನ್ನು 'ದೇವದಾಸಿ' 'ಒಕುಳಿ' ಹೆಸರಲ್ಲಿ ಭೋಗದ ವಸ್ತುಗಳನ್ನಾಗಿ ಮಾಡಿಕೊಂಡಿತ್ತು. ಆದರೆ, ಅಂಬೇಡ್ಕರ್ ಈ ಎಲ್ಲಾ ವ್ಯಾಧಿಗಳಿಗೆ ಪರಿಹಾರ ಕಲ್ಪಿಸಿದರು. ಅದೂ ತಮ್ಮ ಅದ್ಭುತ ಜ್ಞಾನದ ಆಧಾರದ ಮೇಲೆ ಬರೆದ ಸಂವಿಧಾನದ ಮೂಲಕ. ಹಾಗಾಗಿ, ಅಂಬೇಡ್ಕರರ ಈ ಕೊಡುಗೆಗಳನ್ನು ಮರೆಯಲು ಸಾಧ್ಯವೆ?

- ಯಾವುದೇ ಹೋರಾಟವಿಲ್ಲದೆ ಪ್ರತಿಯೊಬ್ಬ ಭಾರತೀಯನಿಗೂ ಮತದಾನದ ಹಕ್ಕು ಕೊಡಿಸಿದ್ದಾರೆ. ಅದುವೆ 'One man-one vote-one-value) ಅದೇ ದಕ್ಷಿಣ ಆಫ್ರಿಕಾದಲ್ಲಿ ಅಲ್ಲಿನ ಕರಿಯರಿಗೆ ಮತದಾನದ ಹಕ್ಕು ಕೊಡಿಸಲು ನೆಲ್ಸನ್ ಮಂಡೇಲಾರವರು ಸತತ 30 ವರ್ಷಗಳ ಕಾಲ ಹೋರಾಟ ನಡೆಸಿದ್ದಾರೆ.
- ಭಾರತದ ಸ್ವಾತಂತ್ರ್ಯ ಚಳವಳಿ ವಿದೇಶಿಯರ 200 ವರ್ಷಗಳ ಆಳ್ವಿಕೆ ವಿರುದ್ಧ. ಆದರೆ ಬಾಬಾಸಾಹೇಬರ ಹೋರಾಟ ಮತ್ತು ಚಳವಳಿ 2000 ವರ್ಷಗಳ ಭಾರತೀಯ ಗುಲಾಮಗಿರಿ ನೀತಿಯ ವಿರುದ್ಧ ಇತ್ತು. ಅಂಬೇಡ್ಕರ್‌ರವರ ಚಳವಳಿ ಸ್ವತಂತ್ರ ಭಾರತದಲ್ಲಿ ಅಸ್ಪೃಶ್ಯರ ಮತ್ತು ಶೋಷಿತ ಸಮುದಾಯಗಳ ಸ್ಥಿತಿ-ಗತಿ, ಪಾತ್ರದ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳುವುದಾಗಿತ್ತು. ಇದರಲ್ಲಿ ಎಲ್ಲಾ ಧರ್ಮೀಯರ, ಜಾತಿಯವರ, ಭಾಷಿಗರ ಭವಿಷ್ಯದ ಪ್ರಶ್ನೆಯಾಗಿತ್ತು." ಇದರಿಂದಾಗಿ, ಇಂದು ಎಲ್ಲಾ ಭಾರತೀಯರು ಸರ್ವ ಸ್ವತಂತ್ರರಾಗಿದ್ದಾರೆ.
- ಆದರೆ, ಅಂಬೇಡ್ಕರ್ ಬಯಸಿದ್ದ ಸ್ವಾತಂತ್ರ್ಯವೆಂದರೆ, ಭಾರತದಲ್ಲಿ ಮನುಷ್ಯನ ಮನಸ್ಸಿನ ಸ್ವಾತಂತ್ರ್ಯ ಅರ್ಥಾತ್ ಮಾನಸಿಕ ಸದೃಢತೆ. ಯಾರ ಮನಸ್ಸು ಸ್ವತಂತ್ರವಾಗಿರುವುದಿಲ್ಲವೋ ಅಥವಾ ಗುಲಾಮಗಿರಿ ಅನುಭವಿಸುತ್ತಾನೋ ಆತ ಅರಮನೆಯಲ್ಲಿದ್ದರೂ, ಜೈಲಿನಲ್ಲಿದ್ದರೂ ಒಂದೇ ಎನ್ನುವ ಅಭಿಪ್ರಾಯ ಅಂಬೇಡ್ಕರ್‌ಗಿತ್ತು. ಅವರ ಅಭಿಪ್ರಾಯದ ಪ್ರಕಾರ" ಮಾನಸಿಕ ಸ್ವಾತಂತ್ರ್ಯ ಒಬ್ಬರ ಅಸ್ತಿತ್ವದ ಪುರಾವೆ, ಮನುಷ್ಯ ಸನ್ನಿವೇಶಗಳ ಗುಲಾಮನಾಗಬಾರದು. ಸನ್ನಿವೇಶಗಳನ್ನು ತನ್ನ ಪರವಾಗಿ ಬದಲಾಯಿಸಲು ಶ್ರಮಿಸಬೇಕು. ಅಂತಹವನು 'ಮುಕ್ತ' ಮನುಷ್ಯನಾಗುತ್ತಾನೆ. ಕೇವಲ ರಾಜಕೀಯ ಲಾಭಕ್ಕಾಗಿ ಸ್ವಾತಂತ್ರ್ಯವಿರಬಾರದು. ಪ್ರತಿಯೊಬ್ಬ ನಾಗರಿಕನು ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳನ್ನು ಹೊಂದಿರಬೇಕು. ಯಾವುದೇ ಪದ್ಧತಿ, ರೂಢಿ, ಅರ್ಥಹೀನ ಆಚರಣೆ, ಮೂಢನಂಬಿಕೆಗಳು, ಗುಲಾಮಗಿರಿ ಸಂಕೇತ. ಸಮಾನತೆ ಇಲ್ಲದ ಸ್ವಾತಂತ್ರ್ಯ ವ್ಯರ್ಥ ಎನ್ನುವ ಸ್ಪಷ್ಟ ಅಭಿಪ್ರಾಯ ಅಂಬೇಡ್ಕರ್ ಅವರಿಗಿತ್ತು.


ದಿವ್ಯೌಷಧವಿದೆ ; ಆದರೆ ರೋಗ ವಾಸಿಯಾಗುತ್ತಿಲ್ಲ.

ಬಾಬಾ ಸಾಹೇಬರೆಂಬ ವಿಶ್ವಜ್ಞಾನಿ 'ಸಾಮಾಜಿಕ ವೈದ್ಯ'ರಾಗಿ ಭಾರತದ ತಳಸಮುದಾಯಗಳಿಗೆ, ಶೋಷಿತರಿಗೆ ಎಲ್ಲಾ ರೀತಿಯ ಸಾಮಾಜಿಕ ರೋಗ-ರುಜಿನಗಳಿಗೆ (ಅಸ್ಪೃಶ್ಯತೆ, ಸಾಮಾಜಿಕ ಅಸಮಾನತೆ, ತಾರತಮ್ಯ, ಲಿಂಗ ಭೇದ, ಬಹಿಷ್ಕಾರ, ಬಡತನ ಇತ್ಯಾದಿ) ಸಂವಿಧಾನವೆಂಬ 'ದಿವ್ಯೌಷಧ'ವನ್ನು ನೀಡಿದ್ದಾರೆ, ಸಂವಿಧಾನ ಜಾರಿಯಾಗಿ ಎಪ್ಪತ್ತೈದು ವರ್ಷಗಳು ಕಳೆದರೂ, ಬಾಬಾ ಸಾಹೇಬರು ಹೇಳಿದ ರೀತಿಯಲ್ಲಿ ಮತ್ತು ಪ್ರಮಾಣದಲ್ಲಿ ಈ ದಿವ್ಯೌಷಧವನ್ನು ಸೇವಿಸುವ ಸ್ಥಿತಿಯಲ್ಲಿ ಭಾರತದ ಈ ಸಾಮಾಜಿಕ ರೋಗಿಗಳು ತಯಾರಿಲ್ಲ. ಅದನ್ನು ಬಿಟ್ಟು ಯಾರ್‍ಯಾರೋ ಹೇಳಿದ 'ನಕಲಿ ಔಷಧಿ'ಗಳನ್ನು ಸೇವಿಸುವ ಮೂಲಕ ಈ ಸಾಮಾಜಿಕ ರೋಗ-ರುಜಿನಗಳು ಇನ್ನೂ ತಾಂಡವವಾಡುವ ಜೊತೆಗೆ ದಮನಿತರು ಮನುವಾದದ ವಿರುದ್ಧ ಪ್ರತಿರೋಧ ಒಡ್ಡಲು ಸಾಧ್ಯವಾಗದೇ ಪರದಾಡುತ್ತಿದ್ದಾರೆ.

ಈಗಲೂ ಈ ದಮನಿತರು ಹರಕೆ ರೂಪದಲ್ಲಿ ತಲೆಕೂದಲು ಅರ್ಪಿಸುವುದು, ದೇವಸ್ಥಾನಗಳಲ್ಲಿ ನೀಡುವ ಪ್ರಸಾದವನ್ನು 'ಶ್ರೇಷ್ಠ'ವೆಂದು ಸ್ವೀಕರಿಸಿ ಸೇವಿಸುವುದು. ಹರಕೆ, ಪೂಜೆ, ನೆಪದಲ್ಲಿ ಲೆಕ್ಕವಿದಲ್ಲದಷ್ಟು ಹಣ, ಬೆಳ್ಳಿ, ಚಿನ್ನ, ಧಾನ್ಯಗಳನ್ನು ದೇವಸ್ಥಾನಗಳಿಗೆ ನೀಡುವುದು ಮುಂದುವರೆದಿದೆ. ಮದುವೆ, ಗೃಹ ಪ್ರವೇಶ ತಿಥಿ, ಸೈಟ್ ಖರೀದಿ, ನಾಮಕರಣ ಇನ್ನಿತರ ಗೃಹ ಕಾರ್ಯಕ್ರಮಗಳಿಗೆ ಪುರೋಹಿತರು ಹೇಳಿದಂತೆ ಕೇಳುವುದು ಮತ್ತು ಖರ್ಚು ಮಾಡುವುದು, ವಾಹನ ಖರೀದಿಯಿಂದಿಡಿದು ಕೆಲಸ ಸಿಗುವವರೆಗೂ ಮತ್ತು ಪುರೋಹಿತರು ಹೇಳಿದಂತೆ, ಕೇಳಿದಂತೆ ಖರ್ಚು ಮಾಡುವುದು, ಧಾರ್ಮಿಕ ಮೂಲಭೂತವಾದವನ್ನು ಗಟ್ಟಿಗೊಳಿಸಲು ಒಳ ಮೀಸಲಾತಿ ಬೇಡಿಕೆ, ಹೊಟ್ಟೆ ತುಂಬಿಸಲು ಇರುವ ಪ್ರೋಟೀನ್‌ಯುಕ್ತ ಆಹಾರಗಳಾದ ಹಾಲು, ಮೊಸರು, ಮೊಟ್ಟೆ, ನಿಂಬೆ, ತೆಂಗಿನಕಾಯಿ, ತುಪ್ಪ, ಎಳನೀರು ಮುಂತಾದವುಗಳನ್ನು ವ್ಯಯ ಮಾಡುವುದು, ಬೀದಿಯಲ್ಲಿ ಬಿಸಾಡುವುದು ಇತ್ಯಾದಿಗಳನ್ನು ಯಾವುದೇ ಎಗ್ಗಿಲ್ಲದೇ ಮಾಡುತ್ತಿದ್ದಾರೆ.

ಇದನ್ನೆಲ್ಲಾ ನೋಡಿಯೇ ಜ್ಯೋತಿ-ಬಾಫುಲೆಯವರು "ಜನ್ಮ ಕುಂಡಲಿ ದೋಷ ಇದೆ ಅನ್ನೋರು ಅವರೆ, ಪರಿಹಾರವನ್ನು ಹೇಳೋದು ಅವರೇ. ಇದು ಅವರ ಜ್ಞಾನ ಅಲ್ಲ, ಬದಲಾಗಿ ಇದು ಜನರ ಅಜ್ಞಾನ" ಎಂದು. ಇನ್ನೂ ಮುಂದುವರೆದು ಬಾಬಾ ಸಾಹೇಬರು ಹೇಳುತ್ತಾರೆ. ಗುಲಾಮರು ಗುಲಾಮಗಿರಿಯನ್ನು ಆನಂದಿಸುತ್ತಾರೆ (slaves enjoys their slavery) ಅದು ಈಗಿನ ಭಾರತದಲ್ಲಿ ನಿಜವಾಗಿದೆ. ಅಂಬೇಡ್ಕರ್‌ರವರನ್ನು ಹೃದಯಕ್ಕೆ, ಮನಸ್ಸಿಗೆ ತೆಗೆದುಕೊಳ್ಳಬೇಕಾದ ಜವಾಬ್ದಾರಿಯಾಗಿರುವವರೇ ಗುಲಾಮಗಿರಿಯನ್ನು ಆನಂದಿಸುತ್ತಿರುವಾಗ, ಪ್ರಸ್ತುತದ ರೋಗ-ರುಜಿನಗಳಿಗೆ ಅಂತ್ಯವಾಡಲು ಸಾಧ್ಯವೇ?

ದಿನಾಂಕ:04.04.1906ರಂದು ಅಂಬೇಡ್ಕರ್‌ರವರು ರಮಾಬಾಯಿಯವರನ್ನು ಮದುವೆಯಾಗಿ ವೈವಾಹಿಕ ಜೀವನಕ್ಕೆ ಅಡಿಯಿಟ್ಟ ದಿನ. ಬಾಬಾ ಸಾಹೇಬರ ಜೀವನದಲ್ಲಿ ಅವರ ಎಲ್ಲಾ ಸಾಧನೆಗೂ ಹೆಗಲು ಕೊಟ್ಟು ಉತ್ತಮ ಬಾಳಸಂಗಾತಿಯಾಗಿ, ಸ್ನೇಹಿತೆಯಾಗಿ, ತನ್ನ ಬದುಕನ್ನು ಧಾರೆಯೆರೆದವರು ಶ್ರೀಮತಿ ರಮಾಬಾಯಿಯವರು. ಅಂಬೇಡ್ಕರ್ ಬದುಕಿನ ಮಜಲಿಗೆ ಬಂದ ತಿಂಗಳೂ ಕೂಡ 'ಏಪ್ರಿಲ್'. ಅಂಬೇಡ್ಕರ್ ಅವರ ಹುಟ್ಟುಹಬ್ಬದ ನೆನಪಿನಲ್ಲಿ ಈ ಎರಡೂ ಘಟನೆಗಳು ಹಾಸುಹೊಕ್ಕಾಗಿವೆ.



ವಾರಭವಿಷ್ಯ

14.04.2024 ರಿಂದ 20.4.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೇಷ, ಚಂದ್ರ-ಮಿಥುನ, ಕಟಕ, ಸಿಂಹ, ಕುಜ-ಕುಂಭ, ಬುಧ-ಮೀನ, ಗುರು-ಮೇಷ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
೯ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನಿಮ್ಮ ಆರೋಗ್ಯದ ಬಗ್ಗೆ ಹಾಗೂ ಮಿತಿ ಮೀರಿದ ಖರ್ಚುಗಳ ಬಗ್ಗೆ ಗಮನಹರಿಸಿ. ಇದು ನಿಮಗೆ ಗಡಿಬಿಡಿಯ ವಾರ. ವೈಯಕ್ತಿಕ ಸಾಹಸಗಳು ಎದುರಾಗುವುದು. ಧೈರ್ಯಶೀಲರಾದ ನೀವು ಎಲ್ಲವನ್ನೂ ಸಮರ್ಥವಾಗಿ ಎದುರಿಸಿ ಮೆಚ್ಚುಗೆಯನ್ನು ಗಳಿಸುವಿರಿ. ಗೃಹಲಕ್ಷ್ಮೀಯ ಮನ ಗೆಲ್ಲಲು ಪ್ರಯತ್ನಿಸಿ. ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ. ದುಶ್ಚಟಗಳಿಂದ ದೂರವಿರಿ.

ಶ್ರೀ ಕಾರ್ತಿಕೇಯ ಸ್ತುತಿ. ಶುಭ ಸಂಖ್ಯೆ-1.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಹೆಚ್ಚಿನ ಪ್ರತಿಫಲ ಬೇಕೆಂದರೆ ಹೆಚ್ಚಿನ ಪರಿಶ್ರಮಪಡಬೇಕಾಗುತ್ತದೆ. ನೌಕರಿ ಸ್ಥಳದಲ್ಲಿ ಜವಾಬ್ದಾರಿ ಹಾಗೂ ಒತ್ತಡಗಳು ಹೆಚ್ಚುವುದರಿಂದ ಮಾನಸಿಕ ಕಿರಿಕಿರಿ. ಕೌಟುಂಬಿಕ ಸಮಸ್ಯೆಗಳನ್ನು ಮನೆಯಲ್ಲೇ ಪರಿಹರಿಸಿಕೊಳ್ಳಿ. ಗೃಹ ನಿರ್ಮಾಣ ವಿಷಯದಲ್ಲಿ ಅಧಿಕ ತಿರುಗಾಟಗಳು ಉಂಟಾಗುವುವು. ಶತ್ರುಗಳ ನಡೆ ತಿಳಿಯದಾಗುವುದು. ಅನಾರೋಗ್ಯ ಕಾಡಬಹುದು.

ಶ್ರೀ ಲಕ್ಷ್ಮೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-8



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಬಹುಲಾಭ. ಹಣಕಾಸಿನ ಪರಿಸ್ಥಿತಿ ನಿಯಂತ್ರಣದಲ್ಲಿರುವುದು. ಮನಃಶಾಂತಿ ಬೇಕೆನಿಸಿದರೆ ಕೆಲವು ವೈಯಕ್ತಿಕ ವಿಷಯಗಳಲ್ಲಿ ರಾಜೀ ಸೂತ್ರವನ್ನು ಅನುಸರಿಸಿ. ಸತಿ-ಪತಿಯರಲ್ಲಿ ಅನ್ಯೋನ್ಯತೆ ಕಾಣುವುದು. ಸಹೋದರರ ಬೆಂಬಲ ಬಯಸಿದರೆ ತಪ್ಪಿಲ್ಲ. ನೌಕರಿಯಲ್ಲಿರುವವರಿಗೆ ಉನ್ನತ ಸ್ಥಾನಕ್ಕೆ ಬಡ್ತಿ ದೊರೆಯಬಹುದು.

ಶ್ರೀ ವೆಂಕಟೇಶನಿಗೆ ತುಳಸಿ ಸಮರ್ಪಣೆ. ಶುಭ ಸಂಖ್ಯೆ-3



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಈ ವಾರ ಆದಾಯ-ವೆಚ್ಚಗಳು ಸಮನಾಗಿ ನಡೆಯುವುದು. ಆತುರದಿಂದ ಮಾಡಿದ ಕೆಲಸದಿಂದ ಎಡವಟ್ಟುಗಳು ಉಂಟಾಗುವುದು. ಸರ್ಕಾರಿ ಅಧಿಕಾರಿಗಳ ಭೇಟಿಯಿಂದ ಸಮಸ್ಯೆಗೆ ಪರಿಹಾರ ದೊರಕುವುದು. ಸಹೋದರರಲ್ಲಿ ಭಿನ್ನಾಭಿಪ್ರಾಯಗಳು ಉಂಟಾದೀತು. ಅಷ್ಟಮ ಶನಿ ಸಂಚಾರವಿದ್ದು, ಸಣ್ಣಪುಟ್ಟ ಅಪಘಾತಗಳು ಸಂಭವಿಸಬಹುದು. ಜಾಗೃತರಾಗಿ ವಾಹನ ಡ್ರೈವ್ ಮಾಡಿ.

ಶ್ರೀ ದೇವೀಚರಣ ಕಮಲಗಳಲ್ಲಿ ಭಕ್ತಿಯನ್ನಿಡಿ. ಶುಭ ಸಂಖ್ಯೆ-4.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಮನೆಯಲ್ಲಿ ಸಂತೋಷ, ಸಡಗರದ ವಾತಾವರಣ. ಮಿತ್ರರ ಸಂಪರ್ಕ ಹಾಗೂ ಒಡನಾಟಗಳಿಂದ ಇಷ್ಟಾರ್ಥ ಸಿದ್ಧಿಯಾಗಲಿದೆ. ಶುಭ ಕಾರ್ಯಗಳ ತಯಾರಿಯಲ್ಲಿ ಮನೆ ಮಂದಿ ಬ್ಯುಸಿಯಾಗುವರು. ವಕೀಲಿ ವೃತ್ತಿಯವರಿಗೆ ಲಾಭ ತರುವ ಕಕ್ಷಿಗಾರರು ದೊರೆಯುವರು. ಹಲವರಿಗೆ ಬಾಳ ಸಂಗಾತಿ ದೊರೆತು 'ಮಧುಚಂದ್ರ' ಪ್ರಯಾಣ. ಉಷ್ಣ ಜ್ವರಾದಿಗಳು ಕಾಡಬಹುದು.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ-9



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಮನೆಯಲ್ಲೂ, ಸಾಮಾಜಿಕವಾಗಿಯೂ ಸವಿಮಾತುಗಳನ್ನಾಡುವುದರಿಂದ ಕಲಹ ಆಗದು. ಅಷ್ಟಮ ಗುರು ನಿಮ್ಮ ಆತ್ಮ ವಿಶ್ವಾಸವನ್ನು ಕುಗ್ಗಿಸುವರು. ಕಾರ್ಯನಿಮಿತ್ತ ಪ್ರಯಾಣಗಳು ಉತ್ತಮ ಫಲಿತಾಂಶವನ್ನು ನೀಡಲಿದೆ. ಚತುರ ಗುಣವುಳ್ಳ ನೀವು ನನೆಗುದಿಗೆ ಬಿದ್ದ ಕಾರ್ಯವನ್ನು ಕೈಗೆತ್ತಿಕೊಂಡು ವಿಜಯವನ್ನು ಪಡೆಯುವಿರಿ. ಸರ್ಕಾರಿ ನೌಕರರು ವಾಮಮಾರ್ಗದ ಹಣಕ್ಕೆ ಆಸೆ ಪಟ್ಟು ತೊಂದರೆಗೆ ಗುರಿಯಾಗುವರು.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-5



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಗುರು ಕೃಪೆಯಿಂದ ಮಾನಸಿಕ ಒತ್ತಡದಿಂದ ಹೊರ ಬರುತ್ತೀರಾ. ಅನಿಶ್ಚಿತತೆಗಳು ದೂರವಾಗುವುದು. ನಿಮ್ಮ ಸಮಯ ಪ್ರಜ್ಞೆಯಿಂದ ಜಟಿಲ ವಿಷಯಗಳನ್ನು ಬಗೆಹರಿಸಿಕೊಳ್ಳಲು ಉತ್ತಮ ವಾರವಾಗಿದೆ. ಶ್ರೀಮತಿಯ ಸಹವಾಸ, ಸೌಖ್ಯ, ಸಂತೋಷಗಳ ಪ್ರಾಪ್ತಿ. ಹಿರಿಯ ಅಧಿಕಾರಿಗಳಿಂದ ಮೆಚ್ಚುಗೆ ದೊರೆಯುವುದು. ಪೂರ್ವದಲ್ಲಿ ಮಾಡಿದ್ದ ಹೂಡಿಕೆಗಳು ಲಾಭವನ್ನು ತರುವುದು.

ಶ್ರೀ ಜಗನ್ಮಾತೆ ಪಾರ್ವತಿ ದರ್ಶನ. ಶುಭ ಸಂಖ್ಯೆ-6



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದಾರಂಭಕ್ಕೆ ಧನಲಾಭ. ಹೋಟೆಲ್, ಕೆಟರಿಂಗ್ ವೃತ್ತಿಯವರಿಗೆ ದೊಡ್ಡ ಸಮಾರಂಭಗಳ ಆರ್ಡರ್ ದೊರೆಯುವುದು. ಸತಿ-ಸುತರು ಎದುರು ಮಾತನ್ನಾಡುವುದರಿಂದ ಬೇಸರ. ಶತ್ರುಗಳ ಭಯ ಕಾಡಿಸುತ್ತದೆ. ಅನ್ಯ ನಾರಿಯರನ್ನು ಪೂಜ್ಯ ಭಾವನೆಯಿಂದ ಕಾಣಿ. ಅನ್ಯಥಾ ತೊಂದರೆಗಳಿಗೆ ಆಹ್ವಾನ ಕೊಟ್ಟಂತೆ. ಸಂಚಾರಿ ನಿಯಮ ಪಾಲಿಸಿ ದಂಡ ಕಟ್ಟುವುದನ್ನು ತಪ್ಪಿಸಿಕೊಳ್ಳಿ.

ಶ್ರೀ ನೃಸಿಂಹಸ್ವಾಮಿ ಉಪಾಸನೆ. ಶುಭ ಸಂಖ್ಯೆ-2.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಬಂದದ್ದನ್ನೆಲ್ಲಾ ಆಹ್ವಾನಿಸಿ ಉತ್ಸಾಹಶೀಲರಾಗಿ ಎದುರಿಸಿ, ದೈವ ಬಲ ಉಂಟು, ಸದುಪಯೋಗಪಡಿಸಿಕೊಳ್ಳಿ. ವ್ಯವಹಾರ ಉದ್ಯಮಗಳನ್ನು ಸಾಹಸದಿಂದ ಸ್ವೀಕರಿಸಿ, ಸೋಲಂತು ಇಲ್ಲ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ಜೀವನ ಸಂಗಾತಿ ದೊರೆಯಬಹುದು. ಹಲವರಿಗೆ ಸಂತಾನ ಪ್ರಾಪ್ತಿ. ವಾರಾಂತ್ಯಕ್ಕೆ ಮಿತ್ರ ಲಾಭ. ಸಂತೋಷ ಕೂಟಗಳು, ಕುಟುಂಬ ಸಮೇತ ಪುಣ್ಯಕ್ಷೇತ್ರ ಸಂದರ್ಶನದಿಂದ ಮನಃಶಾಂತಿ.

ಶ್ರೀ ಗುರುಸಾರ್ವಭೌಮರ ಸೇವೆ. ಶುಭ ಸಂಖ್ಯೆ-7.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭಕ್ಕೆ ಅನಿರೀಕ್ಷಿತ ವಿದ್ಯಮಾನಗಳು ನಡೆದು ಹರುಷದ ಫಲವನ್ನೇ ನೀಡಲಿದೆ. ಮೈಮನಸ್ಸು ಎರಡರಲ್ಲೂ ಸಂತಸದ ವಾತಾವರಣ ಇರುತ್ತದೆ. ಯಾವುದೇ ಆಸ್ತಿ ಖರೀದಿಯ ವಿಷಯದಲ್ಲಿ ನೀವು ತಾಳ್ಮೆಯಿಂದ ಮುಂದುವರೆಯಿರಿ. ಮೋಸ ಹೋಗುವ ಸಾಧ್ಯತೆ ಇರುತ್ತದೆ. ನೆರೆಹೊರೆಯಲ್ಲಿ ಸೌಹಾರ್ದತೆ ಕಾಯ್ದುಕೊಳ್ಳಿ. ಸಮಾಜ ವಿರೋಧಿ ಜನರಿಂದ ದೂರವಿರಿ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-2.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಪ್ತಾಹ ಪ್ರಾರಂಭಕ್ಕೆ ಸಂಪಾದನೆಗೆ ಹೊಸ ಮಾರ್ಗಗಳು ಗೋಚರಿಸುತ್ತವೆ. ಶ್ರೀಮತಿಯ ಸಹಕಾರವೂ ದೊರೆಯುವುದು. ಯಾವುದನ್ನೂ ಹತ್ತು ಬಾರಿ ಯೋಚಿಸಿ ಮುಂದುವರೆದರೆ ಉತ್ತಮ. ಹಿತ ಶತ್ರುಗಳು ತೊಂದರೆ ಕೊಡುತ್ತಾರೆ. ಕಫ ಸಂಬಂಧಿ ಅಸ್ವಸ್ಥತೆ ಕಾಡಬಹುದು. ಮಕ್ಕಳೊಂದಿಗೆ ಭಿನ್ನಾಭಿಪ್ರಾಯ ಉಂಟಾಗಿ ಮನಸ್ಸಿಗೆ ಕ್ಲೇಶ. ದೂರ ಪ್ರಯಾಣಗಳನ್ನು ಮುಂದೂಡಿ.

ಶ್ರೀ ಶಿವ ಸ್ತುತಿ. ಶುಭ ಸಂಖ್ಯೆ-4.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಹೊಸ ಆಸ್ತಿ ಖರೀದಿಯ ಪ್ರಯತ್ನ ಮುಂದುವರೆಯಲಿ. ಮನೆಯಲ್ಲಿ ತೋರಣ ಕಟ್ಟಿ ಸಂಭ್ರಮಿಸುವ ಸಮಯ ಮನೆ ಮಂದಿಯೊಂದಿಗೆ ಹಾಗೂ ಹೊರಗೆ ಅನ್ಯ ಸ್ತ್ರೀಯರೊಂದಿಗಿನ ಮನಸ್ತಾಪಗಳು ನಿವಾರಣೆ ಆಗುವುದು. ಕೋರ್ಟು ವ್ಯವಹಾರಗಳಲ್ಲಿ ಹಿನ್ನಡೆ ಉಂಟಾಗಬಹುದು. ಪತ್ನಿಯ ಆರೋಗ್ಯದಲ್ಲಿ ಏರು-ಪೇರು ಉಂಟಾಗುವ ಸಂಭವ. ತಾಳ್ಮೆಯ ಡ್ರೈವಿಂಗ್ ಎಲ್ಲರಿಗೂ ಒಳ್ಳೆಯದು.

ಶ್ರೀ ಶಿರಡಿ ಸಾಯಿ ದರ್ಶನ. ಶುಭ ಸಂಖ್ಯೆ-3

ದೇಶದ ರಕ್ಷಣೆ, ಅಭಿವೃದ್ಧಿ ಮೋದಿಯಿಂದ ಮಾತ್ರ ಸಾಧ್ಯ

ಸಮನ್ವಯ ಸಭೆಯಲ್ಲಿ ಮಾಜಿ ಸಚಿವ ಜಿ.ಟಿ.ದೇವೇಗೌಡರ ಅಭಿಪ್ರಾಯ

ತಿ.ನರಸೀಪುರ, ಏ.13– 21ನೇ ಶತಮಾನದಲ್ಲಿ ದೇಶ ಮುನ್ನಡೆಸುವ ಶಕ್ತಿ ಪ್ರಧಾನಿ ಮೋದಿ ಅವರಿಗೆ ಬಿಟ್ಟರೆ ಬೇರೆ ಯಾರಿಗೂ ಇಲ್ಲ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಆಶಯದಂತೆ 3ನೇ ಬಾರಿಗೆ ಮೋದಿ ಅವರನ್ನು ಪ್ರಧಾನಿ ಮಾಡುವುದೇ ನಮ್ಮ ಮೈತ್ರಿ ಪಕ್ಷದ ಗುರಿಯಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.


ಬನ್ನೂರಲ್ಲಿ ನಡೆದ ಜೆಡಿಎಸ್–ಬಿಜೆಪಿ ಕಾರ್ಯಕರ್ತರ ಸಮನ್ವಯ ಸಭೆಯನ್ನು ಮಾಜಿ ಸಚಿವ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ತಾಲೂಕಿನ ಬನ್ನೂರಿನ ಸರ್ವಮಂಗಳ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರ ಸಮನ್ವಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾಜಿ ಪ್ರಧಾನಿ ದೇವೇಗೌಡರು ದೇಶದ ಪ್ರಧಾನಿ ಆಗುವ ಅರ್ಹತೆ ಮೋದಿ ಅವರಿಗೆ ಬಿಟ್ಟರೆ ಬೇರೆ ಯಾರಿಗೂ ಇಲ್ಲ ಎಂದಿದ್ದಾರೆ. ದೇಶದ ಏಕತೆ, ಅಖಂಡತೆ, ರಕ್ಷಣೆ, ಅಭಿವೃದ್ಧಿ ಮೋದಿ ಅವರಿಂದ ಮಾತ್ರ ಸಾಧ್ಯ. ಹಾಗಾಗಿ 2024ಕ್ಕೆ ನರೇಂದ್ರ ಮೋದಿ ಅವರನ್ನು ಪ್ರಧಾನಿ ಮಾಡುವುದೇ ನಮ್ಮ ಎರಡೂ ಪಕ್ಷಗಳ ಗುರಿಯಾಗಿದ್ದು, ಈ ನಿಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡುತ್ತಿದ್ದೇವೆ ಎಂದರು.

ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಹೇಳಿದಂತೆ ಯಾವ ಗ್ಯಾರಂಟಿಯನ್ನು ಸಮರ್ಪಕವಾಗಿ ಜಾರಿಗೊಳಿಸಿಲ್ಲ. ಭೀಕರ ಬರಗಾಲದ ಈ ವೇಳೆ ಸರ್ಕಾರ ನೆರವಿಗೆ ಬಾರದ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದೊಂದೇ ರೈತರಿಗೆ ಉಳಿದಿರುವ ದಾರಿಯಾಗಿದ್ದು, ಇದು ಕಾಂಗ್ರೆಸ್ ಸರ್ಕಾರದ 6ನೇ ಗ್ಯಾರಂಟಿ ಎಂಬಂತಾಗಿದೆ ಎಂದು ಟೀಕಿಸಿದರು.

ರಾಜ್ಯಕ್ಕೆ ಹತ್ತು ಹಲವು ನಾಯಕರನ್ನು ನೀಡಿರುವ ಜೆಡಿಎಸ್ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಬಲಿಷ್ಠವಾಗಿದೆ. ಹಾಗಾಗಿ ಮೋದಿ ಅವರನ್ನು ಪ್ರಧಾನಿಯನ್ನಾಗಿ ಮಾಡಲು ಪಕ್ಷದ ಕಾರ್ಯಕರ್ತರು ಪಣ ತೊಡಬೇಕು. ಮೋದಿ ಪ್ರಧಾನಿಯಾದರೆ ನಮ್ಮ ಕುಮಾರಣ್ಣ ಕೇಂದ್ರ ಮಂತ್ರಿಯಾಗಲಿದ್ದಾರೆ ಎಂದು ಭವಿಷ್ಯ ನುಡಿದರು.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಒಂದೇ ಒಂದು ಸ್ಥಾನ ಗೆಲ್ಲಲು ಸಾಧ್ಯವಾಗದಂತೆ ಮೈತ್ರಿಯೊಂದಿಗೆ ಚುನಾವಣೆ ಎದುರಿಸಲಿದ್ದೇವೆ. ಈ ಮೈತ್ರಿ ತಾಪಂ ಹಾಗೂ ಗ್ರಾಪಂ ಮಟ್ಟದವರೆಗೂ ಮುಂದುವರಿಯಲಿದೆ. ಹಾಗಾಗಿ ಈ ಮೈತ್ರಿಯಲ್ಲಿ ಕಾರ್ಯಕರ್ತರು ಅತ್ಯಂತ ಹುಮ್ಮಸ್ಸಿನಿಂದ ಪಕ್ಷ ಸಂಘಟನೆ ಕಾರ್ಯದಲ್ಲಿ ತೊಡಗಿಕೊಳ್ಳಬೇಕು ಎಂದು ಕರೆ ನೀಡಿದರು.

3 ಕ್ಷೇತ್ರದಲ್ಲೂ ಜೆಡಿಎಸ್ ಜಯಭೇರಿ...!

ಜೆಡಿಎಸ್ 3 ಕ್ಷೇತ್ರಗಳಲ್ಲೂ ಸೋಲಲಿದೆ ಎಂಬ ಕಾಂಗ್ರೆಸ್ ಹೇಳಿಕೆಗೆ ಉತ್ತರಿಸಿದ ಜಿಟಿಡಿ, ಕೋಲಾರ, ಹಾಸನ ಹಾಗೂ ಮಂಡ್ಯದಲ್ಲಿ ನಮ್ಮ ಅಭ್ಯರ್ಥಿಗಳು ಹೆಚ್ಚಿನಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯಲು ಹಗಲುಕನಸು ಕಾಣುತ್ತಿದೆ. ಅವರು ದೇಶದಲ್ಲಿ 200 ಕ್ಷೇತ್ರಗಳಲ್ಲಿ ಮಾತ್ರವೇ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದಾರೆ. 200 ಸ್ಥಾನಗಳಲ್ಲಿ ಅವರು ಪಡೆವ ಸ್ಥಾನಗಳಿಂದ ಸರ್ಕಾರ ರಚನೆ ಮಾಡಲು ಸಾಧ್ಯವೇ ಎಂದು ಲೇವಡಿ ಮಾಡಿದರು.

ಮೈತ್ರಿ ಕೂಟದ ಅಭ್ಯರ್ಥಿ ಬಾಲರಾಜು ಮಾತನಾಡಿ, ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನನಗೆ ಆಶೀರ್ವಾದ ಮಾಡಿದೆ. ಹಾಗಾಗಿ ನಿಮ್ಮೆಲ್ಲರ ಸೇವೆ ಮಾಡಲು ನನಗೊಂದು ಅವಕಾಶ ಮಾಡಿಕೊಡಿ. ನಿಮ್ಮ ಮನೆ ಮಗನಂತೆ ಕೆಲಸ ಮಾಡಿ ತೋರಿಸುತ್ತೇನೆ ಎಂದರು.

ಸಭೆಯಲ್ಲಿ ಬಿಜೆಪಿ ಮುಖಂಡ ಡಾ.ರೇವಣ್ಣ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಬಿಜೆಪಿ ಪ್ರಭಾರಿ ಎನ್.ವಿ.ಫಣೀಶ್, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಬಿಜೆಪಿ ಮಂಡಲ ಅಧ್ಯಕ್ಷ ಶಿವಕುಮಾರ್, ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಎನ್.ಎಂ.ರಾಮಚಂದ್ರ, ಹೆಳವರಹುಂಡಿ ಸಿದ್ದಪ್ಪ, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಾಮ್ರಾಟ್ ಸುಂದರೇಶನ್, ಟಿಎಪಿಎಂಎಸ್ ಅಧ್ಯಕ್ಷ ಸುಬ್ರಹ್ಮಣ್ಯ, ಸಂಚಾಲಕ ಕರೋಹಟ್ಟಿ ಬಸವರಾಜು, ಬನ್ನೂರು ಪುರಸಭೆ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಸೋಸಲೆ ಮಹಾಶಕ್ತಿ ಕಣದ ಅಧ್ಯಕ್ಷ ಪುಟ್ಟಸ್ವಾಮಿ, ಬಿ.ಎನ್. ಸುರೇಶ್, ಜೈಪಾಲ್ ಭರಣಿ, ಕಾರ್ ಮಲ್ಲಪ್ಪ, ಬೆನಕನಹಳ್ಳಿ ಪ್ರಭುಸ್ವಾಮಿ, ಪ್ರಭಾಕರ್, ಅತ್ತಹಳ್ಳಿ ಕುಮಾರಸ್ವಾಮಿ, ರವಿ, ಅಡುಗೆ ಕುಮಾರ್, ದಯಾನಂದ್ ಪಟೇಲ್, ವೈಎಸ್. ರಾಮಸ್ವಾಮಿ, ಕೊಡಗಳ್ಳಿ ಜವರಪ್ಪ, ಕರೋಹಟ್ಟಿ ಮಹದೇವ್ ಮತ್ತಿತರರಿದ್ದರು.

ಜೆಡಿಎಸ್ ಕ್ಷೇತ್ರದಲ್ಲಿ ಗಟ್ಟಿಯಾಗಿದೆ

ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜು ಅವರಿಗೆ ಕ್ಷೇತ್ರದ ಜನತೆ ಗೆಲುವು ತಂದು ಕೊಡುವ ಮೂಲಕ ಕಾಂಗ್ರೆಸ್‌ಗೆ ಜೆಡಿಎಸ್ ಕ್ಷೇತ್ರದಲ್ಲಿ ಗಟ್ಟಿಯಾಗಿದೆ ಎಂಬುದನ್ನು ತೋರಿಸಿಕೊಡಬೇಕಿದೆ. ಬಾಲರಾಜ್ ಅವರಿಗೆ ಹೆಚ್ಚಿನ ಮತ ನೀಡಿದರೆ ನಾವಿಬ್ಬರೂ ಸೇರಿ ಕ್ಷೇತ್ರದ ಅಭಿವೃದ್ಧಿ ಮಾಡುತ್ತೇವೆ. ಜೆಡಿಎಸ್ ಮಹಾಸ್ಥಾದ ಹೆಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನರೇಂದ್ರ ಮೋದಿ ಅವರನ್ನು 3ನೇ ಬಾರಿಗೆ ಪ್ರಧಾನಿ ಮಾಡಲು ಮೈತ್ರಿ ಮಾಡಿಕೊಂಡಿದ್ದಾರೆ. ಆದ್ದರಿಂದ ನಾವು ಮೈತ್ರಿ ಪಾಲನೆ ಮಾಡಬೇಕು.

- ಎಂ.ಅಶ್ವಿನ್ ಕುಮಾರ್,
ಮಾಜಿ ಶಾಸಕ.

ನನ್ನ ಗೆಲ್ಲಿಸಿದಂತೆ ಸ್ಟಾರ್ ಚಂದ್ರು ಗೆಲ್ಲಿಸಿ: ಡಿ.ರವಿಶಂಕರ್



ಭೇರ್ಯ, ಏ.13– ಕಳೆದ ವಿಧಾನಸಭಾ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿದಂತೆ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರನ್ನು ಗೆಲ್ಲಿಸಿ ಎಂದು ಶಾಸಕ ಡಿ.ರವಿಶಂಕರ್ ಮನವಿ ಮಾಡಿದರು.

ಇಲ್ಲಿಗೆ ಸಮೀಪದ ಅರಕೆರೆ ಶ್ರೀಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಕರಪತ್ರ ಬಿಡುಗಡೆಗೊಳಿಸಿ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾಂಗ್ರೆಸ್ ಜಾರಿಗೊಳಿಸಿರುವ ಐದು ಗ್ಯಾರಂಟಿಗಳು ಬರಗಾಲದಲ್ಲಿ ಜನರಿಗೆ ಆಸರೆಯಾಗಿವೆ ಎಂದರು.

ಬಳಿಕ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಸಾಲಿಗ್ರಾಮ ತಾಲೂಕಿನ ಮಿರ್ಲೆ ಹೋಬಳಿಯ ಮುಂಜನಹಳ್ಳಿ, ಭೇರ್ಯ, ಮೇಲೂರು, ದೇವಿತಂದ್ರೆ ಕರ್ಪೂರವಳ್ಳಿ, ಕಾಳಮ್ಮನಕೊಪ್ಪಲು, ಶಿಗೇವಾಳು, ಹರದನಹಳ್ಳಿ, ಸಾಲಿಗ್ರಾಮ ಸೇರಿದಂತೆ ವಿವಿಧ ಗ್ರಾಪಂ ವ್ಯಾಪ್ತಿಯಲ್ಲಿ ರೋಡ್ ಶೋ ಮೂಲಕ ಮತಯಾಚಿಸಿದರು.

ಬಳಿಕ ಮಾತನಾಡಿದ ಅವರು, ನಾನು ಹೊರಗಿನವನಲ್ಲ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕನ್ನಘಟ್ಟ ಗ್ರಾಮದವನು. ನಾನೊಬ್ಬ ಸಾಮಾನ್ಯ ರೈತನ ಮಗ ಸ್ವಂತ ಪರಿಶ್ರಮದಿಂದ ಮೇಲೆ ಬಂದಿದ್ದೇನೆ. ನನಗೆ ನನ್ನದೇ ಆದ ಉದ್ದಿಮೆ ಇದೆ. ಚುನಾವಣೆ ನನಗೆ ಹೊಸತಾದರೂ ರಾಜಕೀಯ ಹೊಸದಲ್ಲ. ಜಿಲ್ಲೆಯ ಜನರ ಸೇವೆಗಾಗಿ ರಾಜಕೀಯಕ್ಕೆ ಬಂದಿದ್ದೇನೆ. ಜಿಲ್ಲೆ ಮತ್ತು ಕೆ.ಆರ್.ನಗರ ಅಭಿವೃದ್ಧಿ ಬಗ್ಗೆ ನನಗೆ ನನ್ನದೇ ಆದ ಕನಸುಗಳಿವೆ. ಉತ್ತಮ ಸಂಸದೀಯ ಪಟುವಾಗಿ ಕೆಲಸ ಮಾಡಿ ಕೇಂದ್ರ ಸರ್ಕಾರದಿಂದ ಜಿಲ್ಲೆಯ ಅಭಿವೃದ್ಧಿಗೆ ಬರಬಹುದಾದ ಎಲ್ಲಾ ಸವಲತ್ತುಗಳನ್ನು ತಂದು ಕೆ.ಆರ್.ನಗರ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತೇನೆ. ಜಿಲ್ಲೆಯ ಮನೆ ಮಗನಾದ ನನಗೆ ಮತ ಹಾಕುವ ಮೂಲಕ ಕಾಂಗ್ರೆಸ್ ನಾಯಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಜನಪರ ಕಾರ್ಯಗಳಿಗೆ ಶಕ್ತಿ ತುಂಬಬೇಕು ಎಂದರು.

ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳಿಂದ ತೀವ್ರ ಬರಗಾಲದ ವೇಳೆ ಜನ ನೆಮ್ಮದಿಯಿಂದ ಜೀವನ ನಡೆಸಲು ಸಹಕಾರಿಯಾಗಿದೆ. ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ರೈತರ ಸಂಪೂರ್ಣ ಸಾಲ ಮನ್ನಾ, ಪ್ರತಿ ಕುಟುಂಬದ ಮಹಿಳೆಗೆ ವಾರ್ಷಿಕ 1 ಲಕ್ಷ ಸೇರಿದಂತೆ ನೀಡಿರುವ ಎಲ್ಲಾ ಗ್ಯಾರಂಟಿಗಳನ್ನೂ ಅನುಷ್ಠಾನಕ್ಕೆ ತರಲಿದೆ. ಗ್ಯಾರಂಟಿ ಯೋಜನೆಗಳನ್ನು ದೇಶಾದ್ಯಂತ ವಿಸ್ತರಿಸಲು ಸಾಲಿಗ್ರಾಮ ಮತ್ತು ಕೆ.ಆರ್.ನಗರ ಅವಳಿ ತಾಲೂಕಿನ ಜನತೆ ನನಗೆ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಕೆಪಿಸಿಸಿ ಸದಸ್ಯ ದೊಡ್ಡಸ್ವಾಮೇಗೌಡ, ಕಾಂಗ್ರೆಸ್ ಮುಖಂಡ ಸಿ.ಪಿ.ರಮೇಶ್, ಯೂತ್ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂದೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಉದಯ್ ಶಂಕರ್, ಎಂ.ಎಸ್.ಮಹದೇವ್, ಎಂ.ಜೆ. ರಮೇಶ್, ತಾಲೂಕು ಕಾಂಗ್ರೆಸ್ ವಕ್ತಾರ ಜಾಬೀರ್, ಜಿಪಂ ಮಾಜಿ ಸದಸ್ಯ ಸಿದ್ದಪ್ಪ, ಸಿಡಿಸಿ ಉಪಾಧ್ಯಕ್ಷೆ ಸುನೀತಾ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಗಡ್ಡಮಹೇಶ್, ನಿರ್ದೇಶಕಿ ಸರಿತಾ, ಪುರಸಭಾ ಸದಸ್ಯ ಕೋಳಿ ಪ್ರಕಾಶ್, ಮಾಜಿ ಅಧ್ಯಕ್ಷ ನರಸಿಂಹರಾಜು, ಕಾಂಗ್ರೆಸ್ ಮುಖಂಡರಾದ ವೈ.ಎಸ್. ಕುಮಾರ್, ನಾಗೇಂದ್ರ, ಹೆಚ್.ಪಿ. ಗೋಪಾಲ್, ಮಂಜು, ಬಿ.ಟಿ.ಮೋಹನ, ಗ್ರಾಪಂ ಸದಸ್ಯ ಮಂಜಪ್ಪ, ಬಿ.ಪಿ.ಪ್ರಕಾಶ್, ಮಹದೇವನಾಯಕ, ಸಾಲಿಗ್ರಾಮ ಮೀನುಗಾರರ ಸಂಘ ತಾಲೂಕು ಅಧ್ಯಕ್ಷ ಉದೇಶ್ ನಾಯಕ, ತಾಲೂಕು ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಲತಾ, ರತ್ನಮ್ಮ, ರಾಣಿ ಇತರರಿದ್ದರು.

ಗುಡ್ಡೆ ಮಾಂಸ ಹಂಚುವ ವಿಚಾರಕ್ಕೆ ಗುಂಪಿನಿಂದ ಹಲ್ಲೆಗೊಳಗಾಗಿದ್ದ

ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೇ ಸಾವು

ಬನ್ನೂರು, ಏ.13– ಯುಗಾದಿ ಹಬ್ಬದ ಮಾರನೇ ದಿನ ಗುಡ್ಡೆ ಮಾಂಸ ಹಂಚುವ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆಯಲ್ಲಿ ಗುಂಪಿನಿಂದ ಹಲ್ಲೆಗೊಳಗಾಗಿದ್ದ ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.



ಹನುಮನಾಳು ಗ್ರಾಮದ ನಿವಾಸಿ ಕೃಷ್ಣ ಸಾವನ್ನಪ್ಪಿದವರು.

ವಿವರ: ಗ್ರಾಮದ ರಘು ಎಂಬಾತ ಯುಗಾದಿ ಹಬ್ಬದ ಮಾರನೇ ದಿನ ಹೊಸತೊಡುಕು ಮಾಂಸಕ್ಕಾಗಿ ರಮೇಶ್ ಎಂಬುವರ ಬಳಿ ಹೆಸರು ನೋಂದಾಯಿಸಿಕೊಂಡಿದ್ದರು. ಗುಡ್ಡೆ ಮಾಂಸ ಹಂಚಿಕೆ ಮಾಡುತ್ತಿದ್ದ ವೇಳೆ ರಘು ಮಾಂಸ ಕೊಡುವಂತೆ ರಮೇಶ್‌ನನ್ನು ಕೇಳಿದಾಗ ಆತ ನಿನಗೆ ಮಾಂಸ ಕೊಡುವುದಿಲ್ಲ ಎಂದಿದ್ದಾನೆ. ಮತ್ತೆ ಮಾಂಸ ಕೇಳಿದಾಗ ಕೋಪಗೊಂಡ ರಮೇಶ್ ರಾಜು, ನಾಗೇಂದ್ರ, ಸುರೇಶ್, ಜೀವನ್ ಹಾಗೂ ರಾಜು ಇತರರು ರಘು ಮೇಲೆ ಹಲ್ಲೆ ನಡೆಸಿದ್ದಾರೆ. ನಂತರ ಮಾರನೇ ದಿನವೂ ಮತ್ತೆ ಗುಂಪು ಕಟ್ಟಿಕೊಂಡು ರಘು ಮನೆ ಮುಂದೆ ಗಲಾಟೆ ಮಾಡಿ ಆತನ ಮೇಲೆ ಹಲ್ಲೆ ನಡೆಸಿದ್ದಾರೆ. ಈ ವೇಳೆ ರಘು ಪತ್ನಿ ಕೋರಿಕೆ ಮೇರೆಗೆ ಅಲ್ಲಿಂದ ಎಲ್ಲರೂ ಹೊರಟಿದ್ದಾರೆ. ನಂತರ ಮನೆಗೆ ಬಂದು ಗಲಾಟೆ ಮಾಡಿದ ವಿಷಯ ತಿಳಿದ ರಘುವಿನ ಕೆಲ ಸಂಬಂಧಿಕರು ವಿಚಾರ ಮಾಡಲು ರಮೇಶ್ ಅವರ ಮಠಾರಕ್ಕೆ ಹೋದ ವೇಳೆ ಅದೇ ಗ್ರಾಮದ ರಾಜು, ನಾಗೇಂದ್ರ, ಸುರೇಶ್, ಜೀವನ್, ರಾಜು, ನಾಗರಾಜು, ರೇವಣ್ಣ, ಪುಟ್ಟಸ್ವಾಮಿ, ಗಿರೀಶ್, ಕಿರಣ್, ಶಿಲ್ಪ ಹಾಗೂ ರಮೇಶ್ ಸೇರಿದಂತೆ 12 ಮಂದಿ ನಾಗ, ಸುರೇಂದ್ರ, ರಘು ಹಾಗೂ ಕೃಷ್ಣ ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಈ ವೇಳೆ ತೀವ್ರ ಗಾಯಗೊಂಡ ಕೃಷ್ಣ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನಕ್ಕೆ ಅಪಾಯ

ಹುಣಸೂರು, ಏ.13– ರಾಜ್ಯ, ದೇಶದಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನಕ್ಕೆ ಅಪಾಯವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.



ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಸಭೆಯಲ್ಲಿ ಮಾತನಾಡಿದ ಅವರು, ಈ ದೇಶದ ಮಹಾ ಸುಳ್ಳುಗಾರ ನರೇಂದ್ರ ಮೋದಿ ಮೂರನೇ ಬಾರಿಗೆ ಪ್ರಧಾನ ಮಂತ್ರಿಯಾದರೆ ಈ ದೇಶಕ್ಕೆ ಉಳಿಗಾಲವಿಲ್ಲ. ಆದ್ದರಿಂದ ಬಡವರ, ಕಾರ್ಮಿಕರ, ರೈತರ, ಹಿಂದುಳಿದವರ ಹಿತ ಕಾಯುವ ಸಂವಿಧಾನ ಉಳಿಸಬೇಕಾದರೆ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿ ನಮ್ಮ ಕೈ ಬಲಪಡಿಸಿ ಎಂದರು.

ಭಾವನೆಗಳ ನಡುವೆ ಸಂಘರ್ಷವನ್ನುಂಟು ಮಾಡುವ ಬಿಜೆಪಿ ಬದುಕು ಕಟ್ಟಿಕೊಡಲಾಗದು. ಆರ್‌ಎಸ್‌ಎಸ್, ಜೆಡಿಎಸ್ ನಂತಹ ಸಿದ್ಧಾಂತವಿಲ್ಲದ ಮುಖವಾಡ ಧರಿಸಿ ರಾಜಕೀಯ ಮಾಡುತ್ತಿರುವ ಬಿಜೆಪಿಗೆ ಸಾಮಾಜಿಕ ನ್ಯಾಯ ನೀಡುವ ಸಂಸ್ಕೃತಿ ಇಲ್ಲ. ಅದೇನಿದ್ದರೂ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದರು.


ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಚುನಾವಣೆ ಹತ್ತಿರ ಬಂದಾಗ ಕರ್ನಾಟಕಕ್ಕೆ ಬರುವ ಮೋದಿ ಸಾಧನೆ ಶೂನ್ಯವಾಗಿದೆ. ನಮ್ಮ ಗ್ಯಾರಂಟಿಯನ್ನು ಟೀಕಿಸಿದ್ದ ಮೋದಿ ನಮ್ಮದೇ ಗ್ಯಾರಂಟಿಗಳ ಕಾಪಿ ಮಾಡಿ ಜಾಹೀರಾತು ನೀಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಅಂತ್ಯ ಕಾಲದಲ್ಲಿ ಕುಮಾರಸ್ವಾಮಿಗೆ ಅಧಿಕಾರ ಕೊಟ್ಟು ಬಿಜೆಪಿಗೆ ಅಳಿಮಯ್ಯನನ್ನು ಕಳುಹಿಸಿ ಕೊಟ್ಟರು. ಆದರೆ ಕುಮಾರಸ್ವಾಮಿ ಜೆಡಿಎಸ್ ಪಕ್ಷವನ್ನು ಬಿಜೆಪಿಗೆ ಮಾರಾಟಮಾಡಿ ಕಾರ್ಯಕರ್ತರನ್ನು ಬೀದಿಯಲ್ಲಿ ನಿಲ್ಲಿಸಿದ್ದಾರೆ. ಆದ್ದರಿಂದಲೇ ಜೆಡಿಎಸ್ ಪಕ್ಷ ಕೇವಲ ಮೂರು ಜಿಲ್ಲೆಯಲ್ಲಿ ಇದೆ ಎಂದು ಕುಟುಕಿದರು.

ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ಮೈಸೂರು ಮತ್ತು ಕೊಡಗು ಅಭ್ಯರ್ಥಿ ಲಕ್ಷ್ಮಣ ಅವರಿಗೆ 50 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿ, ಮಾಜಿ ಶಾಸಕ ಹೆ.ಪಿ.ಮಂಜುನಾಥ್ ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೋಳಿ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವಿರ್ ಸೇಠ್, ಮಾಜಿ ಶಾಸಕ ಡಾ.ಯತೀಂದ್ರ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಡಾ.ತಿಮ್ಮಯ್ಯ, ಪ್ರೇಮ್‌ಕುಮಾರ್ ಇನ್ನಿತರರಿದ್ದರು.

ಬೀರೇಗೌಡ ನಿಧನ



ಹನಗೋಡು, ಏ.13– ಇಲ್ಲಿಗೆ ಸಮೀಪದ ಕಚುವಿನಹಳ್ಳಿ ಗ್ರಾಮದ ನಿವಾಸಿ ಕುರಿ ಬೀರೇಗೌಡ(78) ಶನಿವಾರ ನಿಧನರಾದರು. ಮೃತರು ಪತ್ನಿ, ಮಾಜಿ ತಾಪಂ ಸದಸ್ಯೆ ಪುಷ್ಪಲತಾ ಸೇರಿದಂತೆ ಐವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸಂಜೆ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





